ಗೌರಿ ಲಂಕೇಶರ


ಲಂಕೇಶ್

ನವೆಂಬರ್ 8, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ

ಕೇಸ್ ಮುಚ್ಚಿಹಾಕಿದ್ದು ಹೇಗೆ?

ಮಗ ಪುಂಡ ಅಪ್ಪ ಭಂಡ





ತುಮಕೂರು ಧರ್ಮಪಾಲನ ಅಧರ್ಮದ ಕೆಲಸಗಳು


ಮೈಸೂರು: 40 ಉಗ್ರರಿಗಾಗಿ ತಲಾಶ್!

ಭೂಗತ ಜಗತ್ತಿನ ರಿವೇಂಜ್ ಕಿಲ್ಲಿಂಗ್ಸ್

ಕಿರಾಮನೂ ಅವನ ನಾಯಿಯೂ!

ಹಿಟ್ಟಿಲ್ಲದ ಹೊಟ್ಟೆ, ಜುಟ್ಟಿಲ್ಲದ ಮಲ್ಲಿಗೆ ಮತ್ತು ಮತಿಯಿಲ್ಲದ ಮನಮೋಹನಸಿಂಗ್

ಎರಡನೇ ಹಸಿರು ಕ್ರಾಂತಿಯ ಹರಿಕಾರರಾಗಲು ಹೊರಟಿರುವ ಪ್ರಧಾನಿ ಮನಮೋಹನಸಿಂಗರು ಹೇಳುತ್ತಿರುವುದೇನು? "ರೈತರೇ ಕೃಷಿಯಿಂದ ಹೊರಬನ್ನಿ." ಸಣ್ಣ ಮತ್ತು ಅತಿಸಣ್ಣ ರೈತರು ಇನ್ನು ಮುಂದೆ ಸಣ್ಣ ಹಿಡುವಳಿ ಇಟ್ಟುಕೊಂಡು ಬದುಕಲು ಆಗುವುದಿಲ್ಲ. ಆದ್ದರಿಂದ ಅವರು ಬದುಕಬೇಕೆಂದರೆ ಅವರನ್ನು ಉದ್ಧಾರ ಮಾಡಲೆಂದೇ ಕೃಷಿಯಲ್ಲಿ ಬಂಡವಾಳ ತೊಡಗಿಸಲು ಮುಂದೆ ಬರುತ್ತಿರುವ ದೊಡ್ಡ ಕಾರ್ಪೊರೇಟ್ ಉದ್ಯಮಿಗಳಿಗೆ ಜಮೀನನ್ನು ಮಾರಬೇಕು. ಮಾರಾದ ಮೇಲೆ ಈ ರೈತರ



ಪಾಡೇನಾಗಬೇಕು? ಅದರ ಬಗ್ಗೆ ಯೋಚಿಸಲು ಪ್ರಧಾನಿಗಳ ಬಳಿ ಸಮಯವಿಲ್ಲ. ಏಕೆಂದರೆ ಸಣ್ಣ ಹಾಗೂ ಅತಿ ಸಣ್ಣ ರೈತರು ಗ್ರಾಮೀಣ ಭಾರತದ ಶೇ.40ರಷ್ಟಾದರೂ ದೇಶದ ಜಿ.ಡಿ.ಪಿ.ಯ 0.4ರಷ್ಟೂ ಆಗುವುದಿಲ್ಲ. ಹೀಗಾಗಿ ಇಂತಹ ಚಿಲ್ಲರೆ ವಿಷಯಕ್ಕೆಲ್ಲಾ ಗಮನಕೊಟ್ಟರೆ ಭಾರತದ ಜಿ.ಡಿ.ಪಿ. ಬೆಳವಣಿಗೆಯ ದರ ಶೇ.10 ಆಗುವುದೆಂತು? ಆದ್ದರಿಂದ ಸುಲಭದ ಮಾರ್ಗವೆಂದರೆ ಅವರನ್ನು ಕೃಷಿಯಿಂದಲೇ ಹೊರ ಹಾಕಿಬಿಡುವುದು. ಇರಲಿ ಬಿಡಿ. ಒಂದು ಹಳ್ಳಿಗೆ ಒಂದು ಕುಟುಂಬ, ಒಂದು ನಾಡಿಗೆ ಒಂದು ಹಳ್ಳಿ, ಒಂದು ದೇಶಕ್ಕೆ ಒಂದು ರಾಜ್ಯ ಬಲಿ ಕೊಡಲೇ ಬೇಕಾದಂತೆ ಒಂದು ಶೈನಿಂಗ್ ಇಂಡಿಯಾಗೆ ಒಂದು ಬಡ ಭಾರತವನ್ನು ಬಲಿಗೊಡಲೇ ಬೇಕಾದೀತು. ಇಲ್ಲದಿದ್ದರೆ ಇಂಡಿಯಾ ಸೂಪರ್ ಪವರ್ ಆಗುವುದೆಂತು?

ಆದರೆ ಪ್ರಧಾನಿಗಳು ಕೃಷಿಯನ್ನು ಉದ್ಧಾರ ಮಾಡುವ ಪರಿಯಾದರೂ ಏನು? ರೈತರು ಆಹಾರ ಧಾನ್ಯಗಳನ್ನು ಉತ್ಪಾದನೆಯನ್ನು ಮಾಡುವುದನ್ನು ಬಿಟ್ಟು ಪ್ರಧಾನವಾಗಿ ಮಾರುಕಟ್ಟೆಗೆ ಬೇಕಾದ ತೋಟಗಾರಿಕಾ ಉತ್ಪಾದನೆಯನ್ನು ಮಾಡಬೇಕಂತೆ. ಇದೂ ಯಾವ ಮಾರುಕಟ್ಟೆಗೆ? ಏಕೆಂದರೆ ಇಂದು ಭಾರತದಲ್ಲಿ ತೋಟಗಾರಿಕಾ ಉತ್ಪಾದನೆಯ ತಲಾವಾರು 780ಗ್ರಾಂನಷ್ಟಿದೆ. ಆದರೆ ತಲಾವಾರು ಬಳಕೆ ಮಾತ್ರ 40ಗ್ರಾಂಗಿಂತ ಜಾಸ್ತಿಯಾಗಿಲ್ಲ. ಈಗಲೇ ಹೀಗಿರುವಾಗ ತೋಟಗಾರಿಕಾ ಉತ್ಪಾದನೆ ಇನ್ನೂ ಜಾಸ್ತಿಯಾಗುತ್ತದೆಂದರೆ ಅದು ಲೋಕಲ್ ಮಾರುಕಟ್ಟೆಗಂತೂ ಅಲ್ಲ. ಅಂದರೆ ಅದೂ ವಿದೇಶೀ ಮಾರುಕಟ್ಟೆಗೇನೇ. ಆದರೆ ಇದು ಮಾಡುವ ಪರಿಣಾಮವೇನು? ಈ ಎಲ್ಲಾ ತೋಟಗಾರಿಕಾ ಕೃಷಿಯೂ ಹೆಚ್ಚಿನ ನೀರಿನ ಆಸರೆ ಬೇಡುತ್ತದೆ. ಆದರೆ ಈಗಾಗಲೇ ಮೊದಲನೇ ಹಸಿರು ಕ್ರಾಂತಿಯ ಪರಿಣಾಮವಾಗಿ ನದಿ ನೀರಿರಲಿ, ದೇಶಾದ್ಯಂತ ಅಂತರ್ಜಲವೂ ಕಣ್ಮರೆ ಆಗುತ್ತಿದೆ. ಉದಾಹರಣೆಗೆ ಪಂಜಾಬಿನ 138 ಬ್ಲಾಕುಗಳಲ್ಲಿ 108 ಬ್ಲಾಕುಗಳನ್ನು ಡಾರ್ಕ್ ಜೋನೆಂದು ಅಂದರೆ ಕರಿ ವಲಯ ಅರ್ಥಾತ್ ನೀರು ರಹಿತ ಮತ್ತು ಕೃಷಿಗೆ ಅಯೋಗ್ಯವಾಗಿಬಿಟ್ಟಿರುವ ಭೂಮಿಯೆಂದು ಘೋಷಿಸಲಾಗಿದೆ. ಈಗ ಅತಿ ಹೆಚ್ಚಿನ ಪ್ರಮಾಣದಲ್ಲಿ ಅತಿನೀರನ್ನು ಬಳಸುವ ತೋಟಗಾರಿಕೆ ಪ್ರಾರಂಭವಾದರೆ ಇನ್ನು ಹದಿನೈದು ವರ್ಷಗಳಲ್ಲಿ ಪಂಜಾಬನಂತಹ ಪಂಜಾಬೇ ಮರಳುಗಾಡಾಗುತ್ತದೆ ಎಂದು ಕೃಷಿತಜ್ಞರು ಹೇಳುತ್ತಿದ್ದಾರೆ.

ಚಾರ್ವಾಕ

- ಶಿವಸುಂದರ್ -

ತಿನ್ನಲು ಆಹಾರವಿಲ್ಲದಿದ್ದರೂ ಹಣ್ಣನ್ನು ರಫ್ತು ಮಾಡಬೇಕೆನ್ನುವ; ಬಡರೈತರು ಬೀದಿಗೆ ಬಿದ್ದರೂ ದೊಡ್ಡ ಬಂಡವಾಳದಿಂದ ಕೃಷಿಯ ಜಿಡಿಪಿ ಜಾಸ್ತಿ ಆದರೆ ಸಾಕೆನ್ನುವ ಪ್ರಧಾನಿ ಭಾರತದ ಭವಿಷ್ಯವನ್ನೇ ಡಾರ್ಕ್ ಜೋನಿನಲ್ಲಿ ಇಡುತ್ತಿಲ್ಲವೇ? ರೈತರ ಅಭಿವೃದ್ಧಿಯ ಹೆಸರಿನಲ್ಲಿ ನಡೆಯುತ್ತಿರುವ ಈ ಹಗಲು ದರೋಡೆಯನ್ನು ತಡೆಯುವುದೆಂತು?


ಮೇರಾ ಭಾರತ್ ಮಹಾನ್- ಹಸಿದವರಲ್ಲೂ ನಂಬರ್ ವನ್! ಶ್ರೀಮಂತಿಕೆಯಲ್ಲೂ ನಂಬರ್ ವನ್

ಭಾರತದ್ದು ಯಾವಾಗಲೂ ವಿಶೇಷ. ಇತ್ತೀಚಿಗೆ ಫೋರ್ಬ್ಸ್ ಎಂಬ ಜಗತ್ತಿನ ಬಿಸಿನೆಸ್‌ಪ್ರಪಂಚದ ಆಗುಹೋಗುಗಳನ್ನು ವರದಿ ಮಾಡುವ ಪತ್ರಿಕೆ ಭಾರತದ ಶ್ರೀಮಂತರ ಸಂಪತ್ತು ಅತಿವೇಗವಾಗಿ ಹೆಚ್ಚುತ್ತಿದೆ ಮತ್ತು ಭಾರತದ ಶ್ರೀಮಂತರ ಈ ಅಭಿವೃದ್ಧಿಯ ಗತಿ ಜಗತ್ತಿನ ಬಡದೇಶಗಳ ಶ್ರೀಮಂತರ ಅಭಿವೃದ್ಧಿಯ ಗತಿಯಲ್ಲಿ



ಅತ್ಯಂತ ಮುಂಚೂಣಿಯಲ್ಲಿದೆ ಎಂದು ವರದಿ ಮಾಡಿದೆ. ಆದರೆ ಅದೇ ಸಮಯದಲ್ಲಿ ಇಂಟರ್‌ನ್ಯಾಷನಲ್ ಫುಡ್ ಪಾಲಿಸಿ ರಿಸರ್ಚ್ ಇನ್‌ಸ್ಟಿಟ್ಯೂಟ್ ಎಂಬ ಸಂಸ್ಥೆಯು ಪ್ರಪಂಚದ ಜಗತ್ತಿನ 119 ಬಡದೇಶಗಳಲ್ಲಿ ಹಸಿವಿನಿಂದ ಬಳಲುತ್ತಿರುವವರ ಪ್ರಮಾಣ ಮತ್ತು ಅವರ ಸಂಖ್ಯಾ ಪ್ರಮಾಣದ ಬೆಳವಣಿಗೆಯ ಗತಿಯನ್ನು ಅಧ್ಯಯನ ಮಾಡಿ ವರದಿ ನೀಡಿದೆ. ಈ ಅಧ್ಯಯನದಲ್ಲಿ ಹಲವಾರು ಮಾನದಂಡಗಳನ್ನು ಬಳಸಲಾಗುತ್ತದೆ. ಮತ್ತು ಅದರಲ್ಲಿ ಹೆಚ್ಚು ಅಂಕ ಪಡೆದುಕೊಂಡರೆ ಹೆಚ್ಚು ಹಸಿವಿನ ಪರಿಸ್ಥಿತಿಯೆಂದೂ ಸೊನ್ನೆಗೆ ಸಮೀಪ ವಿದ್ದರೆ ಹಸಿವು ಮುಕ್ತ ದೇಶವೆಂದೂ ಪರಿಗಣಿಸಲಾಗುತ್ತದೆ. ಇದರಲ್ಲಿ ಭಾರತದ ಪರಿಸ್ಥಿತಿ ನೋಡಿ. 119 ದೇಶಗಳಲ್ಲಿ ಭಾರತದ್ದು 93ನೇ ಸ್ಥಾನ! ಅತ್ಯಂತ ಬಡದೇಶವೆಂದು ಹೆಸರು ಪಡೆದಿರುವ ಸೂಡಾನ್ ಕೂಡ ಭಾರತಕ್ಕಿಂತ ಪರವಾಗಿಲ್ಲ ಎನ್ನುವ ಪರಿಸ್ಥಿತಿ. ಅಷ್ಟು ಮಾತ್ರವಲ್ಲ ಪ್ರಪಂಚದಲ್ಲಿ ಹಸಿವಿನಿಂದ ಬಳಲುತ್ತಿರುವವರಲ್ಲಿ ಶೇ.50 ಭಾಗ ಭಾರತದಲ್ಲೇ ಇದ್ದಾರೆ. ಅಂದರೆ 35 ಕೋಟಿ ಜನ ಹಸಿವಿನಿಂದ ಬಳಲುತ್ತಿದ್ದಾರೆ. ಆದರೆ ನಮ್ಮದೇ ಸರ್ಕಾರದ ಅಂಕಿಅಂಶ ಹೇಳುವ ಕಥೆಯೇ ಬೇರೆ. ಅದರ ಪ್ರಕಾರ ಭಾರತದಲ್ಲಿ ಯಾರೂ ಹಸಿವಿನಿಂದ ಬಳಲುತ್ತಿಲ್ಲ. ಮಾತ್ರವಲ್ಲ, 22ಕೋಟಿ ಜನ ಮಾತ್ರ ಬಡತನ ರೇಖೆಗಿಂತ ಕೆಳಗಿದ್ದಾರೆ!! ಆದ್ದರಿಂದಲೇ ಭಾರತವನ್ನು ಪವಾಡ ಸದೃಶ ದೇಶವೆಂದೂ ಕರೆಯುತ್ತಾರೆ..

ಬಡರಾಜ್ಯಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವವರ ಸಂಖ್ಯೆ ಕಡಿಮೆಯಾಗುತ್ತಿರುವುದೇಕೆ?



ಬಡವರ ವಲಸೆ-ಹೀಗಾಗಿ ಬಡತನದ ವಲಸೆ!!

ಗುಟ್ಟು ರಟ್ಟು

ಇತ್ತೀಚಿಗೆ ಸರ್ಕಾರದ ಸಂಸ್ಥೆಯೊಂದು ದೇಶದಲ್ಲಿ ಬಡತನ ರೇಖೆಗಿಂತ ಕೆಳಗಿರುವವರ ಸಂಖ್ಯೆ ಎಷ್ಟೆಂದು ಅಧ್ಯಯನ ಮಾಡಿ ತನ್ನ ವರದಿಯನ್ನು ಪ್ರಕಟಿಸಿದೆ. ಅದರಲ್ಲಿ ಅತ್ಯಂತ ಕುತೂಹಲಕಾರಿಯಾದ ಮತ್ತು ಒಗಟಿನ ಆದರೆ ಕೆಲವು ಸತ್ಯ ಸಂಗತಿಗಳು ದಾಖಲಾಗಿವೆ. ಈ ವರದಿಯ ಪ್ರಕಾರ ದೇಶದ ಶ್ರೀಮಂತ ರಾಜ್ಯಗಳೆನಿಸಿಕೊಂಡ ಹರ್ಯಾಣ, ಮಹಾರಾಷ್ಟ್ರ, ರಾಜಸ್ಥಾನ, ಗೋವಾ ಇತ್ಯಾದಿಗಳಲ್ಲಿ ಬಡತನರೇಖೆಗಿಂತ ಕೆಳಗಿರುವವರ ಸಂಖ್ಯೆ ಏರುತ್ತಿದೆಯಂತೆ. ಅದಕ್ಕೆ ತದ್ವಿರುದ್ಧವಾಗಿ ಅತ್ಯಂತ ಹಿಂದುಳಿದ ರಾಜ್ಯಗಳೆನಿಸಿ ಕೊಂಡಿರುವ, ಬಿಮಾರು-ಅರ್ಥಾತ್ ಕಾಯಿಲೆಗ್ರಸ್ತ ರಾಜ್ಯಗಳೆಂದೇ ಎನಿಸಿಕೊಂಡಿರುವ (ವಾಸ್ತವದಲ್ಲಿ ಬಿಮಾರು ಎಂದರೆ ಬಿಹಾರ, ಮಧ್ಯಪ್ರದೇಶ, ರಾಜಸ್ಥಾನ, ಉತ್ತರಪ್ರದೇಶ ರಾಜ್ಯಗಳ ಮೊದಲ ಅಕ್ಷರಗಳ ಪದೀಕರಣವೇ ಆಗಿದ್ದರೂ) ಜಾರ್ಖಂಡ್, ಬಿಹಾರ, ಅಸ್ಸಾಂ ಮತ್ತಿತರ ರಾಜ್ಯಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವವರ ಸಂಖ್ಯೆ ಕಡಿಮೆಯಾಗುತ್ತಿದೆಯಂತೆ. ಏನಿದರ ಮರ್ಮ?

ಇದರ ಮರ್ಮ ಅರ್ಥಮಾಡಿಕೊಳ್ಳುವುದು ಅಷ್ಟು ಕಷ್ಟವೇನಲ್ಲ. ಈ ಬಡತನ ರೇಖೆಗಿಂತ ಕೆಳಗಿರುವ ಜನ ಎಲ್ಲಿದ್ದಾರೆ? ಎಲ್ಲಿಯವರು? ಈ ಮುಂದುವರೆದ ರಾಜ್ಯಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವವರ ಸಂಖ್ಯೆ ಹೆಚ್ಚಿರುವುದು ನಿಜವೇ. ಆದರೆ ಅವರೆಲ್ಲಾ ಆಯಾ ರಾಜ್ಯದಲ್ಲೇ ಹರಡಿ ಹಂಚಿಹೋಗಿಲ್ಲ, ಬದಲಿಗೆ ಅವರು ಆಯಾ ರಾಜ್ಯಗಳ ಮಹಾನಗರಗಳಲ್ಲಿ, ಮುಂಬೈ, ಪೂನಾ, ಬೆಂಗಳೂರು, ಜೈಪುರ, ವಾಸ್ಕೋ, ಕೊಲ್ಕತ್ತಾಗಳಲ್ಲಿ ಕೇಂದ್ರೀಕರಣಗೊಂಡಿದ್ದಾರೆ. ಇವರೆಲ್ಲಾ ಯಾರು? ಅಸಲಿ ಉತ್ತರ ಇಲ್ಲೇ ಇದೆ. ಇವರೆಲ್ಲಾ ಅತ್ಯಂತ ಹಿಂದುಳಿದ ರಾಜ್ಯಗಳಿಂದ ಹೊಟ್ಟೆಪಾಡಿಗಾಗಿ ವಲಸೆ ಬಂದು ನಗರ ಸೇರಿಕೊಂಡಿರುವ ಅತ್ಯಂತ ಹಿಂದುಳಿದ ರಾಜ್ಯಗಳ ಅತ್ಯಂತ ಹಿಂದುಳಿದ ಅರ್ಥಾತ್ ಬಡತನ ರೇಖೆಗಿಂತ ಕೆಳಗಿರುವವರು. ಅಂದರೆ ಬಡವರು ವಲಸೆಯಾಗುವುದರೊಂದಿಗೆ ಬಡತನದ ವಲಸೆಯೂ ಆಗಿದೆಯೇ ವಿನಃ ಹಿಂದುಳಿದ ರಾಜ್ಯಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವವರ ಸಂಖ್ಯೆ ಏನೂ ಕಡಿಮೆಯಾಗಿಲ್ಲ. ಜಾಗತೀಕರಣದಿಂದ ಅನುಕೂಲವಾಗಿದೆ ಎಂದು ವಾದಿಸುವ ಪಂಡಿತರು ಹಿಂದುಳಿದ ರಾಜ್ಯಗಳಲ್ಲಿನ ಈ ಅಂಕಿಅಂಶಗಳಲ್ಲಿನ ಪ್ರಗತಿಯನ್ನು ತೋರಿಸುತ್ತಾರೆಯೇ ವಿನಃ ಆ ಸಂಖ್ಯೆಗಳಲ್ಲಿ ಬಚ್ಚಿಟ್ಟುಕೊಂಡಿರುವ ಬಡತನದ ಸತ್ಯವನ್ನು ತೋರುವುದಿಲ್ಲ.

No Comments



"ಎಸ್.ಪಿ.ಪಕ್ಷ ನಟರ ಹಾಗೂ ವಿದೂಷಕರ ಪಕ್ಷ"

-ಲಾಲೂ ಪ್ರಸಾದ್ ಯಾದವ್

"ದೇವೇಗೌಡರು ನನಗೆ ದ್ರೋಹ ಬಗೆಯದಿದ್ದರೂ ಸೋನಿಯಾ ಗಾಂಧಿಗೆ ದ್ರೋಹ ಬಗೆದಿದ್ದಾರೆ"

-ಧರ್ಮಸಿಂ

"ಮುಖ್ಯಮಂತ್ರಿ ಪುತ್ರನನ್ನು ಶಿಕ್ಷಿಸಲಾಗುವುದಿ

-ಕರ್ನಾಟಕದ ಪೊಲೀ ಮಹಾ ನಿರ್ದೇಶಕ-ಸಿಂಹಾ

"ನನ್ನ ಮಗನು ಮಾಡಿದ ಕೆಲಸದಿಂದ ಮುಜುಗರವಾಗಿಲ್ಲ"



-ಎಚ್.ಡಿ.ಕುಮಾರಸ್

"ಕ್ರಿಕೆಟೆಂದರೆ ಅರಮನೆ ದ ರಲ್ಲ"

-ಬ್ರಿಜೇಶ್ ಪಟೇ

ನಂಬಿದ್ರೆ ನಂಬಿ ಬಿಟ್ರೆ ಬಿಡಿ:



"ನನ್ನ ಸಾಧನೆ ಬಗ್ಗೆ ಹೇಳಲು ನನಗೆ ಇಡೀ ದಿನ ಬೇಕು"


-ಧರ್ಮಸಿಂಗ್

"ಆಹಾರಕ್ಕಾಗಿ ತೈಲ ಹಗರಣದಲ್ಲಿ ನಟವರ್‌ಸಿಂಗ್ ನನ್ನನ್ನು ವಂಚಿಸಿದರು"

-ಸೋನಿಯಾ ಗಾ

"ಹೆಂಡತಿಯನ್ನು ಬೈದರೆ ಗಂಡ ಜೈಲಿಗ

-ಕೇಂದ್ರದ ಹೊ ಮಸೂ



"ಇನ್ನೊಂದು ಜನಪರ ಬ ಮಂಡಿಸಿ ನಾನು ರಾಜಕೀಯ ನಿವೃತ್ತನಾಗುವೆ"

-ಬಿ.ಎಸ್.ಯಡಿಯೂ

ವಾರದ ಸುಳ್ಳು

"ಭಾರತದ ರೈತರ ಆತ್ಮಹತ್ಯೆಯನ್ನು ತಡೆಯಬೇಕೆಂದರೆ ಕ್ರಿಮಿನಾಶಕಗಳ ಬಾಟಲ ಮುಚ್ಚಳವನ್ನು ಬಿಗಿ ಮಾಡಬೇಕು ಮತ್ತು ಕ್ರಿಮಿನಾಶಕಗಳ ವಿಷದ ತೀವ್ರತೆಯನ್ನು ಕಡಿ ಮಾಡಬೇಕು. ಇದರಿಂದ ಖಂಡಿತಾ ಆತ್ಮಹತ್ಯೆ ಪ್ರಮಾಣ ಕಡಿಮೆಯಾಗುತ್ತದೆ."

-ಡಾ. ಬೆನಿದಿಟ್ಟೊ ಸಾರಾಸಿ ವಿಶ್ವ ಆರೋಗ್ಯ ಸಂಸ್ಥೆಯ ನಿರ್ದೇ

ಕ್ರಿಸ್ತ ಪೂರ್ವ ಐದನೇ ಶತಮಾನದಲ್ಲಿ ಇದ್ದ ಎನ್ನಲಾದ ಏಸೋಪ್ ನೀತಿಯ ಕತೆಗಳಿಗೆ ಜಗತ್ಪ್ರಸಿದ್ಧ. ಮಕ್ಕಳೇ ಹೆಚ್ಚು ಆನಂದಿಸುವ ಅವರ ಕತೆಗಳಲ್ಲಿ ಮನುಷ್ಯರ ನಡವಳಿಕೆಯನ್ನು ಕುರಿತ ಹಲವಾರು ಉಪಯುಕ್ತ ಸೂಕ್ತಿಗಳೂ ಇವೆ. ಅವುಗಳನ್ನು ಈ ವಾರ ಪ್ರಕಟಿಸಿದ್ದೇವೆ.

-ಗೌ

'ನಮ್ಮ ಕವಿ' ಜಿಎಸ್‌ಎಸ್.....

ಎಲ್ಲರಿಗೂ 'ಮೇಷ್ಟ್ರು' ಆಗಿದ್ದ ನನ್ನಪ್ಪ ಸ್ವತಃ 'ಸರ್' ಎಂದು ಕರೆಯುತ್ತಿದ್ದದ್ದು, ತನ್ನ ಸಹಜ ಒರಟುತನವನ್ನು ಹತ್ತಿಕ್ಕಿ ಹಿರಿಯರಿಗೆ ನೀಡಬೇಕಾದ ಗೌರವವನ್ನು ಕೊಡುತ್ತಿದ್ದದ್ದು, ತನ್ನ ವಿದ್ಯಾಗುರು ಎಂದು ಕರೆಯುತ್ತಿದ್ದದ್ದು ಒಬ್ಬರನ್ನು ಮಾತ್ರ. ಅವರು ಬೇರೆ ಯಾರೂ ಅಲ್ಲ, ಈಗ ಕರ್ನಾಟಕದ ರಾಷ್ಟ್ರಕವಿ ಎಂದು ಘೋಷಿಸಲ್ಪಟ್ಟಿರುವ ಮಾನ್ಯ ಜಿ.ಎಸ್. ಶಿವರುದ್ರಪ್ಪನವರು.

ಜಿಎಸ್‌ಎಸ್‌ರವರ ಆಯ್ಕೆ ಯಾವುದೇ ವಾದವಿವಾದಗಳಿಲ್ಲದೆ ಘೋಷಣೆಯಾಗಿದೆ. ಆದರೆ ಯಾರನ್ನೇ ಆಗಲಿ ನಾವು ರಾಷ್ಟ್ರಕವಿ ಎಂದು ಕರೆಯಬಹುದಾ? ಅದಕ್ಕೆ ಅನುಸರಿಸುವ ಮಾನದಂಡಗಳೇನು? ಮುಂದಿನ ದಿನಗಳಲ್ಲಿ ಇದೇ ಬಿರುದಿಗೆ ನಡೆಯಬಹುದಾದ ಲಾಬಿ, ಪೈಪೋಟಿ, ಜಾತಿ ಒತ್ತಡಗಳನ್ನು ಊಹಿಸಿಕೊಂಡರೆ, ಕನ್ನಡ ಸಾಂಸ್ಕೃತಿಕ ಜಗತ್ತಿಗೆ ಇದೆಲ್ಲ ಬೇಕಿತ್ತಾ ಅನ್ನಿಸುತ್ತದೆ.


ಇದನ್ನು ಜಿಎಸ್‌ಎಸ್‌ರವರನ್ನು ಕುರಿತು ಹೇಳುತ್ತಿರುವ ಮಾತಲ್ಲ. ಅವರು ನಮ್ಮೆಲ್ಲರ ಪ್ರೀತಿಯ ಹಿರಿಯ ಕವಿ ಮಾತ್ರವಲ್ಲ, ಪ್ರತಿಭೆ-ಘನತೆಯ ಹಿರಿಯ ಜೀವ ಕೂಡ ಹೌದು. ಅವರನ್ನು ಕುರಿತು ಅನೇಕ ನೆನಪುಗಳು ನನ್ನಲ್ಲಿವೆ.

ನನ್ನಪ್ಪ ಬೇರೆಯವರೊಂದಿಗೆ ಒಂದು ತರಹ, ಜಿಎಸ್‌ಎಸ್‌ರವರೊಂದಿಗೆ ಮತ್ತೊಂದು ತರಹ ವರ್ತಿಸುತ್ತಿದ್ದುದ್ದನ್ನು ಕಂಡು ಆಗ ಚಿಕ್ಕವಳಾಗಿದ್ದ ನನಗೆ ಒಂದು ರೀತಿಯ ಕುತೂಹಲ. ನನಗಿನ್ನೂ ನೆನಪಿದೆ, ಒಂದು ದಿನ ಅಪ್ಪ ತಮ್ಮ ಬೆತ್ತದ ಕುರ್ಚಿಯಲ್ಲಿ ಕೂತು, ಎದುರಿಗಿದ್ದ ಟೇಬಲ್ ಮೇಲೆ ಕಾಲಿಟ್ಟುಕೊಂಡು ಪೇಪರ್ ಓದುತ್ತಿದ್ದರು. ಆಗ ನಮ್ಮ ಮನೆಗೆ ಜಿಎಸ್‌ಎಸ್ ಆಗಮಿಸಿದರು. ಅವರನ್ನು ಕಂಡಕೂಡಲೇ ಅಪ್ಪ ಎದ್ದು ನಿಂತು 'ಬನ್ನಿ ಸಾರ್' ಎಂದು ಬರಮಾಡಿಕೊಂಡಿದ್ದರು. ಬೇರೆಯವರೊಂದಿಗೆ ಅಪ್ಪ ಎಂದೂ ಹೀಗೆ ಕಿರಿಯನಂತೆ, ವಿನಯದಿಂದ ನಡೆದುಕೊಂಡಿದ್ದನ್ನು ನಾನು ಕಂಡೇ ಇರಲಿಲ್ಲ. ಆಗಲೇ, ಓಹೋ, ಇವರ್‍ಯಾರೋ ಸ್ಪೆಷಲ್ ಇರಬೇಕೆಂದು ನನಗನ್ನಿಸಿತ್ತು.

ಜಿಎಸ್‌ಎಸ್‌ರವರ ಮನೆ ಕೂಡ ಬಸವನಗುಡಿಯಲ್ಲೇ ಇದ್ದುದರಿಂದ ಅಮ್ಮ ನಮ್ಮನ್ನು ಅವರ ಮನೆಗೆ ಆಗಾಗ ಕರೆದುಕೊಂಡು ಹೋಗುತ್ತಿದ್ದರು. ಆಗೆಲ್ಲ ಜಿಎಸ್‌ಎಸ್‌ರವರನ್ನು ನಾವೇನು ಭೇಟಿ ಆಗುತ್ತಿರಲಿಲ್ಲ. ಅಕಸ್ಮಾತ್ ಅವರು ಮನೆಯಲ್ಲಿದ್ದರೆ ನನ್ನಮ್ಮನನ್ನು ನೋಡಿ "ಹೇಗಿದ್ದೀರಾ?" ಎಂದಷ್ಟೇ ಕೇಳಿ ತಮ್ಮ ಪಾಡಿಗೆ ತಮ್ಮ ರೂಮಿನಲ್ಲಿರುತ್ತಿದ್ದರು. ನಮಗೆ ಮಾತ್ರ ಜಿಎಸ್‌ಎಸ್‌ರವರ ಮಗಳು ಜಯಂತಿ ಮಾಡಿರುತ್ತಿದ್ದ ಕಲಾವಸ್ತುಗಳ ಬಗ್ಗೆ ಕುತೂಹಲ.

ಆಗ ಬಿನಾಕಾ ಟೂತ್‌ಪೇಸ್ಟ್ ಪ್ಯಾಕ್‌ನೊಂದಿಗೆ ಬರುತ್ತಿದ್ದ ಪ್ರಾಣಿ ಗೊಂಬೆಗಳನ್ನು ನಾನೂ ಸಂಗ್ರಹಿಸುತ್ತಿದ್ದೆ. ಆದರೆ ನನಗಿಂತ ಹಿರಿಯವರಾದ ಜಯಂತಿ ತಮ್ಮ ಕರಕುಶಲತೆಯಿಂದ ಒಂದು ಪುಟ್ಟ ಕಾಡನ್ನೇ ನಿರ್ಮಿಸಿ, ಆ ಪ್ರಾಣಿಗಳನ್ನು ಅದರಲ್ಲಿ ಜೋಡಿಸಿದ್ದರು. ಪ್ರತಿ ಬಾರಿ ಅವರ ಮನೆಗೆ ಹೋದಾಗ ಜಯಂತಿ ಏನು ಹೊಸದನ್ನು ಸೃಷ್ಟಿಸಿದ್ದಾರೆ ಎಂದು ನೋಡೋದೆ ನಮಗೆಲ್ಲ ಖುಷಿ ನೀಡುತ್ತಿತ್ತು.

ಅದೇ ಸಂದರ್ಭದಲ್ಲಿ ಜಿಎಸ್‌ಎಸ್‌ರವರ ಮಡದಿ ನಮ್ಮನ್ನು ಹತ್ತಿರವೇ ಇದ್ದ ರಾಮಕೃಷ್ಣ ಆಶ್ರಮಕ್ಕೂ ಪರಿಚಯಿಸಿದರು. ಅಲ್ಲಿ ಪ್ರತಿ ಸಂಜೆ ನಡೆಯುತ್ತಿದ್ದ ಪ್ರಾರ್ಥನೆಗಿಂತ ಆ ಆಶ್ರಮದಲ್ಲಿನ ಪಾರ್ಕ್ ನಮಗೆ ಹೆಚ್ಚು ಇಷ್ಟವಾಗಿದ್ದರಲ್ಲಿ ಯಾವ ಅಚ್ಚರಿಯೂ ಇಲ್ಲ. ಅದಕ್ಕಿಂತಲೂ ಮುಖ್ಯವಾಗಿದ್ದು ಆ ಆಶ್ರಮದಲ್ಲಿದ್ದ ಶಿವಲಿಂಗ ಹೂವಿನ ಮರ. ಆಗ



ಬೆಂಗಳೂರಿಗೆ ಬಂದಿದ್ದ ನನ್ನ ಮುತ್ತಜ್ಜಿ ಚೆನ್ನವಜ್ಜಿಯನ್ನು ಮೆಚ್ಚಿಸಲು ನಾನು ಮತ್ತು ಬೇಬಿ ಆ ಮರದಿಂದ ಉದುರಿದ್ದ ಶಿವಲಿಂಗ ಹೂಗಳನ್ನು ನಮ್ಮ ಫ್ರಾಕ್‌ಗಳಲ್ಲಿ ಸಂಗ್ರಹಿಸಿ ತರುತ್ತಿದ್ದೆವು. ಅವುಗಳನ್ನು ತೊಳೆದು, ಶಿವನ ಫೋಟೋ ಮುಂದೆ ಇಟ್ಟು, ಚೆನ್ನವಜ್ಜಿ ಪೂಜೆ ಮಾಡುತ್ತಿದ್ದಳು.

ಹಲವು ವರ್ಷಗಳ ನಂತರ ಕೆ. ಮರುಳಸಿದ್ಧಪ್ಪನವರು ಜಿಎಸ್‌ಎಸ್ ಪುತ್ರಿ ಜಯಂತಿಯವರನ್ನು ಮದುವೆ ಆದರು. ಆಗ ಅವರು ಹೊಸ ಮನೆಯಲ್ಲಿ ಬಣ್ಣ ಹಚ್ಚಿದ ಮೊಟ್ಟೆಗಳಿಂದ ಜಯಂತಿ ಮಾಡಿದ್ದ ಪುಟ್ಟ ಮರ ಈಗಲೂ ನೆನಪಿದೆ. ಅವತ್ತಿನ ಸಂತೋಷ ಗೋಷ್ಠಿಯಲ್ಲಿ ಜಯಂತಿಯವರ ಸಹೋದರ ಜಯದೇವರವರು ಕೊಳಲು ಬಾರಿಸಿದ್ದೂ ಇನ್ನೂ

ಕಂಡಹಾಗೆ



ಚೆನ್ನಾಗಿ ನೆನಪು. ಅಂದಹಾಗೆ, ಮೊನ್ನೆ ಇದ್ದಕ್ಕಿದ್ದಂತೆ "ನಿಮ್ಮನ್ನು ನೋಡಲು ಜಿಎಸ್‌ಎಸ್‌ರವರ ಮಗ ಬಂದಿದ್ದಾರೆ" ಎಂದರು ನಮ್ಮ ಆಫೀಸಿನವರು. ಅವರ ಒಬ್ಬ ಪುತ್ರ ಡಾಕ್ಟರ್ ಪ್ರಸಾದ್ ಹಲವು ವರ್ಷಗಳ ಕಾಲ ನಮ್ಮ ಫ್ಯಾಮಿಲಿ ಡಾಕ್ಟರ್‌ನಂತಿದ್ದು ಈಗ ವಿದೇಶದಲ್ಲಿದ್ದಾರೆ. ಹಾಗಾದರೆ ಬಂದಿರುವವರು ಕೊಳಲು ಬಾರಿಸುತ್ತಿದ್ದ ಮಗನೇ ಇರಬೇಕೆಂದು "ಬರೋದಿಕ್ಕೆ ಹೇಳಿ" ಅಂದೆ. ಅವರು ಬಂದಾಗ "ನಾನು ಕೊಳಲು ಬಾರಿಸುತ್ತಿದ್ದು ನಿಮಗೆ ಇನ್ನೂ ನೆನಪಿದೆಯಲ್ಲ" ಅಂತ ನಕ್ಕರು. ನಾನು ಅನುವಾದಿಸಿರುವ ದರವೇಶಿ ಕತೆಗಳು ಪುಸ್ತಕವನ್ನು ಕನ್ನಡ ಸಾಹಿತ್ಯ ಅಕಾಡೆಮಿಯ ಡಾ. ಸಿದ್ದರಾಮಯ್ಯನವರು ವಿಮರ್ಶಿಸಿದ್ದನ್ನು ಓದಿ ಅದರ ಪ್ರತಿ ಹುಡುಕಿಕೊಂಡು ಗಾಂಧಿಬಜಾರಿನ 'ಅಂಕಿತ' ಪುಸ್ತಕದ ಅಂಗಡಿಗೆ ಬಂದಿದ್ದರು. ಅಲ್ಲಿ ಆ ಪುಸ್ತಕದ ಪ್ರತಿ ಸಿಗದೇ ಇದ್ದಾಗ ನಮ್ಮ ಆಫೀಸಿನಲ್ಲಿರಬಹುದೆಂದು ಇಲ್ಲಿಗೆ ಬಂದಿದ್ದರು. ಬಿಳಿರಂಗನಬೆಟ್ಟದ ಹತ್ತಿರ ಅವರೀಗ ಬಡ ಮಕ್ಕಳಿಗೆ ನಡೆಸುತ್ತಿರುವ ಶಾಲೆಯ ಬಗ್ಗೆ ಚರ್ಚಿಸಿದ ನಂತರ ಅವರು ಹೊರಟರು. ಅವರೊಂದಿಗೆ ಜಿಎಸ್‌ಎಸ್‌ರವರಿಗೂ ದರವೇಶಿ ಕತೆಗಳ ಪ್ರತಿಯೊಂದನ್ನು ಕಳುಹಿಸಿದೆ.

ಹೀಗೆ ಚಿಕ್ಕವಳಾಗಿದ್ದಾಗಿನಿಂದ ಜಿಎಸ್‌ಎಸ್‌ರವರ ಮನೆಯವರೆಲ್ಲರೂ ನನಗೆ ಗೊತ್ತಿದ್ದರೂ, ಸ್ವತಃ ಜಿಎಸ್‌ಎಸ್‌ರವರ ಪರಿಚಯ ಆದದ್ದು ನಾನು ಪತ್ರಕರ್ತೆಯಾದ ಮೇಲೆ. ಹಲವೊಮ್ಮೆ ಅವರಿಗೆ ಪುಸ್ತಕ ಅಥವಾ ಪತ್ರಿಕೆಯ ಕಾಪಿ ತಲುಪದಿದ್ದಾಗ ಅದನ್ನು ಅವರ ಬನಶಂಕರಿಯ ಮನೆಗೆ ಕೊಟ್ಟು ಬರಲು ಅಪ್ಪ ನನ್ನನ್ನು ಕಳುಹಿಸುತ್ತಿದ್ದರು. ಆಗಲೂ ಅವರೊಂದಿಗೆ ಏನು ಮಾತಾಡಬೇಕು ಎಂದು ಗೊತ್ತಾಗದೇ ಅವರ ಮಡದಿಯ ಕೈ ತೋಟದಲ್ಲೇ ಹೆಚ್ಚು ಸಮಯ ಕಳೆಯುತ್ತಿದ್ದೆ. (ನನ್ನ ಮನೆಯಲ್ಲಿರುವ ಬ್ರಹ್ಮ ಕಮಲದ ಗಿಡ ಜಿಎಸ್‌ಎಸ್‌ರವರ ಮನೆಯಿಂದಲೇ ಬಂದದ್ದು!)

ಅಪ್ಪನ ಪತ್ರಿಕೆಯ ಜವಾಬ್ದಾರಿಯನ್ನು ಹೊತ್ತ ನಂತರವೇ ನಾನು ಅವರನ್ನು ಹೆಚ್ಚು ಮಾತನಾಡಿಸಿರುವುದು. ವಿಶೇಷಾಂಕಗಳಿಗೆ ಕವಿತೆ ಬರೆದು ಕೊಡಿ ಎಂದು ನಾನು ಕೇಳಿದಾಗಲೆಲ್ಲ, ಅವರು ಬರೆದುಕೊಟ್ಟಿದ್ದಾರೆ. ಹಾಗೆಯೇ, ರಾಮಚಂದ್ರ ಶರ್ಮರವರು ತೀರಿ ಹೋದಾಗಲೂ ಅವರನ್ನು ಕುರಿತು ಲೇಖನ ಕೊಡುತ್ತೀರಾ ಎಂದು ಕೇಳಿದಾಗ ತಮ್ಮ ಎಲ್ಲ ಒತ್ತಡಗಳ ನಡುವೆ ಬರೆದುಕೊಟ್ಟಿದ್ದರು.

ನಾನು ಸಾಹಿತ್ಯ ವಿದ್ಯಾರ್ಥಿನಿ ಅಲ್ಲ, ಆದ್ದರಿಂದ ನಾನು ಅವರ ಸಾಹಿತ್ಯ ಕೊಡುಗೆಗಳ ಬಗ್ಗೆ ಹೇಳಲಾರೆ. ಆದರೆ ಈಗ ಎಲ್ಲೆಡೆ ಹರಡುತ್ತಿರುವ ಕೋಮುವಾದದ ವಿರುದ್ಧ ಅವರು ತಾಳಿರುವ ನಿಲುವನ್ನು ಮನಃಪೂರ್ವಕವಾಗಿ ಮೆಚ್ಚಬಲ್ಲೆ. ನಾಲ್ಕು ವರ್ಷಗಳ ಹಿಂದೆ, ಬಾಬಾ ಬುಡನ್‌ಗಿರಿಯ ಕೇಸರೀಕರಣದ ವಿರುದ್ಧ ನಾವು ಹೋರಾಟ ಪ್ರಾರಂಭಿಸಿದಾಗ, ಜಿಎಸ್‌ಎಸ್‌ರವರ ಬೆಂಬಲವನ್ನು ಕೋರಿದೆವು. ಅದಕ್ಕೆ ಒಪ್ಪಿದ ಅವರು ತಕ್ಷಣವೇ 'ಪ್ರಜಾವಾಣಿ'ಗೆ ಪತ್ರ ಸಿದ್ಧಪಡಿಸಲು ಹೇಳಿದರು. ಆ ಪತ್ರದ ಕೊನೆಯಲ್ಲಿ 'ಖಂಡನಾರ್ಹ' ಎಂಬ ಪದದ ಬದಲಾಗಿ ಸ್ವಲ್ಪ ಮೃದುವಾದ ಪದವನ್ನು ಬರೆಯಲಾಗಿತ್ತು. ಅದನ್ನು ಓದಿದ ಜಿಎಸ್‌ಎಸ್‌ರವರು "ಇದರಲ್ಲಿ ಹಿಂದೆಮುಂದೆ ನೋಡುವುದೇನಿದೆ. ಅದು ಖಂಡನಾರ್ಹವಾಗಿರೋದ್ರಿಂದ ಅದೇ ಪದ ಬಳಸಿ" ಎಂದು ನೇರವಾಗಿ ಹೇಳಿದ್ದರು. ನಮ್ಮ ಸಾಹಿತ್ಯ ಲೋಕದ ಎಷ್ಟೋ ಜನ ಯಾವುದೇ ರಾಜಕೀಯ ಪಕ್ಷವನ್ನೋ ಅಥವಾ ಸರ್ಕಾರವನ್ನೋ ನಿಷ್ಠುರವಾಗಿ ವಿಮರ್ಶಿಸಲು ಹಿಂಜರಿಯುವಾಗ, ಹಿರಿಯರಾದ ಜಿಎಸ್‌ಎಸ್‌ರವರು ಅಂತಹ ಮನೋಭಾವ ಹೊಂದಿಲ್ಲದಿರುವುದೇ ಅಚ್ಚರಿಯ, ನೆಮ್ಮದಿಯ ವಿಷಯ.

ಜಿಎಸ್‌ಎಸ್‌ರವರನ್ನು ಕುರಿತು ನನಗನ್ನಿಸಿರುವ ಮತ್ತೊಂದು ಮುಖ್ಯ ವಿಷಯ ಯಾವುದೆಂದರೆ ಅವರು ಹಲವು ಲಿಂಗಾಯತ ಮಠಾಧೀಶರಿಗೆ ಆಪ್ತರಾಗಿದ್ದರೂ ಸಹ ಎಂದೂ ಅವರನ್ನು ಯಾರೂ ಒಂದು ಜಾತಿಗೆ ಸೀಮಿತಗೊಳಿಸದಿರುವುದು. ಹಾಗೆ ಯಾರಾದರೂ ಮಾಡಿದ್ದರೆ ಅದು ಅವರ ನೇರ ನಿಲುವಿಗೆ, ಸಾಹಿತ್ಯಕ್ಕೆ ಮಾಡಿದ ಅಗೌರವವೇ ಆಗಿರುತ್ತೆ.

ಜಿಎಸ್‌ಎಸ್‌ರವರ ಬಗ್ಗೆ ಅಪ್ಪನಿಗೆ ತುಂಬಾ ಗೌರವವಿದ್ದರೂ ಹಲವೊಮ್ಮೆ ಅವರನ್ನು ತಮಾಷೆ ಮಾಡಿದ್ದುಂಟು. ಅದು ಅಪ್ಪನ ಚೇಷ್ಟೆ ಪ್ರವೃತ್ತಿಯೇ ಹೊರತು ಜಿಎಸ್‌ಎಸ್‌ರವರನ್ನು ಕುರಿತು ಲಘು ಭಾವನೆ ಅಲ್ಲ. 'ದೊರೆ ಈಡಿಪಸ್ ಮತ್ತು ಅಂತಿಗೊನೆ' ನಾಟಕದ ಮುನ್ನುಡಿಯ ಕೊನೆಯಲ್ಲಿ "ನಮ್ಮೆಲ್ಲ ಭಿನ್ನಾಭಿಪ್ರಾಯ ಮರೆತು ಕೃತಿಯೆದುರು ಅತ್ಯುತ್ಸಾಹಗೊಂಡು ನನ್ನನ್ನು ಒಪ್ಪಿಕೊಳ್ಳುವ ನನ್ನ ವಿದ್ಯಾಗುರು ಜಿ.ಎಸ್. ಶಿವರುದ್ರಪ್ಪನವರಿಗೂ ನಾನು ಇಲ್ಲಿ ಕೃತಜ್ಞತೆ ಸೂಚಿಸುತ್ತೇನೆ" ಎಂದು ಅಪ್ಪ ಬರೆದಿರುವುದೇ ಇದಕ್ಕೆ ಸಾಕ್ಷಿ.

ಹಿರಿಯರಾದ ಜಿ.ಎಸ್. ಶಿವರುದ್ರಪ್ಪನವರಿಗೆ ಕಿರಿಯವಳಾದ ನನ್ನಿಂದ ಹೃತ್ಪೂರ್ವಕ ಅಭಿನಂದನೆಗಳು.

–ಗೌರಿ ಲಂಕೇಶ್

ಅಂಬಿ ಮಂತ್ರಿಯಾಗಿದ್ದು ಹೀಗೆ....

ಒಂದಿದು ದಿನ ಸಂಸತ್ ಅಧಿವೇಶನದಲ್ಲಿ ಭಾಗವಹಿಸಿಲ್ಲ, ಒಂದು ಪ್ರಶ್ನೆ ಕೇಳಿಲ್ಲ, ಯಾವ ಚರ್ಚೆಯಲ್ಲೂ ಭಾಗವಹಿಸಿಲ್ಲ. ಜೊತೆಗೆ ಅಂಬರೀಷ್‌ರವರ ದಿನಚರಿನೂ (ಗುಂಡು–ಇಸ್ಪೀಟ್ ಚಟ) ನನಗೆ ಗೊತ್ತು. ಇಂಥವರನ್ನ ಮಿನಿಸ್ಟರ್ ಮಾಡಿ ಅಂದ್ರೆ ಹೇಗೆ ಸಾಧ್ಯ, ಮಿ. ಶಿವರಾಮೇಗೌಡ"

–ಇದು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಕೇಳಿದ್ದ ಪ್ರಶ್ನೆ. ಎಲ್.ಆರ್. ಶಿವರಾಮೇಗೌಡ, ವಾಸಂತಿ ಶಿವಣ್ಣ ಮುಂತಾದ ಹಳೇ ಮೈಸೂರಿನ ಒಕ್ಕಲಿಗ ಲೀಡರ್‌ಗಳೆಲ್ಲಾ ಅಂಬಿಯನ್ನು ಮಿನಿಸ್ಟರ್ ಮಾಡಿ ಎಂದು ಒತ್ತಾಯಿಸಲು ಮೂರು ತಿಂಗಳ ಹಿಂದೆ ನಿಯೋಗ ಮಾಡಿಕೊಂಡು ದೆಹಲಿಯಲ್ಲಿ ಸೋನಿಯಾರನ್ನು ಭೇಟಿಯಾದಾಗ ನಡೆದಿದ್ದ ಸಂಭಾಷಣೆಯಿದು. ಅದಕ್ಕೆ ತಬ್ಬಿಬ್ಬಾಗಿ ಪ್ರತಿಕ್ರಿಯಿಸಿದ ಶಿವರಾಮೇಗೌಡರು "ಎಸ್ ಮೇಡಂ, ಕರೆಕ್ಟ್ ಮೇಡಂ" ಎಂದಿದ್ದರಂತೆ. ಆಮೇಲೆ ಕಾಂಗ್ರೆಸ್ ಹೈಕಮಾಂಡ್ ಏನೇನು ಲೆಕ್ಕಾಚಾರ ಹಾಕಿತೋ, ಕೊನೆಗೆ ಅಂಬಿ ಈಗ ಕೇಂದ್ರ ವಾರ್ತಾ ಇಲಾಖೆಯ ರಾಜ್ಯ ಸಚಿವರಾಗಿದ್ದಾರೆ. ಬಂಗಾಳದ ಪ್ರಿಯರಂಜನ್ ದಾಸ್‌ಮುನ್ಷಿ ಅದೇ ಇಲಾಖೆಗೆ ಅಂಬಿಯ ಸೀನಿಯರ್ ಅರ್ಥಾತ್ ಕ್ಯಾಬಿನೆಟ್ ಸಚಿವ. ಕರ್ನಾಟಕದಿಂದ ಒಕ್ಕಲಿಗರ ಕೋಟಾದಲ್ಲಿ ಯಾರಿಗೂ ಮಂತ್ರಿಗಿರಿ ಸಿಕ್ಕಿರಲಿಲ್ಲ. ಏಳುವುದು ಮತ್ತು ಬರಲಿರುವ ಚಾಮುಂಡೇಶ್ವರಿ ಉಪಚುನಾವಣೆ ಎಲ್ಲವನ್ನೂ ಲೆಕ್ಕಹಾಕಿ ಅಂಬಿಗೆ ಛಾನ್ಸ್ ಕೊಡಲಾಗಿದೆ. ಇದರ ಜೊತೆ ಮೂರನೇ ಬಾರಿಗೆ ಎಂಪಿ ಆಗಿರುವ



ಅಂಬಿಗೆ ಸೀನಿಯಾರಿಟಿಯೂ ಇತ್ತೆನ್ನಿ.

ಆದರೆ ಮಂತ್ರಿಯಾದ ಬೆನ್ನಲ್ಲೇ ಅಂಬಿಗೆ ದೆಹಲಿ ರಾಜಕೀಯದ ವರಸೆಗಳು ಹಾಗೂ ಅಧಿಕಾರಿಗಳ ಠೇಂಕಾರ ಬಿಸಿ ಮುಟ್ಟಿಸಿದೆ. ಪ್ರಮಾಣವಚನ ಸ್ವೀಕರಿಸಿ ನಾಲ್ಕು ದಿನಗಳಾದರೂ ಅಂಬಿಗೆ ಒಂದು ಕಚೇರಿ ವ್ಯವಸ್ಥೆ ಮಾಡಿರಲಿಲ್ಲ ಇಲಾಖಾ ಅಧಿಕಾರಿಗಳು. ವಾರ್ತಾ ಮತ್ತು ಪ್ರಚಾರ ಇಲಾಖೆಯ ಮಂತ್ರಿ ಹಾಗೂ ಇಡೀ ಸಿಬ್ಬಂದಿ ಇರುವುದು ಶಾಸ್ತ್ರಿ ಭವನದಲ್ಲಿ. ಆದರೆ ಈಗ ಅಲ್ಲಿ ಜಾಗ ಖಾಲಿ ಇಲ್ಲ ಎಂದು ಅಲ್ಲಿಂದ ಐದು ಕಿಲೋಮೀಟರ್ ದೂರದಲ್ಲಿರುವ ಮತ್ಯಾವುದೋ ಇಲಾಖೆಯ ಬಿಲ್ಡಿಂಗ್‌ನಲ್ಲಿ ಅಂಬಿಗೆ ಕಚೇರಿ ನೀಡಲು ತೀರ್ಮಾನ ಆಗಿತ್ತು. ಈ ವಿಷಯ ಕೇಳಿ ಅಂಬಿ ಕೋಪ ನೆತ್ತಿಗೇರಿ ಹೋಗಿದೆ. ಏಕೆಂದರೆ ಈ ಹಿಂದೆ ಸುಷ್ಮಾ ಸ್ವರಾಜ್ ವಾರ್ತಾ ಮಂತ್ರಿಯಾಗಿದ್ದಾಗ ರಾಜ್ಯ ಮಂತ್ರಿಯಾದಿಯಾಗಿ ಎಲ್ಲರೂ ಶಾಸ್ತ್ರಿ ಭವನದಲ್ಲೇ ಇದ್ದರು. ಆಮೇಲೆ ಆ ಸರ್ಕಾರ ತೊಲಗಿ ಹೊಸ ಸಚಿವರು ಬರುವಷ್ಟರೊಳಗೆ ಇಲಾಖೆಯ ದೊಡ್ಡ ಅಧಿಕಾರಿಗಳೆಲ್ಲಾ ಒಳ್ಳೊಳ್ಳೆ ಛೇಂಬರ್ ಆರಿಸಿಕೊಂಡು ಕೂತುಬಿಟ್ಟಿದ್ದರು. ಅವರಿಗೀಗ ಆ ವಜಕಟ್ಟಾದ ಜಾಗ ಬಿಟ್ಟುಕೊಡುವ ಮನಸ್ಸಿರದೇ ಸ್ವತಃ ಮಿನಿಸ್ಟರ್ ಅಂಬಿಯನ್ನೇ ದೂರವಿಡುವ ಕಳ್ಳಾಟ ಆಡಿದ್ದಾರೆ. ಬಹುಶಃ ಅಂಬಿ ಅವರನ್ನೆಲ್ಲ ಕರೆಸಿ 'ಯಾಕ್ರೋ... ನನ್....ಕ್ಮಾ' ಎಂದು ಅವರ ಶೈಲಿಯಲ್ಲೇ ಗದರಿಸಿರಬೇಕು... ಹಾಗಾಗಿ ಅಧಿಕಾರಿಗಳು ಗಡಿಬಿಡಿಯಿಂದ ಕೊನೆಗೂ ಅಂಬಿಗೆ ಶಾಸ್ತ್ರಿ ಭವನದಲ್ಲೇ ಆಫೀಸ್ ಮಾಡುತ್ತಿದ್ದಾರೆ.

ದೆಹಲಿಯಲ್ಲಿ ಕಚೇರಿ ಪ್ರವೇಶ ಮಾಡದೆ ಬೆಂಗಳೂರಿಗೆ ಕಾಲಿಡಲ್ಲ ಎಂದಿದ್ದ ಅಂಬಿ ನವೆಂಬರ್ 6ಕ್ಕೆ ಬೆಂಗಳೂರಿಗೆ ಬರುತ್ತಿದ್ದಾರೆ. ಅವತ್ತು ಅಂಬಿಯನ್ನು ಸ್ವಾಗತಿಸಲು ಕನಿಷ್ಠ 20 ಸಾವಿರ ಜನರನ್ನು ಸೇರಿಸಬೇಕೆಂದು ಶಿವರಾಮೇಗೌಡ ಓಡಾಟ ಶುರುಮಾಡಿದ್ದಾರೆ.


"ಲ್ರೋ... ಇವತ್ತಲ್ಲಾ ನಾಳೆ ನಾನ್ ಕರ್ನಾಟಕ ಸಿಎಂ ಆಗ್ತೀನಿ, ನೋಡ್ತೀರಿ" ಎಂದು ಯಾವಾಗಲೂ ಆಪ್ತರೆದಿರು ಛಾಲೆಂಜ್ ಮಾಡುವ ಅಂಬಿ ಸದ್ಯಕ್ಕೆ ಕೇಂದ್ರದಲ್ಲಿ ರಾಜ್ಯ ಮಂತ್ರಿಯಾಗಿದ್ದಾರೆ. ಅಲ್ಲಿ ಆಫೀಸ್‌ನ ಕೆಲಸದ ವೇಳೆ ಬೆಳಗ್ಗೆ 10 ರಿಂದ ಸಂಜೆ 5.30 ರ ತನಕ ಅನ್ನೋದು ಅಂಬರೀಷ್ ನೆನಪಿಟ್ಟುಕೊಂಡರೆ ಉತ್ತಮ. ಯಾಕೆಂದರೆ ಅಂಬಿಗೆ ಬೆಳಗಾಗುವುದೇ ಮಧ್ಯಾಹ್ನ 12 ಗಂಟೆಗೆ ಅದಕ್ಕೆ!

"ಕೊನೆಗೂ ಅವಕಾಶ ಸಿಕ್ಕಿತು" ಎಂದಿರುವ ಅಂಬರೀಷ್‌ರವರು ಈ ಅವಕಾಶವನ್ನು ಸದುಪಯೋಗ ಮಾಡಿಕೊಳ್ಳಲಿ ಎಂಬುದೇ ನಮ್ಮೆಲ್ಲರ ಆಶಯ.

ಎನಿವೆ, ಬೆಸ್ಟ್ ಆಫ್ ಲಕ್, ಅಂಬಿ!

–ಈಶ

ವಿಶೇಷ ವರದಿ



ಪೊಲೀಸ್ ಟೆರ್ರರ್!

ಭಾಗ–II

ಉಲ್ಲಾಳದ ಮುಸ್ಲಿಮರ ಹಾಗೆ ಬಂದರ್‌ನವರಿಗೂ ಯಾಕೆ ಪೊಲೀಸರು ತಮ್ಮ ಮನೆಗಳಿಗೆ ಬಲಾತ್ಕಾರವಾಗಿ ಪ್ರವೇಶಿಸಿದರು ಹಾಗೂ ಯಾಕೆ ತಮ್ಮ ಮನೆಯವರ ದಸ್ತಗಿರಿಯಾಗಿದೆ ಎಂಬುದೇ ತಿಳಿದಿಲ್ಲ. ಕರಾವಳಿಯಲ್ಲಿ ಮುಸ್ಲಿಮರ ನಾಗರಿಕ ಹಕ್ಕುಗಳ ಮೇಲೆ ಕಳೆದ ಅನೇಕ ವರ್ಷಗಳಿಂದ ಹಿಂದೂತ್ವವಾದಿಗಳು ದಾಳಿ ನಡೆಸುತ್ತಲೇ ಬಂದಿದ್ದಾರೆ. ಪೊಲೀಸರು ಅವರನ್ನು ತಡೆದಿದ್ದಿಲ್ಲ; ಮಾಧ್ಯಮದವರೂ ಅವರನ್ನು ಪ್ರಶ್ನಿಸಿದ್ದಿಲ್ಲ. ಆದರೆ ಈ ಬಾರಿ ಪೊಲೀಸರೇ ಹಿಂದೂತ್ವವಾದಿಗಳ ಜೊತೆ ಕೈ ಮಿಲಾಯಿಸಿದ್ದಾರೆ.

ಮಂಗಳೂರು

ಜಿ. ರಾಜಶೇಖರ
ಪಟ್ಟಾಭಿರಾಮ ಸೋಮಯಾಜಿ
ಹರ್ಷಾದ್ ವರ್ಕಾಡಿ

ದಿನಜನಿತ ಅಭಿಪ್ರಾಯದ ಪ್ರಕಾರ ಮಂಗಳೂರಿನ ಬಂದರು 'ಮುಸ್ಲಿಮ್ ಏರಿಯಾ'. ಆದರೆ ಇದು ಅರ್ಧಸತ್ಯ. ಬಂದರ್‌ನಲ್ಲಿ ಹಿಂದೂಗಳೂ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಮಂಗಳೂರಿನ ಅತ್ಯಂತ ಹಳೆಯ ವ್ಯಾಪಾರ ಕೇಂದ್ರವಾದ ಬಂದರ್‌ನ ಹೋಲ್‌ಸೇಲ್ ಮಳಿಗೆಗಳಲ್ಲಿ ಹೆಚ್ಚಿನವು ಹಿಂದೂಗಳ ಒಡೆತನದಲ್ಲಿರುವಂತಹವು. ಬಂದರ್ ಮತ್ತು ಅದಕ್ಕೆ ಒತ್ತಿಕೊಂಡಿರುವ ಹಂಪನಕಟ್ಟೆ, ಕೊಡಿಯಾಲ್ ಬೈಲ್‌ಮತ್ತುನೆಹರೂಮೈದಾನದ ಆಸುಪಾಸುಗಳ ನಡುವೆ ಅಷ್ಟುಗೋಡೆ ಏನೂ ಇಲ್ಲ; ಗೋಡೆ ಇರುವುದು ಜನರ ಮನಸ್ಸಿನಲ್ಲಿ. ಹಾಗಾಗಿ ಬಂದರ್ ಮಂಗಳೂರಿನ 'ಸೂಕ್ಷ್ಮ ಪ್ರದೇಶ'ಗಳಲ್ಲಿ ಒಂದು ಎಂದು ಪರಿಗಣಿಸಲ್ಪಟ್ಟಿದೆ. ಅದು ಹೇಗೂ ಇರಲಿ, ಇದೇ ಅಕ್ಟೋಬರ್ 8ರಂದು ಭಾನುವಾರ ನಗರದಲ್ಲಿ ಕರ್ಫ್ಯೂ ಇದ್ದಾಗ, ನಡುರಾತ್ರಿ ಬಂದರ್‌ನ ಕೆಲವು ಮುಸ್ಲಿಂ ಮನೆಗಳಿಗೆ ಪೊಲೀಸರು ನುಗ್ಗಿ, ಮನೆಯವರನ್ನು ಬೆದರಿಸಿ, ಯುವಕರನ್ನು ಎಳೆದೊಯ್ದದ್ದಕ್ಕೆ ಯಾವ ಕಾನೂನಿನ ಸಮರ್ಥನೆಯೂ ಇಲ್ಲ.

ಬಂದರ್‌ನಲ್ಲಿ ಹಿಂದೆ ಅನೇಕ ಬಾರಿ ಕೋಮುಗಲಭೆಗಳು ಸಂಭವಿಸಿವೆ. ಆದರೆ ಯಾವ ಸಂದರ್ಭದಲ್ಲಿಯೂ ಪೊಲೀಸರು ಹೀಗೆ ರಾತ್ರೋರಾತ್ರಿ ಮನೆಗಳಿಗೆ ನುಗ್ಗಿರಲಿಲ್ಲ. ಇಷ್ಟಾಗಿ ಈ ಬಾರಿ ಬಂದರ್ ಶಾಂತವಾಗಿತ್ತು. ಉಲ್ಲಾಳದ ಮುಸ್ಲಿಮರ ಹಾಗೆ ಬಂದರ್‌ನವರಿಗೂ ಯಾಕೆ ಪೊಲೀಸರು ತಮ್ಮ ಮನೆಗಳಿಗೆ ಬಲಾತ್ಕಾರವಾಗಿ ಪ್ರವೇಶಿಸಿದರು ಹಾಗೂ ಯಾಕೆ ತಮ್ಮ ಮನೆಯವರ ದಸ್ತಗಿರಿಯಾಗಿದೆ ಎಂಬುದೇ ತಿಳಿದಿಲ್ಲ. ಸಂಶಯಾಸ್ಪದ ವ್ಯಕ್ತಿಗಳನ್ನು ಹಿಡಿದು ವಿಚಾರಣೆ ನಡೆಸುವ ಮತ್ತು ವಿಚಾರಣಾಪೂರ್ವ ಕಸ್ಟಡಿಯಲ್ಲಿ ಇರಿಸಿಕೊಳ್ಳುವ ಹಕ್ಕು ಪೊಲೀಸರಿಗೆ ಇದೆ; ಅದು ಅವರ ಕರ್ತವ್ಯವೂ ಹೌದು. ಆದರೆ ಹಾಗೆ ಮಾಡುವುದಕ್ಕೆ ಕ್ರಿಮಿನಲ್ ಕಾಯ್ದೆಯಲ್ಲಿ ಕಟ್ಟುನಿಟ್ಟಾದ ನಿಯಮಗಳಿವೆ.

ಪೊಲೀಸರು ಯಾಕೆ ಈ ನಿಯಮಗಳನ್ನು ಪಾಲಿಸಲಿಲ್ಲ? ಮುಸ್ಲಿಮರಿಗೆ ಆಗುವಾಗ ಮಾತ್ರ ಯಾಕೆ ಅವರಿಗೆ ಕ್ರಿಮಿನಲ್ ಕಾಯ್ದೆಯ ವಿಧಿವಿಧಾನಗಳು ಮರೆತುಹೋಗುತ್ತದೆ? ಕರಾವಳಿಯಲ್ಲಿ ಮುಸ್ಲಿಮರ ನಾಗರಿಕ ಹಕ್ಕುಗಳ ಮೇಲೆ ಕಳೆದ ಅನೇಕ ವರ್ಷಗಳಿಂದ ಹಿಂದೂತ್ವವಾದಿಗಳು ದಾಳಿ ನಡೆಸುತ್ತಲೇ ಬಂದಿದ್ದಾರೆ. ಪೊಲೀಸರು ಅವರನ್ನು ತಡೆದಿದ್ದಿಲ್ಲ; ಮಾಧ್ಯಮದವರೂ ಅವರನ್ನು ಪ್ರಶ್ನಿಸಿದ್ದಿಲ್ಲ. ಆದರೆ ಈ ಬಾರಿ ಪೊಲೀಸರೇ ಹಿಂದೂತ್ವವಾದಿಗಳ ಜೊತೆ ಕೈ ಮಿಲಾಯಿಸಿದ್ದಾರೆ. ಕರಾವಳಿಯ ಪತ್ರಿಕೆಗಳಿಗೆ ಇದು ಕೂಡಾ ಸುದ್ದಿ ಮಾಡಬೇಕಾದ ಸಂಗತಿ ಎಂದು ಕಂಡಿಲ್ಲ.

ಬಂದರ್‌ನಲ್ಲಿ ಪೊಲೀಸರು ನಡೆಸಿದ ಕಾರ್ಯಾಚರಣೆ ಎಷ್ಟು ಏಕಪಕ್ಷೀಯವೂ ಅಸಂಗತವೂ ಆಗಿತ್ತು ಎನ್ನುವುದಕ್ಕೆ ಇಲ್ಲಿ ಕೆಲವು ಉದಾಹರಣೆಗಳಿವೆ. ತುಸೀಮಾನ್ ಬಂದರ್‌ನ ಪುರಾತನ ಕಟ್ಟಡಗಳಲ್ಲಿ ಒಂದು. ಆ ಮನೆಯಲ್ಲಿ 6 ಸಂಸಾರಗಳ ಅವಿಭಕ್ತ ಮುಸ್ಲಿಂ ಕುಟುಂಬವೊಂದು ವಾಸವಾಗಿದ್ದು, ಒಂದೇ ಸೂರಿನಡಿಯಲ್ಲಿ ಗಂಡಸರು, ಹೆಂಗಸರು, ಮಕ್ಕಳು ಸೇರಿ 40 ಜನ ವಾಸವಾಗಿದ್ದಾರೆ. ಗಂಡಸರು, ಗೂಡಿನಂಗಡಿ, ಬೀದಿ ಬದಿಯ ವ್ಯಾಪಾರ, ಡ್ರೈವಿಂಗ್ ಮತ್ತಿತರ ಸಣ್ಣಪುಟ್ಟ ಉದ್ಯೋಗಗಳನ್ನು ಮಾಡುತ್ತಾರೆ; ಒಂದಿಬ್ಬರು ಕೊಲ್ಲಿ ರಾಷ್ಟ್ರಗಳಲ್ಲೂ ಉದ್ಯೋಗದಲ್ಲಿದ್ದಾರೆ. ಅಕ್ಟೋಬರ್ 8ರ ಭಾನುವಾರ ರಾತ್ರಿ ಮನೆಯಲ್ಲಿ ಎಲ್ಲರೂ ಮಲಗಿದ್ದಾಗ, ಪೊಲೀಸರು ಬಾಗಿಲು ಗುದ್ದಿದರು. ನಗರದಲ್ಲಿ ಆಗಲೇ ಎರಡು ದಿನಗಳಿಂದ ಕರ್ಫ್ಯೂ ಇತ್ತು, ನಡು ರಾತ್ರಿ ಬೇರೆ. ಹಾಗಾಗಿ ಮನೆಯವರು ಎಚ್ಚರವಾದರೂ ಬಾಗಿಲು ತೆಗೆಯಲಿಲ್ಲ. ಪೊಲೀಸರು ಮನೆಯ ಹೊರಬಾಗಿಲು ಮುರಿದು, ಒಳಗಿನ ಚಾವಡಿಯ ಬಾಗಿಲು ಸಹ ಮುರಿದು ಒಳನುಗ್ಗಿದರು. ಆ ಕೋಣೆಯಲ್ಲಿ ಮಲಗಿದ್ದ ಹೆಂಗಸರು ದಡಬಡಿಸಿ ಎದ್ದಾಗ, ಪೊಲೀಸರು ಇನ್ನೊಂದು ಕೋಣೆಯ ಬಾಗಿಲು ಮುರಿದು ಅಲ್ಲಿ ಮಲಗಿದ್ದ ಇಬ್ಬರು ಯುವಕರು, ಜೀಪ್ ಡ್ರೈವರ್ ಮೊಹ್ಮದ್ ಇಮ್ರಾನ್ (17) ಮತ್ತು ಟೆಂಪೋ ಡ್ರೈವರ್ ಅಬ್ದುಲ್ ರಶೀದ್ (20)ರನ್ನು ಎಳೆದುಕೊಂಡು ಹೋದರು. ಅವರ ತಾಯಿ ಜೋಹರಾ "ಯಾಕೆ ಮಕ್ಕಳನ್ನು ಕರೆದುಕೊಂಡು ಹೋಗುತ್ತೀರಿ" ಎಂದು ಪ್ರಶ್ನಿಸಿದಾಗ "ವಿಚಾರಣೆ ಮಾಡಿಬಿಡುತ್ತೇವೆ" ಎಂದು ಪೊಲೀಸರು ಹೇಳಿದರು. ಆದರೆ ಅವರು ಸುಳ್ಳು ಹೇಳಿದ್ದರು.

ಈ ಹುಡುಗರನ್ನು ಸಮೀಪದ ಬಂದರ್ ಪೊಲೀಸ್ ಠಾಣೆಗೆ ಒಯ್ಯದೆ ಬಹಳ ದೂರದಲ್ಲಿರುವ ಬರ್ಕೆ ಠಾಣೆಗೆ ಕರೆದುಕೊಂಡುಹೋಗಿ, ಅಲ್ಲಿಂದ ಎರಡು ದಿನಗಳ ನಂತರ ಹಾಸನ ಜೈಲಿಗೆ ಸಾಗಿಸಿದರು. ಮನೆಗೆ ನುಗ್ಗಿದ ಪೊಲೀಸರ ತಂಡದಲ್ಲಿ ಸುಮಾರು 30 ಜನರಿದ್ದುದಾಗಿಯೂ, ಅವರೆಲ್ಲರೂ ತುಳುಭಾಷೆಯಲ್ಲಿ ಬ್ಯಾರಿಗಳಿಗೆ ವಾಚಾಮಗೋಚರವಾಗಿ ಬಯ್ಯುತ್ತಿದ್ದುದಾಗಿಯೂ ಮನೆಯವರು ನಮಗೆ ತಿಳಿಸಿದರು. ಈಗ ಆ ಇಬ್ಬರ ಮೇಲೆ ದೇವಸ್ಥಾನದ ಮೇಲೆ ಕಲ್ಲು ತೂರಾಟ, ದೊಂಬಿ ಮುಂತಾದ ಕೇಸುಗಳಿವೆ.

ಬರ್ಕೆ ಠಾಣೆಯಲ್ಲಿ ಅವರಿಗೆ "ಗಲಾಟೆ ಮಾಡಿಸಿದವರು ಮೇಯರ್ ಅಶ್ರಫ್ ಎಂದು ಹೇಳಿಕೆ ಬರೆದುಕೊಡಿ; ಬಿಡುತ್ತೇವೆ" ಎಂದು ಹೇಳಿದ್ದರಂತೆ.

ಇದಕ್ಕಿಂತಲೂ ಹೆಚ್ಚು ಅಸಂಗತವಾಗಿರುವುದು, ಬಂದರ್‌ನ ಮೊಹ್ಮದ್ ರಿಯಾಜ್‌ರ ಬಂಧನ. ಸುಮಾರು 40 ವರ್ಷ ಪ್ರಾಯದ ರಿಯಾಜ್ ಕಳೆದ 10 ವರ್ಷದಿಂದ ಸೌದಿ ಅರೇಬಿಯಾದಲ್ಲಿ ಸ್ವಂತ ಉದ್ಯಮ ನಡೆಸಿಕೊಂಡಿದ್ದಾರೆ. ಬಂದರ್‌ನ ಅವರ ಮನೆಯಲ್ಲಿ ಅವರ ಹೆಂಡತಿ ಮತ್ತು ಮಗು ಮಾತ್ರ ಇರುವುದು. ರಿಯಾಜ್‌ಗೆ ಕರುಳಿನ ಅಲ್ಸರ್ ಇದ್ದು ಚಿಕಿತ್ಸೆಗೆಂದು ಅವರು ಕೆಲವೇ ದಿನಗಳ ಹಿಂದೆ ಮಂಗಳೂರಿಗೆ ಬಂದಿದ್ದರು. ರಂಜಾನ್ ಮಾಸ ಕಳೆದ ನಂತರ ಅವರಿಗೆ ಆಪರೇಷನ್ ಆಗುವುದಿತ್ತು. ಭಾನುವಾರ ರಾತ್ರಿ 12.30ರ ಸುಮಾರಿಗೆ, ಕಟ್ಟಡವೊಂದರ ಮಹಡಿಯಲ್ಲಿದ್ದ ಅವರ ಮನೆಗೆ ಪೊಲೀಸರು ನುಗ್ಗಿ ಅವರನ್ನು ಬರ್ಕೆ ಠಾಣೆಗೆ ಎಳೆದುಕೊಂಡು ಹೋದರು. ಅವರಿಗಾಗಲೀ, ಅವರ ಹೆಂಡತಿಗಾಗಲೀ ಪೊಲೀಸರು ಮಾತೇ ಆಡಲು ಬಿಡಲಿಲ್ಲ. ರಿಯಾಜ್ ಹಾಸನ ಜೈಲಿನಲ್ಲಿ ಒಂದು ವಾರ ಕಳೆದು ಈಗ ಜಾಮೀನಿನ ಮೇಲೆ ಮನೆಗೆ ಮರಳಿದ್ದಾರೆ. ಅವರ ಮೇಲೆ ಕಲ್ಲು ತೂರಾಟದ ಕೇಸಿದೆಯಂತೆ!

ಬಂದರ್ ಪೊಲೀಸ್ ಠಾಣೆ ಮತ್ತು ಎಸ್.ಪಿ.ಯವರ ಕಚೇರಿಗೆ ಹೋಗಿ ಈ ಬಂಧನದ ಮಾರನೆ ದಿನ ಅವರ ಹೆಂಡತಿ ತನ್ನ ಗಂಡನನ್ನು ಬಂಧಿಸಿದ್ದು ಯಾಕೆ? ಎಂದು ಪ್ರಶ್ನಿಸಿದಾಗ ಅಲ್ಲಿನ ಸಿಬ್ಬಂದಿ ಅವರನ್ನು ಬೈದು ಕಳುಹಿಸಿದರು.

ಇಷ್ಟೇ ಅಸಂಗತವಾಗಿರುವ ಇನ್ನೊಂದು ಬಂಧನ ಫೈರುಝ್‌ಲ್ ಎಂಬ ತರುಣನದ್ದು. ಯಾವುದೋ ಕೆಲಸಕ್ಕೆ ಬಂದರ್‌ಗೆ ಬಂದ ಅವನು ಕರ್ಫ್ಯೂ ಇದ್ದಿದ್ದರಿಂದ ತಮ್ಮ ಮನೆಗೆ ಹೋಗಲಾಗದೆ, ತಮ್ಮ ಪರಿಚಯದ ಇಬ್ರಾಹಿಂ ಎಂಬುವರ ಮನೆಯಲ್ಲಿ ಮಲಗಿದ್ದ. ಪೊಲೀಸರು ಇಬ್ರಾಹಿಂ ಅವರ ಮಗ ಫಾರೂಕ್‌ನನ್ನು ಒಯ್ಯುವಾಗ ಜೊತೆಗೆ ಇರಲಿ ಎಂದು ಫೈರುಝ್‌ಲ್‌ನನ್ನೂ ಎಳೆದೊಯ್ದರು.

ಬಂದರ್‌ನಲ್ಲಿ ನಾವು ಹೋದ ಮನೆಗಳವರೆಲ್ಲ ಕೇಳುತ್ತಿದ್ದ ಪ್ರಶ್ನೆ ಒಂದೇ, "ವಿಚಾರಣೆ ನಡೆಸುವುದಕ್ಕೆ ಪೊಲೀಸರಿಗೆ ಹಗಲು ಇಲ್ಲವೆ? ಊರಿನಲ್ಲಿ ಕರ್ಫ್ಯೂ ಇರುವಾಗ ಹುಡುಗರು ಎಲ್ಲಿಗೆ ಓಡಿಹೋಗುತ್ತಾರೆ? ಹಾಗೆ ಅಂತಹ ಕೆಟ್ಟ ಕೆಲಸವನ್ನೇನಾದರೂ ಅವರು ಮಾಡಿದ್ದರೆ, ಮನೆಯಲ್ಲಿ ಯಾಕೆ ಮಲಗುತ್ತಿದ್ದರು?" ಆದರೆ ಬಂದರ್‌ನಲ್ಲಿ ಪೊಲೀಸರು ತಾವು ನುಗ್ಗಿದ ಮನೆಗಳ ಸೊತ್ತಿಗೆ ಕೈ ಹಾಕಲಿಲ್ಲ, ಉಳ್ಳಾಲದಲ್ಲಿ ಮಾಡಿದಂತೆ. ಕಾಲಲ್ಲಿ ಚಪ್ಪಲಿ ಇಲ್ಲದವ ಕಾಲೇ ಇಲ್ಲದವನನ್ನು ನೋಡಿ ಸಮಾಧಾನ ಪಟ್ಟುಕೊಂಡಂತೆ, ಇದೂ ಒಂದು ಸಮಾಧಾನದ ಸಂಗತಿ!

ಗೂಡಿನ ಬಳಿ

ಬಂಟ್ವಾಳ ಬಿ.ಸಿ. ರೋಡಿನ ಸಮೀಪದ ಗೂಡಿನ ಬಳಿ ನಡೆದ ಪೊಲೀಸ್ ದಾಳಿಗೆ ಒಂದು ಹಿನ್ನೆಲೆ ಇದೆ. ಅ. 13ರ ಶುಕ್ರವಾರ ಸಂಜೆ 7ರ ಸುಮಾರಿಗೆ ಬಿ.ಸಿ. ರೋಡಿನ ಬಸ್ ನಿಲ್ದಾಣದ ಸಮೀಪ 4 ತೋಟಾಗಳು ಸಿಡಿದು (ಕೆಲವು ಪತ್ರಿಕೆಗಳು ಗರ್ನಾಲು ಅಥವಾ ನಾಡ ಪಟಾಕಿಯ ಸ್ಫೋಟ ಎಂದೂ ವರದಿ ಮಾಡಿವೆ) ಅಕ್ಕಪಕ್ಕದ ನಾಲ್ಕು ಅಂಗಡಿಗಳಿಗೆ ಸ್ವಲ್ಪ ಹಾನಿ ಆಯಿತು. ಅಷ್ಟರಲ್ಲಿ ಯಾರೋ ಒಂದಿಬ್ಬರಿಗೆ ಇರಿದು ಪಲಾಯನ ಮಾಡಿದರು. ಅದಕ್ಕೆ ಸರಿಯಾಗಿ ಈ ಅವಾಂತರ ನಡೆಯುವಾಗ ಪೇಟೆಯಲ್ಲಿ ಕರೆಂಟ್ ಕೂಡ ಕೈಕೊಟ್ಟಿತ್ತು. ಈ ಕ್ಷುಲ್ಲಕ ಘಟನೆಯನ್ನೇ ಕರಾವಳಿಯ ಎಲ್ಲ ಪತ್ರಿಕೆಗಳೂ, ಮರುದಿನ, ಅದೊಂದು ಭಾರೀ ಭಯೋತ್ಪಾದಕ ಘಟನೆ ಎಂಬಂತೆ ದೊಡ್ಡ ತಲೆ ಬರಹಗಳಡಿಯಲ್ಲಿ ಪ್ರಕಟಿಸಿದವು. ಭಯೋತ್ಪಾದಕ ಘಟನೆ ಎಂದಮೇಲೆ ಅದನ್ನು ನಡೆಸಿದವರು ಮುಸ್ಲಿಮರು ಎಂದು ಬೇರೆ ಹೇಳಬೇಕಾಗಿಲ್ಲವಲ್ಲ?

ಕರಾವಳಿಯಲ್ಲಿ ಈ ಹಿಂದೆ ನಡೆದ ಮತ್ತು ಇನ್ನು ಮುಂದೆ ನಡೆಯಲಿರುವ ಎಲ್ಲ ಭಯೋತ್ಪಾದಕ ಕೃತ್ಯಗಳ ಏಕಸ್ವಾಮ್ಯವನ್ನು ಇಲ್ಲಿನ ಪತ್ರಿಕೆಗಳು ಮುಸ್ಲಿಮರಿಗೆ ಕೊಟ್ಟುಬಿಟ್ಟವೆ! ಬಿ.ಸಿ. ರೋಡ್ ಬಸ್ ಸ್ಟ್ಯಾಂಡಿನ ಈ ಭಾರೀ 'ತೋಟಾ ಸ್ಫೋಟ' ಮತ್ತು ಇಲ್ಲಿನ ಪತ್ರಿಕೆಗಳಲ್ಲಿ ಅದರ ಮಾರ್ದನಿಯ ನಂತರ ಪೊಲೀಸರು ಒಮ್ಮಿಂದೊಮ್ಮೆಗೇ ಕಾರ್ಯತತ್ಪರರಾಗಿ, ಬಿ.ಸಿ. ರೋಡ್ ಸಮೀಪದ ಗೂಡಿನ ಬಳಿಯ ಮುಸ್ಲಿಮರ ಮನೆಗಳಿಗೆ ನುಗ್ಗಿ ಸಾರಾಸಗಟಾಗಿ ಕೈಗೆ ಸಿಕ್ಕವರನ್ನೆಲ್ಲ ಬಂಧಿಸಿದರು. ಗೂಡಿನ ಬಳಿಯಲ್ಲಿ ಸುಮಾರು 200 ಮುಸ್ಲಿಮರ ಮನೆಗಳಿವೆ. ಅವರಲ್ಲಿ ಹೆಚ್ಚಿನವರು ಬೀಡಿ ಕಟ್ಟುವವರು; ಕೆಲವರು ಸಣ್ಣಪುಟ್ಟ ಕೂಲಿ ಕೆಲ... ಮಾಡುವವರು. ಎಲ್ಲರೂ ಕಡುಬಡವರು. ಪೊಲೀಸ... ಅವರ ಮನೆಗಳಿಗೆ ರಾತ್ರಿಯ ವೇಳೆಯಲ್ಲೇ ನು... ಮನೆಯಲ್ಲಿದ್ದವರಿಗೆ ಥಳಿಸಿ, 20 ಜನರನ್ನು 'ಯಾಕೆ ವಿಚಾ...' ಎಂದು ಹೇಳದೆ ಬಂಧಿಸಿದರು.

ಆದರೆ ತಮಗೆ ಬೇಕೆನ್ನಿಸಿದಾಗ "ಮಿಂಚಿ... ಕಾರ್ಯಾಚರಣೆ" ನಡೆಸುವಷ್ಟು ಚುರುಕಾಗಿರುವ ಬಿ... ರೋಡ್ ಠಾಣೆಯ ಪೊಲೀಸರಿಗೆ ಕಣ್ಣು ತೆರೆದಿಟ್ಟುಕೊಂಡ... ನಿದ್ರೆಹೋಗುವ ಕೆಟ್ಟ ಚಾಳಿ ಇದೆ! ಅ. 5ರ ಗುರುವಾ... ಬಜರಂಗದಳದವರ ಜಿಲ್ಲಾ ಬಂದ್ ದಿನ, ಬಿ... ರೋಡಿನಲ್ಲಿ ಹಾಡುಹಗಲೇ 11 ಮುಸ್ಲಿಮ... ಅಂಗಡಿಗಳು ಲೂಟಿ ಆಗುತ್ತಿದ್ದಾಗ ಅವರೆಲ್ಲರೂ... ಗಾಢ ನಿದ್ರೆಯಲ್ಲಿದ್ದರು! ಬಸ್‌ಸ್ಟ್ಯಾಂಡ್ ಸಮೀಪ... ವಾಸುದೇವ ಪ್ಲಾಜಾ ಕಟ್ಟಡದಲ್ಲಿದ್ದ 5 ಅಂಗಡಿಗ... – ಸಿರಾಜುದ್ದೀನ್‌ರ ಮೊಬೈಲ್ ಕೇರ್... ಅತೀಖ್-ಉರ್-ರೆಹಮಾನ್‌ರ ನ್ಯೂ ಜೆನಿ... ಟೈಮ್ಸ್, ಅಹ್ಮದ್ ಶರೀಫ್‌ರ ನ್ಯೂ ದುಲ್ಹ... ರೆಡಿಮೇಡ್ಸ್, ಮೊಹ್ಮದ್ ಶರೀಫ್‌ರ ಫ್ಯಾಷನ... ಪ್ಯಾಲೇಸ್ ಮತ್ತು ಸುಲೇಮಾನ್ ಸಾಬ್ ಅವ... ಮಾರ್ಕ್ ಕಮ್ಯುನಿಕೇಷನ್ಸ್ ಹಾಗೂ ಬಿ.ಸಿ. ರೋಡ... ಪೇಟೆಯಲ್ಲಿರುವ ಅಬ್ದುಲ್ ಕರೀಂರ ಅಕ್ಷಹ... ಫುಟ್‌ವೇರ್, ಅಬ್ದುಲ್ ರಜಾಕ್‌ರವ... ಗಾರ್ಮೆಂಟ್ಸ್, ಹಾರೂನ್ ರಶೀದ್‌ರ ಷೆಲ್‌ಟೈಮ... ಅಹ್ಮದ್ ಶರೀಫರ ಖೂಬ್ ಸೂರತ್ ಟೆಕ್ಸ್‌ಟೈಲ... ಮಹ್ಮದ್ ಹನೀಫ್‌ರ ಶೂ ಶಾಪ್ ಮತ್ತು ಅಬ್ದು... ಮಜೀದ್‌ರ ಹಣ್ಣಿನ ಅಂಗಡಿಗಳು ಸಂಪೂರ್ಣ... ಲೂಟಿಯಾಗಿದ್ದವು. ಸುಮಾರು 60 –7... ಜನರಿದ್ದ ಗುಂಪೊಂದು ಈ ಅಂಗಡಿಗ... ಶಟರ್‌ಗಳನ್ನು ಮುರಿದು, ಒಳಗಿದ್ದ ಮೊಬೈಲ್... ವಾಚು, ಎಲೆಕ್ಟ್ರಾನಿಕ್ ಸಾಮಗ್ರಿ, ರೆಡಿಮೇಡ... ಬಟ್ಟೆಗಳು, ಗಿಫ್ಟ್ ಐಟಂ ಮುಂತಾದವುಗಳ... ವನ್ನು ವ್ಯವಸ್ಥಿತವಾಗಿ ದೋಚಿ, ಶೋಕೇಸುಗಳ... ಪುಡಿ ಮಾಡಿ, ಲೈಟು, ಬಲ್ಬು ಟ್ಯೂಬುಗಳ... ಒಡೆದು, ಕಂಪ್ಯೂಟರ್, ಕುರ್ಚಿ, ಟೇಬಲ್ಲುಗಳ... ಮುರಿದುಹಾಕಿ, ಸೀಲಿಂಗ್ ಫ್ಯಾನುಗಳ... ಕಳಚಿಕೊಂಡೊಯ್ದದ್ದನ್ನು ನಾವು ಕಣ್ಣಾರೆ ಕಂಡೆ... ಬಿ.ಸಿ. ರೋಡ್ ಪೊಲೀಸ್ ಠಾಣೆಗೆ ಕೂಗಳತೆಯ... ಸಮೀಪದಲ್ಲಿ ಈ ಅಂಗಡಿಗಳಿವೆ. ಆದಾಗ್ಯೂ ... ಕೊಳ್ಳೆಹೊಡೆಯುವ ಕಾರ್ಯಕ್ರಮ, ಸುಮಾರು ಒಂ... ಗಂಟೆಗಳ ಕಾಲ ನಿರಾತಂಕವಾಗಿ ನಡೆಯಿತಂತೆ!

ಈ ಬಗೆಯ ವ್ಯವಸ್ಥಿತ ಹಿಂಸೆ, ಲೂಟಿ, ಧ್ವಂಸ... ಕಾರ್ಯಕ್ರಮವನ್ನು ಏನೆಂದು ಕರೆಯುತ್ತೀರಿ... ಲಾಗಾಯ್ತಿನಿಂದಲೂ ನಮ್ಮ ಮಾಧ್ಯಮಗಳು ಇವ... "ಕೋಮುಗಲಭೆ" ಎಂದೇ ಕರೆಯುತ್ತವೆ. ಆ ಶಬ್ದ ಎರ... ಕೋಮುಗಳ ನಡುವೆ ವೈಮನಸ್ಯ ಮತ್ತು ಜಟಾಪಟಿಗಳ... ಸೂಚಿಸುತ್ತದೆ. ಆದರೆ ಕರಾವಳಿಯ ಉದ್ದಕ್ಕೂ ಕಳ... 20 ವರ್ಷಗಳಲ್ಲಿ ಅಲ್ಲಲ್ಲಿ ಸಂಭವಿಸುತ್ತಿರುವ ಹಿಂ... ಚಾರವನ್ನು ಮೇಲೆ ಹೇಳಿದ ಅರ್ಥದಲ್ಲಿ 'ಗಲಭೆ' ಎನ್ನಲಾ... ವುದಿಲ್ಲ.

1992ರಲ್ಲಿ ಬಾಬರಿ ಮಸೀದಿ ಉರುಳಿದ ನಂ... ದ.ಕ. ಮತ್ತು ಉಡುಪಿ ಜಿಲ್ಲೆಗಳ ಅನೇಕ ಊರುಗಳ... ಮುಸ್ಲಿಮರ ಮನೆ, ಅಂಗಡಿಗಳ ಮೇಲೆ ಹಲ್ಲೆ ನಡೆಯಿ... ಅಲ್ಲಲ್ಲಿ ಮುಸ್ಲಿಮರನ್ನು-ಮಹಿಳೆಯರನ್ನು ತಡೆದು ನಿ... ಅವಮಾನಿಸುವ ಘಟನೆಗಳೂ ಸಂಭವಿಸಿವೆ. ಅನಂ... ಪುತ್ತೂರಿನ ಸೌಮ್ಯ ಕೊಲೆ ನಂತರದ ಘಟನಾವಳಿ, 199... ಸುರತ್ಕಲ್ ಹಿಂಸಾಚಾರ, ಕುಂದಾಪುರದ ಏಡ್ಸ್ ಸೂ... ಮತ್ತು ಆದಿ ಉಡುಪಿಯ ಬೆತ್ತಲೆ ಪ್ರಕರಣಗಳು ಹಾ... ಮುಸ್ಲಿಮರು ಮತ್ತು ಕೆಲವೆಡೆ ಪ್ರಾಟೆಸ್ಟಂಟ್ ಪಂಥ... ಕ್ರಿಶ್ಚಿಯನ್ನರ ಮೇಲೆ ಅಲ್ಲಲ್ಲಿ ನಡೆದ ಹಲ್ಲೆಗಳು- ಇ... ಯಾವುದನ್ನೂ ಗಲಭೆ ಎಂದು ಕರೆಯಲಾಗದು. ... ಘಟನೆಗಳಲ್ಲಿ ಘರ್ಷಣೆಯೂ ಇರಲಿಲ್ಲ; ಇತ್ತಂಡಗಳ... ಇರಲಿಲ್ಲ. ಇವು ಕರಾವಳಿಯ ಹಿಂದುತ್ವವಾದಿಗ... ಏಕಪಕ್ಷೀಯವಾಗಿ ನಡೆಸಿದ ಹಿಂಸಾಚಾರದ ಕೃತ್ಯಗ... ಮಾಧ್ಯಮದವರ ತುಂಬು ಸಹಕಾರದೊಂದಿಗೆ ಮುಸ್ಲಿಮ... ವಿರುದ್ಧ ಇಲ್ಲಸಲ್ಲದ ಆರೋಪಗಳನ್ನು ಹೊರಿಸುವುದ... ಅವರಿಂದ ತಾವು ಅನ್ಯಾಯಕ್ಕೆ ಒಳಗಾಗಿದ್ದೇವೆ ಎಂ... ಬೊಬ್ಬೆ ಹಾಕುವುದು ಮತ್ತು ಅವರ ಮೇಲೆ ಎರಗುವುದ... ಇದು ಕರಾವಳಿಯಲ್ಲಿ ಕೋಮುಗಲಭೆಗಳು ನಡೆಯು... ರೀತಿ. ಆದರೆ ಮಂಗಳೂರಿನಲ್ಲಿ ಈ ಬಾರಿ ಮುಸ್ಲಿಮ... ಬಾಯಲ್ಲಿ ಬೆಟ್ಟಿಟ್ಟು ಕೂರಲಿಲ್ಲ. ಕೆಲವೆಡೆ ಅವರ... ಗುಂಪು ಸೇರಿ, ಬೀದಿಗಿಳಿದು ಯಥಾನುಶಕ್ತಿ ದೊಂ... ನಡೆಸಿದ್ದಾರೆ. ಇಷ್ಟಕ್ಕೇ ನಮ್ಮ ಗೃಹಮಂತ್ರಿಯವರು SIM... KFDಗಳನ್ನೆಲ್ಲ ಎಳೆದು ತಂದಿದ್ದಾರೆ. ಅವರಿಗೆ ಯ... ISI ನೆನಪಾಗಲಿಲ್ಲ? ಬಿ.ಜೆ.ಪಿ.ಯವರ ಪಟ್ಟಿಯಲ್ಲಿ I... ಕೂಡ ಇದೆ!

ಗಿರಿನಗರ ಉಳಿಯುತ್ತಾ-ಉರುಳುತ್ತಾ?

ಬೆಂಗಳೂರಿನ ಸೀತಾ ಸರ್ಕಲ್ ಏರಿಯಾ ಸುತ್ತಲಿನ ಗಿರಿನಗರ 4 ನೇ ಹಂತದಲ್ಲಿ ರಾತ್ರೋರಾತ್ರಿ ಬಡಾವಣೆ ಎದ್ದೇಳುತ್ತಿದೆ. ಕಳೆದ 30 ವರ್ಷಗಳಿಂದ ಪೂರಾ ಖಾಲಿ ಬಿದ್ದಿದ್ದ 79 ಎಕರೆ ಜಾಗದಲ್ಲಿ ದಿಢೀರೆಂದು ಸಾವಿರಾರು ಕಾಂಪೌಂಡುಗಳು ಕಾಣಿಸಿಕೊಂಡಿವೆ. ರಾತ್ರೋರಾತ್ರಿ ನೂರಾರು ಮನೆಗಳನ್ನು ಕಟ್ಟಲಾಗುತ್ತಿದೆ. ಇವರೆಲ್ಲಾ ಕೃಷ್ಣಭಟ್ಟನ ವಿಶ್ವಭಾರತಿ ಗೃಹ ನಿರ್ಮಾಣ ಸಹಕಾರ ಸಂಘದ ಮೆಂಬರ್‌ಗಳು.

ಇವರೆಲ್ಲಾ ಮಧ್ಯಮ ವರ್ಗದ ಸಾಮಾನ್ಯ ಜನರೇ ಆದರೂ ಕೂಡ ಒಂದಿಡೀ ಲೇಔಟ್ ಅನ್ನೇ ಇಷ್ಟು ತರಾತುರಿಯಲ್ಲಿ ಕಟ್ಟುತ್ತಿರುವುದ್ಯಾಕೆ ಎಂದು ಕೆದಕಲು ಹೊರಟರೆ ಬೆಂಗಳೂರಿನ ರಿಯಲ್ ಎಸ್ಟೇಟ್ ದಂಧೆಕೋರರ ಕರಾಳ ಮುಖಗಳು ಕಾಣಸಿಗುತ್ತವೆ.



ತಲೆಯೆತ್ತುತ್ತಿರುವ ದಿಢೀರ್ ಲೇಔಟ್

ಒಂದೆಡೆ ಬಿಡಿಎ ಆ ಜಾಗ ತನ್ನದೆಂದು ನಿತ್ಯ ಸೈನ್ಯ ಕಟ್ಟಿಕೊಂಡು ದಾಳಿಗೆ ಬಂದೂ ಹೋಗಿ ಮಾಡುತ್ತಿದೆ. ಮತ್ತೊಂದೆಡೆ ಕೃಷ್ಣಭಟ್ಟ 'ನಾನು ಇಂತಿಂಥವರಿಗೆ ಎಷ್ಟೆಷ್ಟು ಕೋಟಿ ಲಂಚ ಕೊಟ್ಟೆ ಈ ಲೇಔಟ್ ನಮ್ಮದೇ ಎಂದು ಊರು ತುಂಬಾ ಟಾಂಟಾಂ ಬಾರಿಸಿಕೊಂಡು ತಿರುಗುತ್ತಿದ್ದಾನೆ. ಇದರ ಗದ್ದಲದ ಮಧ್ಯೆ ಬೆಂಗಳೂರಿನ ನೆಲಗಳ್ಳ ಕಬ್ಬಡಿ ಬಾಬು ಗ್ಯಾಂಗೂ ಆಪರೇಟ್ ಮಾಡುತ್ತಿದೆ. ಸೈಟು ಸಿಗುತ್ತದೆಂದು ವಿಶ್ವಭಾರತಿಗೆ ಮೆಂಬರ್‌ಗಳಾಗಿದ್ದವರಿಂದ ಇದೇ ಲಾಸ್ಟ್ ಛಾನ್ಸ್ ಎಂಬಂತೆ ವಿಶ್ವ ಭಾರತಿಯ ಪುತ್ರರು ಬೇಕಾಬಿಟ್ಟಿ ಕಾಸು ಕೀಳುತ್ತಿದ್ದಾರೆ.

ಮಂಜುನಾಥನೇ ಇದರ ಕಿಂಗ್‌ಪಿನ್. ಇವನು ಸಂಘದ ಕಾರ್ಯದರ್ಶಿ.

ಗಿರಿನಗರದ ಪುರಾತನ ಕತೆ


ಇವತ್ತು ಗಿರಿನಗರ ಅನ್ನಿಸಿಕೊಂಡಿರುವ ಏರಿಯಾ 3 ದಶಕಗಳ ಹಿಂದೆ ಗೇರಹಳ್ಳಿ ಎನಿಸಿಕೊಂಡಿತ್ತು. ಪಕ್ಕದ ಆವಲಹಳ್ಳಿಯ ಪಟೇಲರಿಗೆ ಇದೇ ಗೇರಹಳ್ಳಿಯಲ್ಲಿ ನೂರು ಚಿಲ್ಲರೆ ಎಕರೆ ಜಮೀನಿತ್ತು. ಇದನ್ನೆಲ್ಲಾ ಹತ್ತಾರು ರೈತರಿಗೆ ಗೇಣಿಗೆ ಬಿಟ್ಟಿದ್ದ ಪಟೇಲ ನಂತರ ಭೂಸುಧಾರಣೆ ಕಾಯ್ದೆಯಡಿ ಎಲ್ಲಾ ಭೂಮಿ ಕಳೆದುಕೊಂಡಾದ ಮೇಲೆ ಸೀದಾ ಕೋರ್ಟ್‌ಗೆ ಹೋಗಿದ್ದ. ಇತ್ತ ರೈತರಿಗೆ ಚೂರುಪಾರು ಕಾಸು ಕೊಟ್ಟು ವಿಶ್ವಭಾರತಿಯ ಕೃಷ್ಣಭಟ್ಟ ಅಗ್ರಿಮೆಂಟ್ ಮಾಡಿಕೊಂಡು ಅದೇ ಜಾಗದಲ್ಲಿ ಲೇಔಟ್ ಮಾಡಲು ಹೊರಟ. ಇದನ್ನು ಕೇಳಿ ಗಾಬರಿಯಾದ ಪಟೇಲ ನೇರಾ ಬಿಡಿಎ ಜೊತೆ ಅಗ್ರಿಮೆಂಟ್ ಮಾಡಿಕೊಂಡು ಬಿಟ್ಟಿದ್ದ. ಈ ನಾಲ್ಕೂ ಜನರ ಗುಂಪಿನ ಮಾಲೀಕತ್ವದ ಕಿತ್ತಾಟದಲ್ಲಿ ತಲೆ ಎತ್ತುತ್ತಿರುವುದೇ ಇವತ್ತಿನ ಗಿರಿನಗರ ಲೇಔಟ್.


ಕೃಷ್ಣಭಟ್ಟ

ಈ ಜಾಗದ ಇವತ್ತಿನ ಅಸಲಿ ಮಾಲೀಕರ್‍ಯಾರೆಂಬ ವಿವಾದ ಹೈಕೋರ್ಟ್ ಹಾಗೂ ಸುಪ್ರೀಂಕೋರ್ಟ್ ತನಕ ಹೋಗಿ ತರೇವಾರಿ ತೀರ್ಪುಗಳು ಬಂದು ಚರ್ವಿತಚರ್ವಣವಾಗಿವೆ. ಈ ಮಧ್ಯೆ ಪಟೇಲರ ಸರ್ಕಾರವಿದ್ದಾಗ ಆಗಿನ ಬಿಡಿಎ ಚೇರ್ಮನ್ ಎಲ್.ಆರ್. ಶಿವರಾಮೇಗೌಡನಿಗೆ ಕೃಷ್ಣಭಟ್ಟ ನಾಲ್ಕೂವರೆ ಕೋಟಿ ಲಂಚ ಕೊಟ್ಟು ಇಡೀ ಬಡಾವಣೆಯನ್ನೇ ಕಾನೂನುಬದ್ಧಗೊಳಿಸುವ ದುಸ್ಸಾಹಸ ಮಾಡಿದ್ದ. ಅದಕ್ಕಾಗಿ ಸಂಘದ ಸದಸ್ಯರಿಂದ ಕಾಸು ಕಿತ್ತಿದ್ದ ಭಟ್ಟ, ಮತ್ತು ಹಾಗೆ ಲಂಚ ಕೊಟ್ಟಿದ್ದ ವಿಚಾರವನ್ನು ಸಂಘದ ವಾರ್ಷಿಕ ವರದಿಯಲ್ಲೂ ಪ್ರಕಟಿಸಿಬಿಟ್ಟಿದ್ದ. ಹಾಲಿ ಸಂಘದಲ್ಲಿ ಸೈಟು ಬೇಕೆಂದು ಹಣ ಕಟ್ಟಿರುವವರ ಸಂಖ್ಯೆ ಮೂರು ಸಾವಿರಕ್ಕಿಂತಾ ಜಾಸ್ತಿ ಇದೆ. ಆದರೆ ಇರುವ 79 ಎಕರೆಯಲ್ಲಿ ಹೆಚ್ಚೆಂದರೆ 1200 ಸೈಟುಗಳಾಗುತ್ತವೆ ಅಷ್ಟೇ.

ಈ ನಡುವೆ ಏನಾಯಿತೆಂದರೆ ಸಂಘದ 35 ಜನ ಮೆಂಬರ್‌ಗಳು ಕಳೆದ ಆಗಸ್ಟ್‌ನಲ್ಲಿ ಕೋರ್ಟ್‌ಗೆ ಹೋಗಿ ತಮಗೆ ಮನೆ ಕಟ್ಟಿಕೊಳ್ಳಲು ಯಾರೂ ಅಡೆತಡೆ ಮಾಡದಂತೆ ರಕ್ಷಣೆ ನೀಡಬೇಕೆಂದು ಕೇಳಿದಾಗ ಸೆಪ್ಟೆಂಬರ್ 4 ರಿಂದ ನವೆಂಬರ್ 4 ರ ವರೆಗೆ ಯಥಾಸ್ಥಿತಿ ಕಾಪಾಡಿಕೊಳ್ಳುವಂತೆ ಕೋರ್ಟ್ ಆದೇಶಿಸಿತ್ತು. ಆದರೆ ಇದನ್ನು ತಿರುಚಿ ಅರ್ಥೈಸಿದ ವಿಶ್ವಭಾರತಿ ಸಂಘದ ಮಂಜುನಾಥ ಎಲ್ಲರೂ ಅವರವರ ಸೈಟುಗಳಿಗೆ ಕಾಂಪೌಂಡ್ ಹಾಕಿಕೊಳ್ಳುವಂತೆ ಕುಮ್ಮಕ್ಕು ಕೊಟ್ಟ. ಆಗಲೇ ಶುರುವಾಗಿದ್ದು ಹಾಹಾಕಾರ.

ಈಗ ಇರುವ ಸಾವಿರದಿನ್ನೂರು ಸೈಟುಗಳಿಗೆ ಬರೋಬ್ಬರಿ ಮೂರು ಸಾವಿರ ಆಕಾಂಕ್ಷಿಗಳಿದ್ದಾರೆ. ಈ ಕೃಷ್ಣಭಟ್ಟ ಬೇರೆ ಇಡೀ ಲೇಔಟ್ ಪ್ಲಾನನ್ನು ಮೂರು ಸಾರಿ ಬದಲಾಯಿಸಿದ್ದಾನೆ. ಒಂದು ಪ್ಲಾನಿನಲ್ಲಿ ಸೈಟು ಸಿಕ್ಕವರಿಗೆ ಪರಿಷ್ಕೃತ ಪ್ಲಾನಿನಲ್ಲಿ ಸೈಟಿಲ್ಲ. ಅಕಸ್ಮಾತ್ ಕೆಲವರಿಗೆ ಅಲಾಟ್ ಆಗಿದ್ದರೂ ಬೇರೆ ನಂಬರ್ ಸೈಟ್ ಕೊಡಲಾಗಿದೆ. ಹೀಗಾಗಿ ಯಾವ ಸೈಟಿಗೆ ಯಾರು ಅಸಲಿ ಮಾಲೀಕರೆಂಬುದೇ ಗೊತ್ತಾಗದಂತೆ ಮಾಡಿಬಿಡಲಾಗಿದೆ. ಇಷ್ಟೂ ಸಾಲದೆಂಬಂತೆ ಸದಸ್ಯರ ಸೈಟಿಲ್ಲಿದೆ ಎಂದು ತೋರಿಸಬೇಕೆಂದರೆ 2 ಲಕ್ಷ ಕೊಡಿ, 3 ಲಕ್ಷ ಕೊಡಿ ಎಂಬ ತಗಾದೆ ಬೇರೆ. ಈಗಾಗಲೇ ವಿಶ್ವಭಾರತಿಗೆ ಹಣ ಕಟ್ಟಿ ಕಟ್ಟೀ ರೋಸಿ ಹೋಗಿರುವ ಜನ 'ಇನ್ನೆರಡು ಲಕ್ಷ ತಾನೆ ಹಾಳಾಗಿ ಹೋಗಲಿ' ಎಂದು ಸಾಲಸೋಲ ಮಾಡಿ ಹಣ ತಂದು ಕೊಡುತ್ತಿದ್ದಾರೆ.


ಬಿಡಿಎ-ವಿಶ್ವಭಾರತಿ ಜಟಾಪಟಿ


ಈ ಮಧ್ಯೆ ಈ ಸೈಟು ನಂದು, ಆ ಸೈಟು ನಿಂದೆಂಬ ಜಗಳ ಸದಸ್ಯರಲ್ಲೇ ಶುರುವಾಗಿ ಕಬಡ್ಡಿ ಬಾಬು ಮಧ್ಯ ಪ್ರವೇಶವಾಗಿದೆ. ಸಿಎಂಗೇಳಿ ಎಲ್ಲಾ ಸೆಟಲ್ ಮಾಡಿಸ್ತೀನಿ ಎಂದು ಬಾಬೂನು ಜನರಿಂದ ಹತ್ತಾರು ಲಕ್ಷ ಕಿತ್ತಿದ್ದಾನೆಂಬ ಸುದ್ದಿಗಳಿವೆ. ಸಂಘದ ಮೆಂಬರ್‌ಗಳಂತೂ 'ನಮ್ಮ ಸೈಟೊಂತ ಯಾವುದೋ ಒಂದು ಜಾಗ ಇರಲಿ ಎಂದು ಸಿಕ್ಕಸಿಕ್ಕ ಜಾಗಕ್ಕೆಲ್ಲಾ ಸಿಮೆಂಟ್ ಇಟ್ಟಿಗೆಯ ಕಾಂಪೌಂಡ್ ಹಾಕಿಕೊಂಡು ಬಿಟ್ಟಿದ್ದಾರೆ. ಈಗ ಸೀತಾ ಸರ್ಕಲ್‌ನಲ್ಲೇ ಮರಳು, ಸಿಮೆಂಟ್ ಕಬ್ಬಿಣದ ವ್ಯಾಪಾರ ಶುರುವಾಗಿದೆ. ಗುಲ್ಬರ್ಗಾ ಕಡೆಯ ಸಾವಿರಾರು ಕೂಲಿಗಳು ಹಗಲು-ರಾತ್ರಿ ಮನೆ-ಕಾಂಪೌಂಡು ಎಬ್ಬಿಸುತ್ತಿದ್ದಾರೆ. ಇವರುಗಳಿಗೆ ಡಬಲ್ ಕೂಲಿ ಕೊಟ್ಟು ಕೆಲಸ ಮಾಡಿಸಲಾಗುತ್ತಿದೆ.

ಈ ಮಧ್ಯೆ ಬಿಡಿಎ ಸಿಬ್ಬಂದಿ ಬುಲ್ಡೋಜರ್ ಸಮೇತ ಮೂರು ಬಾರಿ ಮನೆ-ಕಾಂಪೌಂಡ್ ಕೆಡವಲು ಬಂದು ಜನರ ಗಲಾಟೆಗೆ ಹೆದರಿ ವಾಪಸ್ ಹೋಗಿದ್ದಾರೆ.

ನವೆಂಬರ್ 4 ರ ಡೆಡ್‌ಲೈನ್ ಮುಗಿದ ಮೇಲೆ ಏನಾಗುತ್ತದೋ ಆ 'ಕೃಷ್ಣ' ಪರಮಾತ್ಮನೇ ಬಲ್ಲ!

-ಬಿಳಿದಾಳೆ ಈಶ

ಕ್ರಿಕೆಟ್ ಕೊಲ್ಲುತ್ತಿರುವ ಮಾರ್ವಾಡಿ ಬ್ರಿಜೇಶ್...



It is not cricket....

ಮಾರ್ವಾಡಿ ಬುದ್ಧಿಯವನೊಬ್ಬ ಕ್ರಿಕೆಟನ್ನೇ ಕೊಲ್ಲುವ ಆಟವಿದು. ಕಳೆದ 8 ವರ್ಷಗಳಿಂದ ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ (KSCA)ನ ಸೆಕ್ರೆಟರಿ ಹುದ್ದೆಯಲ್ಲಿ ಕುಳಿತಿರುವ ಬ್ರಿಜೇಶ್ ಪಟೇಲ್‌ನ ಹೊಸ ಹೊಸ 'ಆಟ'ಗಳ ಕಾರಣಕ್ಕೆ ಕರ್ನಾಟಕದ ಕ್ರಿಕೆಟ್ಟೇ ಸತ್ತು ಹೋಗುತ್ತಿದೆ. ದಾಲ್ಮಿಯಾನ ಈ ಬೆಂಬಲಿಗ ದಾಲ್ಮಿಯಾನಷ್ಟೇ ಅಪಾಯಕಾರಿಯೂ ಹೌದು.

ಸಾಯುವವರೆಗೂ ಕೆಎಸ್‌ಸಿಎ ಕುರ್ಚಿ ಬಿಡಬಾರದೆಂದು ತೀರ್ಮಾನಿಸಿರುವ ಬ್ರಿಜೇಶ್‌ನನ್ನು ಹಾಗೇ ಬಿಟ್ಟರೆ, ಇನ್ನೊಂದು ವರ್ಷದಲ್ಲಿ ಕನ್ನಡದ ಮಕ್ಕಳು ಕ್ರಿಕೆಟ್ಟಿನಿಂದ ಮಾರುದೂರ ಹೋಗಲಿದ್ದಾರೆ.

ಬೈಲಾ ಬಯಲು

ಇಷ್ಟು ವರ್ಷ ಬ್ರಿಜೇಶ್ ಪಟೇಲನಿಂದಾದ ಹಾನಿ ನಿಮಗೆ ಗೊತ್ತೇ ಇದೆ. ಸಿ. ನಾಗರಾಜ್ ಅವಾಂತರಗಳಿಂದ ಬೇಸತ್ತ ಕ್ರಿಕೆಟ್ ಪ್ರಿಯರೆಲ್ಲ ಕ್ರಿಕೆಟ್ ಆಡಿದ ಅನುಭವಿಗಳೇ ಅಸೋಸಿಯೇಷನ್ ಜವಾಬ್ದಾರಿ ಹೊರಲಿ ಎಂದು ಬಯಸಿದರು. ಅದರ ಫಲವೆಂಬಂತೆ ಬ್ರಿಜೇಶ್ ಟೀಮ್ ಅಸೋಸಿಯೇಷನ್‌ಗೆ ಎಂಟ್ರಿ ಪಡೆಯಿತು. ಆದರೆ ಕ್ರಿಕೆಟ್ ಬಿಟ್ಟು ಉಳಿದೆಲ್ಲವನ್ನೂ ಮಾಡಿದ ಬ್ರಿಜೇಶ್ ಪಟೇಲ್ ಸಿಕ್ಕಸಿಕ್ಕ ಮಾರ್ವಾಡಿಗಳಿಂದ ಲಕ್ಷ ರೊಕ್ಕ ಪಡೆದು ಅವರನ್ನೆಲ್ಲ ಸದಸ್ಯರನ್ನಾಗಿಸಿಬಿಟ್ಟ. ಇತ್ತೀಚೆಗೆ ಅಸೋಸಿಯೇಷನ್ ಸದಸ್ಯ ಶ್ರೀಕಂಠದತ್ತ ಒಡೆಯರ್ ಬೋರ್ಡ್ ಎಲೆಕ್ಷನ್‌ಗೆ ನಿಲ್ಲಲು ಆಸಕ್ತಿ ವಹಿಸಿದ್ದು ಬ್ರಿಜೇಶ್ ಪಟೇಲ್ ಗ್ಯಾಂಗ್‌ಗೆ ಭಯ ಹುಟ್ಟಿಸಿತು. ಮುಂದಿನ ವರ್ಷ ಸೆಪ್ಟೆಂಬರ್‌ಗೆ ಚುನಾವಣೆ. ತನ್ನ ಕಸರತ್ತುಗಳ ಫಲವಾಗಿ ಅಧಿಕಾರ ಕೈ ಬಿಡುವುದು ಗ್ಯಾರಂಟಿ ಎಂದು ಅರಿತ ಬ್ರಿಜೇಶ್ ಪಟೇಲ್ ತಂತ್ರವೊಂದನ್ನು ರೂಪಿಸಿದ. ಅದು ಒಡೆಯರ್ ಮುಂದಿನ ವರ್ಷದ ಚುನಾವಣೆಗೆ ಸ್ಪರ್ಧಿಸದಂತೆ ಮಾಡುವ ಕುತಂತ್ರ.

ಅಕ್ಟೋಬರ್ 28 ರಂದು ವಾರ್ಷಿಕ ಸಭೆ ಕರೆದ ಬ್ರಿಜೇಶ್, ಅಸೋಸಿಯೇಷನ್ ಬೈಲಾ ತಿದ್ದುವ ಪ್ರಸ್ತಾಪ ಇಟ್ಟ. ಅದರ ಸಾರಾಂಶವಿಷ್ಟೇ: ಕೆಎಸ್‌ಸಿಎ ಅಧ್ಯಕ್ಷರಾಗಲು ಕನಿಷ್ಠ ಒಂದು ಅವಧಿ (3 ವರ್ಷ)ಗೆ ಉಪಾಧ್ಯಕ್ಷ ಅಥವಾ ಸೆಕ್ರೆಟರಿ ಅಥವಾ ಖಜಾಂಚಿ ಆಗಿರಬೇಕು. ಉಪಾಧ್ಯಕ್ಷ, ಸೆಕ್ರೆಟರಿ, ಖಜಾಂಚಿಯಾಗಲು ಕನಿಷ್ಠ ಒಂದು ಅವಧಿಗೆ ಮ್ಯಾನೇಜಿಂಗ್ ಕಮಿಟಿಯ ಮೆಂಬರ್ ಆಗಿರಬೇಕು. ಈ ನಿಯಮವನ್ನು 2010 ರಿಂದ ಜಾರಿಗೆ ತರುತ್ತೇವೆ ಎಂದು ಹೇಳುವ ಬ್ರಿಜೇಶ್ ಇಲ್ಲೂ ತನ್ನ ಮಾರ್ವಾಡಿ ಬುದ್ಧಿ ತೋರಿಸಿದ. ಜನರಲ್ ಬಾಡಿ ಹೇಳಿದರೆ 2007 ರಿಂದಲೇ ಈ ನಿಯಮ ಜಾರಿಗೆ ತರಬಹುದು ಎಂಬ ಸಾಲನ್ನು ಸೇರಿಸಿಬಿಟ್ಟಿದ್ದ.

ಅಂದರೆ ಮುಂದಿನ ವರ್ಷದ ಚುನಾವಣೆಯಲ್ಲಿ ಒಡೆಯರ್ ಸ್ಪರ್ಧಿಸದಂತೆ ಮಾಡುವುದು ಬ್ರಿಜೇಶ್ ಗುರಿಯಾಗಿತ್ತು. ಬ್ರಿಜೇಶ್ ಈ ಪ್ರಸ್ತಾಪ ಮಾಡುತ್ತಿದ್ದಂತೆ ಬಹುತೇಕ ಸದಸ್ಯರು ಹಿಗ್ಗಾಮುಗ್ಗಾ ಉಗಿಯತೊಡಗಿದರು. ಕೊನೆಗೆ ಬ್ರಿಜೇಶ್ ತನ್ನ ತಪ್ಪನ್ನು ಒಪ್ಪಿಕೊಳ್ಳಬೇಕಾಯ್ತು.

ಕುಂಬ್ಳೆ, ಶ್ರೀನಾಥ್, ದ್ರಾವಿಡ್ ಎಲ್ರಿಗೂ ದೋಖಾ?

ಬ್ರಿಜೇಶ್‌ನ ಈ ಕುತಂತ್ರ ಯಶಸ್ವಿ ಆಗಿಬಿಟ್ಟಿದ್ದರೆ ಕುಂಬ್ಳೆ, ಶ್ರೀನಾಥ್, ದ್ರಾವಿಡ್, ಪ್ರಸಾದ್‌ಗಳೆಲ್ಲ ಕ್ರಿಕೆಟ್ ಅಸೋಸಿಯೇಷನ್‌ನ ಉನ್ನತ ಪದವಿಗೇರಲು ಕನಿಷ್ಠ ಹತ್ತು ವರ್ಷ ಕಾಯಬೇಕಿತ್ತು, ಏಕೆಂದರೆ ಮೊದಲು ಇವರೆಲ್ಲ ಒಂದು ಅವಧಿಗೆ (ಮೂರು ವರ್ಷ) ಮ್ಯಾನೇಜ್‌ಮೆಂಟ್ ಕಮಿಟಿಯ ಸದಸ್ಯರಾಗಬೇಕು!

ಸದ್ಯಕ್ಕೆ ಬ್ರಿಜೇಶ್‌ನ ಅವಾಂತರಗಳಿಗೆ ತಡೆ ಬಿದ್ದಿದೆ. ಬಹುಶಃ ಇದು ಬ್ರಿಜೇಶ್‌ನ ಕೊನೆ ಅಧ್ಯಾಯ ಎನಿಸುತ್ತದೆ.

ಮಗನಿಗಾಗಿ.... ಮನಿಗಾಗಿ

ಇವತ್ತು ಕರ್ನಾಟಕದ ಅಂಡರ್ 13, ಅಂಡರ್ 15, ಅಂಡರ್ 17, ಅಂಡರ್ 19 ಅಷ್ಟೇ ಏಕೆ ರಣಜಿ ತಂಡಕ್ಕೆ ಸೆಲೆಕ್ಟ್ ಆಗಬೇಕೆ? ತ್ವರೆ ಮಾಡಿ ಬ್ರಿಜೇಶ್ ಪಟೇಲ್ ಕ್ರಿಕೆಟ್ ಅಕಾಡೆಮಿ ಸೇರಿರಿ... ಧಾರವಾಡ, ರಾಯಚೂರು, ತುಮಕೂರು, ಶಿವಮೊಗ್ಗ ವಲಯದ ಕ್ರಿಕೆಟ್ ಪ್ರತಿಭೆಗಳಿಗೆ ಇಲ್ಲಿ ಕೇರೇ ಮಾಡಲ್ಲ. ಬೆಂಗಳೂರು, ಮೈಸೂರು ವಲಯದವರು, ಅದರಲ್ಲೂ ಬ್ರಿಜೇಶ್ ಅಕಾಡೆಮಿಯಲ್ಲಿ ತರಬೇತಿ ಪಡೆದವರಿಗೆ ರತ್ನಗಂಬಳಿ. ಏಕೆಂದರೆ ಬಹುತೇಕ ಆಯ್ಕೆದಾರರೆಲ್ಲ ಬ್ರಿಜೇಶ್ ಅಕಾಡೆಮಿಯಲ್ಲಿ ಕೋಚ್‌ಗಳು.

ಅದಕ್ಕೆ ಹಿಂದೊಮ್ಮೆ ರಾಷ್ಟ್ರದ ಬೆಸ್ಟ್ ಟೀಮ್ ಎನಿಸಿದ್ದ ಕರ್ನಾಟಕ ತಂಡ ವರ್ಷದಿಂದ ವರ್ಷಕ್ಕೆ ಕೆಳಗಿಳಿಯುತ್ತಲೇ ಇದೆ. ಬ್ರಿಜೇಶ್ ಪಾಲಿಟಿಕ್ಸ್‌ಗೆ ಬೇಸತ್ತ ಆಟಗಾರರು ಹೊರ ರಾಜ್ಯ ತಂಡಗಳಿಗೆ ವಲಸೆ ಹೋಗುತ್ತಿದ್ದಾರೆ. ವರ್ಷಕ್ಕೊಬ್ಬ ಹೊಸ ಕ್ಯಾಪ್ಟನ್ ಬರುತ್ತಿದ್ದಾನೆ. ಆರಂಭಿಕ ಬ್ಯಾಟ್ಸ್‌ಮನ್ ಜೆ. ಅರುಣ್‌ಕುಮಾರ್, ಭರವಸೆಯ ಲೆಗ್‌ಸ್ಪಿನ್ನರ್ ಆನಂದ ಕಟ್ಟಿ ಅಸ್ಸಾಮ್ ತಂಡಕ್ಕೆ ಆಡುತ್ತಿದ್ದಾರೆ.


ಧರ್ಮಿಚಂದ್

ಅದರಲ್ಲೂ ಆಫ್‌ಸ್ಪಿನ್ನರ್‌ಗಳ ಗೋಳು ಕೇಳುವ ಹಾಗೇ ಇಲ್ಲ... ಪುತ್ರ ಉದಿತ್ ಪಟೇಲ್‌ನನ್ನು ಭಾರತ ತಂಡಕ್ಕೆ ಸೇರಿಸಲೇಬೇಕು ಎಂದು ಹಠ ತೊಟ್ಟಿರುವ ಬ್ರಿಜೇಶ್ ಉಳಿದೆಲ್ಲ ಆಫ್‌ಸ್ಪಿನ್ನರ್‌ಗಳಿಗೆ ಇಲ್ಲದ ಕಿರುಕುಳ ಕೊಡುತ್ತಿದ್ದಾನೆ. ಉದಿತ್‌ನನ್ನು ಭಾರತ ಅಂಡರ್ 19 ತಂಡಕ್ಕೆ ಆಡಿಸಿ ನೋಡಿದ್ದೂ ಆಯ್ತು.... ಪಾಲಿಟಿಕ್ಸ್ ಮಾಡಿ ಆಸ್ಟ್ರೇಲಿಯಾಕ್ಕೆ ತರಬೇತಿಗೆ ಕಳಿಸಿದ್ದೂ ಆಯ್ತು. ಆದರೆ ಉದಿತ್ ಪಟೇಲ್ ಒಬ್ಬ ಸಾಮಾನ್ಯ ಕ್ರಿಕೆಟರ್ ಎಂಬುದು ಸಾಬೀತಾಗುತ್ತಲೇ ಇದೆ. ಉದಿತ್ ಕಾರಣದಿಂದ ಆಫ್‌ಸ್ಪಿನ್ನರ್‌ಗಳಾದ ರೆಯಾನ್ ನಿಯಾನ್, ವಿನೂ ಪ್ರಸಾದ್‌ಗಳು ಗೋವಾ ತಂಡ ಸೇರಿಬಿಟ್ಟರು. ಇನ್ನು ಮವೆಲಾ ಧರ್ಮಿಚಂದ್ ಎಂಬ ಪ್ರತಿಭೆಯನ್ನು ಹೊಸಕಿ ಹಾಕಿದ್ದೇ ಬ್ರಿಜೇಶ್ ಪಟೇಲ್! ಚಂದ್ರಶೇಖರ್, ಪ್ರಸನ್ನರಿಂದ ಪ್ರಶಂಸೆಗೊಳಗಾಗಿದ್ದ, ಇಲ್ಲೇ ಇದ್ದಿದ್ದರೆ ಇಷ್ಟೊತ್ತಿಗೆ ಭಾರತ ತಂಡದಲ್ಲಿರಬಹುದಾಗಿದ್ದ ಆಫ್‌ಸ್ಪಿನ್ನರ್ ಧರ್ಮಿಚಂದ್‌ಗೆ ಅವಕಾಶವನ್ನು ತಪ್ಪಿಸಿ, ಉದಿತ್ ಪಟೇಲ್‌ನನ್ನು ಆಡಿಸತೊಡಗಿದ್ದರಿಂದ ಧರ್ಮಿಚಂದ್ ದೇಶವನ್ನೇ ತೊರೆದುಬಿಟ್ಟ. ಹತ್ತು ವರ್ಷಗಳ ಕಾಲದ ಬಾಂಡ್ ಬರೆದುಕೊಟ್ಟು ಸಿಂಗಾಪುರ್ ಕ್ರಿಕೆಟ್ ಟೀಮ್ ಸೇರಿಬಿಟ್ಟ ಧರ್ಮಿಚಂದ್. ನಿಜಕ್ಕೂ ಭಾರತ ಕ್ರಿಕೆಟ್‌ಗಾದ-ಲಾಸ್ ಇದು. ಹಾಗೆಯೇ ಧರ್ಮಿಚಂದ್‌ನಿಗೂ ಇದು ಲಾಸೇ.


ಬ್ರಿಜೇಶ್ ಪುತ್ರ ಉದಿತ್ ಪಟೇಲ್‌ಗೆ ಎಲ್ಲಿಲ್ಲದ ಸೌಕರ್ಯ

ಲಾಸ್ಟ್ ಓವರ್!

ಇದು ಬಹುಶಃ ಬ್ರಿಜೇಶ್ ಎದುರಿಸುತ್ತಿರುವ ಲಾಸ್ಟ್ ಓವರ್. ಅಂಪೈರ್ ಸ್ಥಾನದಲ್ಲಿ ಯಾರು ನಿಂತರೂ ಬ್ರಿಜೇಶ್‌ನನ್ನು ಉಳಿಸಿಕೊಳ್ಳಲಾಗುವುದಿಲ್ಲ. ಅಸೋಸಿಯೇಷನ್‌ಗೆ ಅನಗತ್ಯವಾಗಿ ಐವರು ಚಾರ್ಟರ್ಡ್ ಅಕೌಂಟೆಂಟ್‌ಗಳು ಇದ್ದಾರೆ. ಶಂಕರ್ ಎಂಬ CA ನ ಬೊಂಬೆಯಾಗಿದ್ದಾನೆ ಬ್ರಿಜೇಶ್. ಮೊನ್ನೆ ಅಸೋಸಿಯೇಷನ್ ಅಧಿಕಾರಿಗಳು ಫೋರ್ಜರಿ ಕೇಸಲ್ಲೂ ಸಿಕ್ಕಿದ್ದಾರೆ.... ಈಗಾಗಲೇ ಕಿರ್ಮಾನಿಯನ್ನು ಅಸೋಸಿಯೇಷನ್‌ನಿಂದ ದೂರ ಮಾಡಿರುವ ಬ್ರಿಜೇಶ್ ಇದೀಗ ಜಿ.ಆರ್. ವಿಶ್ವನಾಥ್‌ಗೂ ಬೇಸರ ತಂದಿದ್ದಾನೆ. ಅದಕ್ಕೇ ಮೊನ್ನೆಯ ವಾರ್ಷಿಕ ಸಭೆಗೆ ಜಿ.ಆರ್. ಗೈರುಹಾಜರಾಗಿದ್ದರು.


ಉಳಿದಿರುವ ಒಂದು ವರ್ಷದ ಅವಧಿಯಲ್ಲಿ ಬ್ರಿಜೇಶ್ ಇನ್ನೆಷ್ಟು ಕ್ರಿಕೆಟ್ ಪ್ರತಿಭೆಗಳನ್ನು ಔಟ್ ಮಾಡುತ್ತಾನೋ ಯಾರಿಗೆ ಗೊತ್ತು? ಈ ಮಾರ್ವಾಡಿ ಪೀಡೆಯನ್ನು ಕರ್ನಾಟಕ ಕ್ರಿಕೆಟ್‌ನಿಂದ ಆಚೆ ತೊಲಗಿಸಬೇಕಾಗಿದೆ.

-ಪಿ.ಕೆ. ಮಲ್ಲನಗೌಡರ್

ಅಂಬುರೀಸು ಕನ್ನಡ ಸಿನುಮದೀರೊ ಅಂದ್ರೆ ಡೆಲ್ಲಿಲಿ ನಗತರಂತೆ!

ಅಂಬರೀಶ್ ಮಂತ್ರಿಯಾದನೆಂದು ಜುಮ್ಮಿ ಸಂಭ್ರಮದಲ್ಲಿದ್ದಳು. ಆತನನ್ನು ತಮ್ಮ ಊರಿಗೆ ಕರೆದು ಸನ್ಮಾನ ಮಾಡಬೇಕೆಂದು ತರಾತುರಿಯಿಂದ ಚರ್ಚಿಸತೊಡಗಿದಳು.

"ಅಂಬರೀಸನ್ನ ಕರದು ಸನ್ಮಮಾನ ಮಾಡಬೇಕು ಕಂಡ್ರ ಉಗ್ರಿ. ಏನೇನು ಮಾಡಬೇಕು ಅಂತ ಹೇಳು?" ಎಂದಳು.



"ಏನ್ನಾರ ಮಾಡದು ಆಮ್ಯಾಲೆ. ಮದ್ಲು ಅವುನು ಬತ್ತನೊ ಇಲ್ವೊ ಅನ್ನದ ತಿಳಕಬೇಕು ಕಣೇ."

"ಅದ್ಯಾಕ್ ಬರದಿಲ್ಲ ಅವುನು?"

"ಕಳದ ಯಲಕ್ಷನ್ನಲಿ ಕಾಂಗ್ರೆಸ್ ಪರ ಪ್ರಚಾರ ಮಾಡಕ್ಕೆ ಅಂತ ಬಂದಿದ್ದಾಗ ಜಂತಾ ದಳದೋರು ಗಲಾಟ ಮಾಡಿ ವಾಪಸ್ ಕಳಿಸಿದ್ರು. ಅದ್ಕೆ ಈಕಡಿಕೆ ಬರದಿಲ್ಲ ಅವುನು."

"ಈ ಸತಿ ನಾವೆ ಹೋಗಿ ಕರಕಂಡು ಬರನ ಕಂಡ್ಯ. ಅದ್ಯಾವನು ಬಂದು ಗಲಾಟ ಮಾಡ್ತನೊ ನಾನು ನೋಡ್ತಿನಿ."

"ಗಲಾಟ ಮಾಡಿದ್ರೇನು ಮಾಡ್ತೀ?"

"ಬರ್ಲು ತಗಂಡು ಬಾರುಸ್ತಿನಿ. ಅದ್ಕು ಮೀರಿದ್ರೆ ಮೆಟ್ಟು ತಗಂಡು ಇಕ್ಕತಿನಿ. ಯಾವನ ಮಕನೂ ನೋಡದಿಲ್ಲ."

"ಅಂಗಂತ ಅಂಬುರೀಸಗೇಳು. ಬಂದ್ರು ಬರಬವುದು."

"ನಾನೊಬ್ಳೆ ಹೋಗಿ ಕರಿಯಕ್ಕಾದತೇ. ನೀವ್ವಲ್ಲ ಬರಬೇಕು ಕಂಡ್ರ, ಈತರಕೀತರ ಅಂತ ಹೇಳಬೇಕು."

"ನಾನು ಬತ್ತಿನಿ ನಡಿಯಕ್ಕ ಹೋಗಿ ಕರಿಯನ" ಎಂದ ವಾಟಿಸ್ಸೆ."

"ನೀನು ಬಂದ್ರೆ ಅವುನು ಬಂದನ್ನ?"

"ಇದೇನಕ್ಕ ಹಿಂಗಂತೀ? ಅಂಬರೀಸ್ ಅಭಿಮಾನಿಗಳು ಹೆಚ್ಚುಕಮ್ಮಿ ನನ್ನಂಗೇ ಅವುರೆ. ಅವುನೆಸರ ಯದೆಮ್ಯಾಲೆ ಬರಿಸಿಗಂಡವುನಲ್ಲಾ ಅವುನ್ನೋದಿದ್ದಿಯಾ? ಥೇಟ್ ನನ್ನಂಗೆ ಅವುನೆ ಅದ್ಕೆ ಅವುನಿಗೆ ಆರು ಲಕ್ಷ ಕೊಟ್ಟವುನೆ ಗೊತ್ತೆ?"

"ಆರು ಲಕ್ಷ ಕೊಟ್ಟದ್ದನೆ?

"ಏ ಆರು ಲಕ್ಷ ಕೊಟ್ಟರದು ಯಾತಕೆ ಗೊತ್ತೇನೇ? ಅಂಕೇಗೌಡ ನಿನ್ನಂಗೆ ಪಂಚಾತಿ ಮೆಂಬ್ರು. ಅಂಬಿ ಅಭಿಮಾನದಲ್ಲಿ ನಿನಿಗಿಂತ್ಲೂ ಒಂದು ಕೈ ಮುಂದೆಯಾ. ಏನ್ನಾರ ಕಟ್ಟುಸು ಅಂತ ಅಂಬಿ ಆರು ಲಕ್ಷ ಎಂ.ಪಿ. ಫಂಡಲ್ಲಿ ಕೊಟ್ಟ. ಅವುನು ಕಟ್ಟಿಸಿದ್ನೊ, ಬುಟ್ನೋ ಯಾರು ನೋಡಿದ್ದರೂ?" ಎಂದ ಉಗ್ರಿ.

"ಅಂಗರೆ ನಾವು ಈಸಗಂಡು ಏನ್ನಾರ ಕಟ್ಟಸನ ಕಂಡ್ಯ."

"ಏನ್ನಾರ ಕಟ್ಟುಸುಬವುದು ಆದ್ರೆ ಅಂಬಿ ಕೊಡಬೇಕಲ್ಲ?"

"ಯಾಕ್ ಕೊಡದಿಲ್ಲಾ?"

"ಅಂಬಿ ಆತ್ರ ಎಂ.ಪಿ. ಫಂಡೀಸಗಂಡವ್ನಲ್ಲ ತಿಂದಾಕಿ ಕುಂತಿದ್ದವಂತೇ. ಅದ್ಕೆ ಅವುನಿಗೂ ಬೇಜಾರಾಗಿ ಫಂಡು ಕೇಳಿದೋರ್ನೆಲ್ಲ ನಾಯಿ ಗದರಿದಂಗೆ ಗದರಿ ಓಡುಸ್ತನಂತೆ."

"ಜನಗಳ್ನೆಲ್ಲ ಕಳ್ರು ಬದ್ಕೊದ್ರು ಕಂಡ್ಯ" ಎಂದ ಕಾಳಮಾವ.

"ರಸ್ತಿಗೆ ನಾಕು ಮಂಕ್ರಿ ಮಣ್ಣು ಯಸ್ತು ಹೈವೇ ಮಾಡಿದ್ವಿನಿ ಅಂತ ಬಿಲ್ಲು ತಗಂಡು ತಿನ್ನೊ ಜನ, ಇನ್ನ ಅಂಬರೀಸ್ ಎಂಪಿ ಫಂಡ್ ಬುಟ್ಟರೆ ದ್ವಡಪ್ಪ" ಎಂದ ವಾಟಿಸ್ಸೆ.

"ಅಂಬುರೀಸು ಮಂತ್ರಿಯಾಗಿದ್ರಿಂದ ಇನ್ನುಮ್ಯಾಲೆ ಸಿನುಮದಲ್ಲಿ ಪಾರ್ಟು ಮಾಡಂಗಿಲವೇ?" ಎಂದ ಸೀರ.

"ಅವುನಿಗೂ ಸಿನುಮ ಸಾಕಾಗಿತ್ತು, ಇನ್ಯಾಕ್ ಪಾರ್ಟು ಮಾಡ್ತನೇ?" ಎಂದ ಉಗ್ರಿ.

"ಇನ್ನೊಂದು ತಮಾಸಿ ಗೊತ್ತೇನೊ ಉಗ್ರಿ. ಆ ಉತ್ತರ ಭಾರತದೋರು ಅಂಬರೀಸ್ ಕನ್ನಡ ಸಿನುಮದ ಈರೊ ಅಂದ್ರೆ ನಗತವಂತೆ" ಎಂದ ವಾಟಿಸ್ಸೆ.

"ಅದ್ಯಾಕಂಗೆ ಮಾಡಿದ?"

"ಅಂಬುರೀಸ್‌ಗೆ ವಳ್ಳೆ ಹೃದಿಯ ಅದೆ. ಹಿಂದೊಂದು ಮುಂದೊಂದು ಮಾತಾಡದಿಲ್ಲ, ಕತ್ತೆ ವದ್ದಂಗೆ ಮಾತಾಡ್ತನೆ. ಹಿಡಿದಿದ್ನ ಹಿಡಿದಂಗೆ ಕೊಡ್ತನೆ. ಯಾರಿಗೂ ಯಾವತ್ತಿಗೂ ಕೇಡು ಮಾಡದಿಲ್ಲ, ದುಡ್ಡಿಗೆ ಬ್ಯಲೆ ಕೊಟ್ಟೋನಲ್ಲ ಅಂತ ಪುಟ್ಟಣ್ಣನಿಗೆ ಅವತ್ಲೆ ಗೊತ್ತಾಗಿ ಅವುನು ತಗದ ಸಿನುಮದಲ್ಲೆಲ್ಲ ಪಾರ್ಟು ಕೊಟ್ಟ" ಎಂದ ಉಗ್ರಿ.

"ಎಜ್ಜಾಟ್ಲಿ ಕರಟ್ ಕಣೊ ಉಗ್ರಿ. ಅಂಬಿ ನಮಿಗೆ ಈರೋ ಆಗಿರದು ಹಿಂಗೆಯ ಅಂತ ಈಗ್ಗೊತ್ತಾಯ್ತು."

"ಅದಷ್ಟೇ ಅಲ್ಲ, ವಳ್ಳೆ ಪಾರ್ಟನೂ ಮಾಡ್ಯವುನೆ ಕಣೊ."

"ರಂಗನಾಯಕಿಲಿ ಅವುನು ಮಾಡಿರೊ ಪಾರ್ಟು ಎಕ್ಸೆಲೆಂಟು. ನಾನು ನಮ್ಮ ಜುಮ್ಮಕ್ಕ ಹೋಗಿದ್ವೊ ಆ ಸಿನುಮಕೆ. ನಮ್ಮ ಜುಮ್ಮಕ್ಕಂತೂ ತನ್ನನ್ನೆ ಆರತಿ ಅಂತ ತಿಳಕಂಡು ಅತ್ತಿದ್ದೂ ಅತ್ತಿದ್ದೆಯ, ಅಲವೇನಕ್ಕ?"

"ಅಯ್ಯೋ ಅದೊಗ್ಲಿ ಕಂಡ್ಯ. ಈ ಉಗ್ರಿ ದೀಪಾವಳಿ ಹಬ್ಬದಲ್ಲಿ ಯಾವುದಾರ ಸಿನುಮನೋಡನ ಅಂತವ ಅದ್ಯಾವುದೊ ಸಿನುಮಕ್ಕೆ ಕರಕಂಡೋಗಿದ್ದ ಕಂಡ್ಯ. ಯೀರೊ ಯಾರು ಗೊತ್ತೆ? ಚೀ ಕಳ್ಳ ಕಿಲಕಿಲ ಅಂತಿದ್ನಲ್ಲ ಅವುನ ಮಗನಂತೆ."


"ಓಂ ಪ್ರಕಾಶ್ ರಾವು ಕಣಕ್ಕಾ. ಪೆಂಟ್ಯಾಸ್ಟಿಕ್ ಯೀರೊ ಅವುನು."

"ವಳ್ಳೆ ಡಿಸಿಶನ್ ಚಿಗಪ್ಪ, ನೀವು ನೋಡೋ ಅಂ[illegible] ಸಿನುಮನ್ನೆಲ್ಲ ನೋಡ್ದಾಗ್ಗದೆ. ಆದ್ರೆ ನಾವು ಇನ್ನು ನೋಡ[illegible] ಅಂದ್ರೆ ಇಂತಾ ಯೀರೋಗಳ ಯಂಗೆ ನೋಡದು"

"ಕನ್ನಡದೋರು ಸಿನುಮ ನೋಡದಿಲ್ಲ ಅಂ[illegible] ದೂರತರಲ್ಲಾ, ಆ ಸಾರ ಗೋವಿಂದ, ರಾಶ್ಲೆ[illegible] ಯಂಕಟೇಸ್, ಓಂಪ್ರಕಾಶ್, ಆಮ್ಯಾಲೆ ಇನ್ನು ಯಾವ್ಯಾ[illegible] ಯೀರೊ ಪಾರ್ಟಾಯ್ನಂಡು ಬಂದ್ರೆ ಸಿನುಮ ಯಂಗ[illegible] ನೋಡದು?" ಎಂದ ಉಗ್ರಿ.

"ಯಲ್ಲಾ ಪೀಲ್ಡು ಅಂಗೆ ಆಗ್ಯದೆ ಕಣೊ ಉ[illegible] ರಾಜಕಾರಣನೆ ತಗೊ, ಕುಮಾರಸ್ವಾಮಿ ಮುಖ್ಯಮಂ[illegible] ಚೆನ್ನಿಗಪ್ಪ ಗಣಿಮಂತ್ರಿ, ಹಿಂದೂ ಮುಸ್ಲಿಂ ಗಲಬೆ ಹ[illegible] ಮನೆಲಿ ಕುಂತಗಳೊ ಶೆಟ್ಟಿನೂ ಮಂತ್ರಿ, ಶಂಕರಮೂ[illegible] ಮಂತ್ರಿ, ಇನ್ನು ಸಂಗೀತಕ್ಕೆ ಬಂದಿಯಾ. ಅಶ್ವತ್ಥ ಮುದ್ದುಕ[illegible] ಇನ್ನು ಯಾರ್‍ಯಾರೊ ಅವುರ ಕಡಿಯೋರು ಕೂಗ್ತ ಕುಂತವ್ರ[illegible] ಇದನ್ನೆಲ್ಲ ನೋಡಿದ್ರೆ, ರಾಜ್ಯಬುಟ್ಟು ಎಲ್ಲಾರ ಹೋಗ[illegible] ಅನ್ನುಸ್ತಾ ಆದೆ ಕಣೊ ಉಗ್ರಿ" ಎಂದ ವಾಟಿಸ್ಸೆ.

"ನಿನಿಗಷ್ಟೇ ಅಲ್ಲ ಕಣೊ ಅಂಗಾಗಿರದು[illegible] ಕುಮಾರಸ್ವಾಮಿಗೂ ಈ ಬೆಂಗಳೂರು ಬುಟ್ಟು ಎಲ್ಲಿಗಾ[illegible] ಹೋಗನ ಅನ್ನಿಸಿ ಅದ್ಕೆ ಹಳ್ಳಿ ಕಡಿಕೆ ಬಂ[illegible] ಮನಮನೆ ಮುದ್ದೆ ಮಾರಿಗುಡಿಲಿ ನಿದ್ದೆ ಅನ್ನಂಗಾಗ[illegible] ಅವುನಕತೆ."



"ಬೇವುಕಲ್ಲಿಗೆ ಬಂದಿದ್ನಂತಲ್ಲಾ ಯ[illegible] ಮನಿಗೆ ಬಂದಿದ್ದಾ?" ಎಂದಳು ಜುಮ್ಮಿ..

"ನಮ್ಮ ಕಚ್ಚೇಗೌಡನಿಗೆ ಹೆಣ್ಣು ತಂದಿರಪ[illegible] ಅದೇ ಊರಲವೆ?" ಎಂದ ಸೀರ.

"ಊ ಚಿಗಪ್ಪ"

"ಆ ಊರಲೊಗಿ ಉಳಕಳೊ ಅಂತದ್ದೇನಾಗಿತ್ತು ಅವುನಿಗೆ?"

"ಬೇವುಕಲ್ಲಲಿ ಬರೀ ಕುರುಬ್ರೆ ಇದ್ದರ[illegible] ಅಂಗಾಗಿ ಕುರುಬ್ರೊ ಊರಿಗೋಗಿ ಉಳಕಂ[illegible] ಕುರುಬ್ರು ವಿಶ್ವಾಸ ಗಳಿಸಿದ್ರೆ ಅವುರು[illegible] ಸಿದ್ಧರಾಮಯ್ಯನ ಬುಟ್ಟು ನಮ್ಮತಕ್ಕೆ ಬ[illegible] ಅಂತ ದೇವೇಗೌಡ ಹೇಳಿಕೊಟ್ಟವುನೆ. ಅ[illegible] ಇವುನು ಕುರಿಕ್ವಟಗೆ ಹುದಿಕ್ಯಂಡು ತಿರುಗ್ತ[illegible]" ಎಂದು ವಾಟಿಸ್ಸೆ ನಗಾಡಿದ.

"ಆದ್ಯಾಕ್ ನಗತರ್ಲ?" ಎಂದು ಜುಮ್ಮಿ ಸಿಟ್ಟು ಮಾಡಿಕೊಂಡಳು.

"ಯಾಕೆ ಅಂದ್ರೆ ಅಂಬರೀಸ್ ಆಕಾರ ಕಣಕ್ಕ. ಆ ನನಮಕ್ಕಳು ಶಾರೂಕ್ ಖಾನ್, ರಿತಿಕ್ ರೋಶನ್ನು, ಸಲೂಮಾನ್ ಖಾನ್, ಗೋವಿಂದ, ಇವುರು ಮಾತ್ರ ಹೀರೋ ಅನ್ನಕಂಡವುರೆ. ಅದ್ಕೆ ಅಂಬಿ ನೋಡಿ ನಗಬವುದು."

"ಅಂಬರೀಸ್ ಮದ್ಲಿಗೆ ಚನ್ನಾಗಿ ಇದ್ದ ಕಣೊ. ಅಂಗಿರೋವತ್ತಿಗೆ ಅಲವೇ ಪುಟ್ಟಣ್ಣ ಯಲ್ಲಾ ಸಿನುಮಕೂ ತಗಂಡ? ಆದೆ ವಿಷ್ಣುವರ್ಧನ್ನ ಒಂದೇ ಸಿನುಮಕೆ ತಗದಾಕಿದ."

"ಥೂ ಅವುನ ಮನಿ ಹಾಳಾಗ. ಅವುನು ಮಾತು ಅವುನಾಕಾರ ಒಂದೂ ಹಿಡಸಲಿಲ್ಲ ಕಂಡ್ಯ. ಅರ್ದಕೆ ಎದ್ದು ಬರಂಗಾಗಿರದು" ಎಂದು ಜುಮ್ಮಿ ರೋಸಿ ಹೋದ ದನಿಯಲ್ಲಿ ಹೇಳಿದಳು.

"ಕನ್ನಡ ಫಿಲಂನಿಂದ ಜನ ಯಾಕೆ ದೂರ ಹೋಯ್ತಾ ಅವುರೆ ಅಂತ ಈಗ್ಗೊತ್ತಾಯ್ತೇನಕ್ಕ?"

"ನಿಜ ಕಂಡ್ಯ. ಇನ್ಯಾವತ್ತೂ ಸಿನುಮಕೆ ಹೋಗಬಾರ್ದು ಅನ್ನುಸ್ತು."

"ನಾವಂತು ರಾಜಕುಮಾರ ತೀರಿಕಂಡಾಗ್ಲೆ ತೀರಮಾನ ಮಾಡಿದೊ, ಇನ್ನು ಸಿನುಮ ನೋಡಬಾರ್ದು ಅಂತವ" ಎಂದ ಸೀರ.

"ಯಾವನೇ ಲೀಡ್ರಾಗ್ಲಿ ಇವುನು ನಮ್ಮೊನು ಅ[illegible] ಯಲ್ಲಾರಿಗೂ ಅನ್ನುಸಬೇಕು; ಆತರ ಅವುನ ರಾಜಕಾ[illegible] ಇದ್ರೇ ಅವುನು ನಮ್ಮ ಮಾತಾಡಸದೂ ಬ್ಯಾಡ, ಮ[illegible] ಬಂದು ಮನಗದೂ ಬ್ಯಾಡ. ಯಲ್ಲಾ ಜನ ಬೆಂಬ[illegible] ಕೊಡ್ತರೆ. ಅದು ಬುಟ್ಟು ಹಿಂಗೆ ಮಾಡಿದ್ರೆ ನಾಟ[illegible] ಅನ್ನಕಂಡು ಬುಡ್ತರೆ ಕಣೊ ವಾಟಿಸ್ಸೆ."

"ನಾನೇಳೊ ಮಾತ ನೀನೇಳಿದ್ಯೆ ಥ್ಯಾಂಕ್ಸು ಕಣ[illegible] ಉಗ್ರಿ" ಎಂದ ವಾಟಿಸ್ಸೆ.

–ಬಿ. ಚಂದ್ರೇಗೌ[illegible]

Zero Hour ಮುನ್ನಿ


1. 'ಆಡಳಿತ ವ್ಯವಸ್ಥೆ ಕುಸಿದು ಬದ್ದಿದೆ' ಅಂತಾರಲ್ಲ.. ಹಾಗಂದ್ರೇನು?
   - a) ಆದ್ಯಾವಾಗ ಎದ್ದು ನಿಂತಿತ್ತು ಹೇಳಿ, ಕುಸಿದು ಬೀಳಲು....
   - b) ತಿಂದಿದ್ದು ಹೆಚ್ಚಾಗಿ ಭಾರ ತಡೆಯದೇ ಕುಸಿದು ಬದ್ದಿದೆ ಅಂತಾ ಅರ್ಥ
   - c) ಹಾಳಾಗಿ ಹೋಗಲಿ, ಕುಸಿದು ಜನರ ಮೇಲೇ ಬದ್ದಿದೆಯಲ್ಲ...
   - d) ನಿಖಿಲ್ ಗೌಡನಂತೆ ಟೈಟಾಗಿ ಕುಸಿದು ಬದ್ದಿದೆ
2. 'ನನ್ನ ಸಚಿವ ಸ್ಥಾನ ಗಟ್ಟಿ'- ಚೆಲುವರಾಯಸ್ವಾಮಿ ನೀವೇನಂತಿರಾ?
   - a) ಅಲ್ಲಿಗೆ ಕೆಎಸ್‌ಆರ್‌ಟಿಸಿ ಊಟ ಖಾತ್ರಿ
   - b) ಗೌಡರ ಫೆವಿಕಾಲ್ ಇರುವಾಗ ಚೆಲುವನಿಗೇನು ಭಯ?
   - c) ಕಳ್ಳಕಾಕರ ಸಂಪುಟದಲ್ಲಿ ಚೆಲುವ ಇರಲೇಬೇಕಲ್ಲ....
   - d) ಚನ್ನಿಗನದೇ ಗಟ್ಟಿ ಇರುವಾಗ ಚೆಲುವನದೂ ಗಟ್ಟಿಯೇ!
3. ನಿಖಿಲ್‌ಗೌಡನ ಡ್ರಿಂಕ್ಸು ದಾಂಧಲೆ ಏನನ್ನು ಸೂಚಿಸುತ್ತದೆ?
   - a) ಅಪ್ಪ ತಾತ ಹಗಲೊತ್ತು ಮೇಯ್ದರೆ, ಮೊಮ್ಮಗನಿಗೆ ಬೆಳಿಗ್ಗೆ 4 ಕ್ಕೆ ಮೇವು ಬೇಕಂತೆ!
   - b) ಡ್ರಾಪ್ ಔಟ್ ನಿಖಿಲ್‌ನ ಡ್ರಾಪ್–ಇನ್ ಪ್ರಕರಣ
   - c) ಮೊಮ್ಮಗನ ಹೆಸರನ್ನು ಆಡಮ್ ಬದ್ದಪ್ಪ ಅಂತಾ ಬದಲಾಯಿಸ್ತಾರಂತೆ ಗೌಡ್ರು
   - d) ಅನಿತಕ್ಕ ನಾಸ್ತಾ ಮಾಡಿರಲಿಲ್ಲವಂತೆ... ರಾತ್ರಿ ಹಸಿವಾಯ್ತಂತೆ
4. ಬಿಹಾರದ ಪೊಲೀಸರಲ್ಲಿ ಏಡ್ಸ್ ಹೆಚ್ಚಲು ನಕ್ಸಲರೇ ಕಾರಣವಂತೆ... ಏನ್ ಹೇಳ್ತೀರಾ?
   - a) ಸದ್ಯಕ್ಕೆ ಪೊಲೀಸ್ ಅಧಿಕಾರಿಗಳಿಗೆ ಮಕ್ಕಳಾಗಲು ನಕ್ಸಲರು ಕಾರಣ ಎಂದಿಲ್ಲವಲ್ಲ
   - b) ಪೊಲೀಸರ ತೀಟೆ ಮುಚ್ಚಲು ನಕ್ಸಲರ ಹೆಸರೇ ಬೇಕಂತಾ?
   - c) ನಕ್ಸಲರು ಕಾಡಲ್ಲಿರುವುದರಿಂದ ಮಳೆ ಆಗ್ತಿಲ್ಲ ಅನ್ನೋದು ಕರ್ನಾಟಕ ಸರ್ಕಾರದ ವಾದ
   - d) ತಲೆ ಕೆಟ್ಟ ಪೊಲೀಸರನ್ನು ಮೆಂಟಲ್ ಹಾಸ್ಪಿಟಲ್‌ಗೆ ಸೇರಿಸಿ
5. 'ಸಮಾಜದ ಸಾಮೂಹಿಕ ಪ್ರಜ್ಞೆ' ಎಂದರೇನು?
   - a) ಮಲ್ಲಿಕಾ ಶೆರಾವತ್‌ಳನ್ನು ಮದುವೆ ಆಗೋ ಇಚ್ಛೆ ನಿಮಗೆಲ್ಲ ಇದ್ರೆ ಸುಪ್ರೀಂಕೋರ್ಟ್ ಹೆಲ್ಪ್ ಮಾಡುತ್ತಂತೆ
   - b) ಸುಪ್ರೀಂಕೋರ್ಟ್‌ಗೆ ಮಾತ್ರ ಅರ್ಥವಾಗುತ್ತೆ ಈ ಪ್ರಜ್ಞೆ
   - c) ಟಿವಿ ಚಾನೆಲ್‌ನವರು, ಇಂಗ್ಲಿಷ್ ಪೇಪರ್‌ನವರ ಮಾನಸಿಕ ಅಸ್ವಸ್ಥತೆಯೇ ಕೋರ್ಟ್ ಕಣ್ಣಲ್ಲಿ ಸಾಮೂಹಿಕ ಪ್ರಜ್ಞೆ?
   - d) ನಮ್ಮ ರಾಜಕೀಯ ಪಕ್ಷಗಳ ಸಿನಿಕತೆಯೇ ಸಾಮೂಹಿಕ ಪ್ರಜ್ಞೆ?

ಬಿಟ್ bit ಹಿಟ್!

ನಿಖಿಲ್ ಪುಟ್ಟಾ,

'ಗೂಳಿ ಬದ್ದಾಗ ಆಳಿಗೊಂದು ಕಲ್ಲು' ಅನ್ನೋ ಹಂಗ ಎಲ್ಲಾರೂ[illegible] ನಿನ್ ಬೈಯಾಕ ಹತ್ಯಾರ ನೋಡು...

ನೀ ಇನ್ನು ಬಾಳ ಸಣ್ಣಾವ ಅದಿ... ಒಂದಿಷ್ಟೂ ಡ್ರಿಂಕ್ಸು ಮಾಡಬಾರ್ದು[illegible] ಅಂದ್ರ ಹ್ಯಂಗ? ಡ್ರಿಂಕ್ಸು ಮಾಡಿದ ಮ್ಯಾಲ ಊಟ ಮಾಡ್ಲೇಬೇಕು[illegible] ಅಂತ ಕಾಕಾ ಮುನ್ನಾಭಾಯಿ ಡಾ. ರಮೇಶ್ ಹೇಳಿದ್ದರಲ್ಲ... ಅದಕ್ಕ[illegible] ನೀ ಊಟಕ್ಕ ಹೋದಿಬಿಡು.... ಅಪರಾತ್ರಿಯೊಳ್ಗ ಹಸಿದು ಬಂದವ್ರಿಗೆ[illegible] ಊಟ ಕೊಡ್ಬೇಕು ಅನ್ನೊದು ಗೊತ್ತಿಲ್ಲ ಆ ಹೋಟೆಲ್ ಬಾಡಕೊಗಳಿಗೆ..... ಅಪ್ಪೊತ್ತಿನೊಳಗ ಅವ್ರು ಹೋಟೆಲ್ ಓಪನ್ ಯಾಕಿಟದ್ರು? ಓಪನ್ ಇದ್ ಮ್ಯಾಲ ಊಟಾ ಕೊಡ್ಬೇಕಪ್ಪ.. ಮಕ್ಳು ಹಸಿದ ಹೊಟ್ಟೇಲಿ ಮಲಗಬಾರ್ದು ಅಂತಾ ಚನ್ನಮ್ಮಜ್ಜೀನ ಹೇಳ್ತಾಳ... ಬದ್ದಪ್ಪನ ಮಗ ಅಧ್ಯಾವನೋ ಸಿದ್ದಪ್ಪನೂ ಕುಡಿದಿದ್ನಂತ? ನೀ ಅಂತವ್ನ ಫ್ರೆಂಡ್‌ಶಿಪ್ಪು ಮಾಡಬ್ಯಾಡ ನೋದು...



ಅಟೆಂಡೆನ್ಸ್ ಇಲ್ಲದ್ದಕ್ಕ ಕಾಲೇಜಿಗೆ ನಮಸ್ಕಾರಾ ಹೇಳಿದ ವೀರಪುತ್ರ ನೀನು... ತಾತ ಮಣ್ಣಿನ ಮಗನಾದರೆ, ನೀನು ಎಣ್ಣೆಯ ಮಗ...

ತಾತ ಸನ್ ಆಫ್ ಸಾಯಿಲ್, ನೀನು ಸನ್ ಆಫ್ ಆಯಿಲ್....


ಭವಿಷ್ಯದೊಳಗ ಸಿಎಮ್ಮು ಆಗಬೇಕಂದ್ರ ಇದ್ನೆಲ್ಲಾ ಮಾಡ್ಬೇಕು ಬಿಡು. ರಾತ್ರಿ ಕುಡಿಯಾಕ[illegible] ಹೋಗೊ ಮುಂದ ಜೊತಿಗೆ ಊಟಾನು ತೊಗೊಂಡು ಹೋಗು ಪುಟ್ಟಾ....

ಬೈ ನಿಖಿಲು...

–ಇತಿ ಮುನ್ನಿ,
ಧಾರವಾಡ


ಒಂದು 'ಗಾದಿ' ಮಾತು
(ನಿಖಿಲ್ ಕುಡಿತದ ಕುರಿತು)
ಅಧಿಕಾರ ಹೋಗೋ ಕಾಲಕ್ಕೆ ಮಗ ಕುಡಿಯೋದು ಕಲಿತ

ಈ ಸಮಾಜಕ್ಕೆ ಯಾರಿಂದ ಒಳಿತು?



ಜುಲೈ 17, 1977

ನನ್ನೆದುರು ಕೆಲವರು ಮಿತ್ರರು ಕುಳಿತಿದ್ದರು. ನಾನು ಮಾತ್ರ ಅವರ ಇರುವಿಕೆಯನ್ನೇ ಮರೆತು ಟೆನ್ನಿಸ್ ನೋಡುತ್ತಿದ್ದೆ. ಸಾಂಪ್ರಾಸ್ ಮತ್ತು ಕೋರ್ಡಾ ಅವತ್ತು ಪ್ರಿ-ಕ್ವಾರ್ಟರ್ ಫೈನಲ್ಸ್ ಆಡುತ್ತಿದ್ದರು. ಸಾಂಪ್ರಾಸ್ ಮಹಾನ್ ಆಟಗಾರ. ಆದರೆ ಅವನನ್ನು ಪ್ರೀತಿಸುವವರು ಕಮ್ಮಿ. ಈ ಸಾಂಪ್ರಾಸ್ ಎದುರು ಕೋರ್ಡಾ ಬಲಿಗೆ ಸಿದ್ಧವಾದ ಕುರಿಯಂತೆ ನಿಂತಿದ್ದ. ಚೆಕ್ ದೇಶದ ಕೋರ್ಡಾ ಬೊಚ್ಚು ಮುಖದ, ಸೊರಗಿದ ದೇಹದ, ಗುಳಿಬಿದ್ದ ಕಣ್ಣುಗಳ ಬಡಪ್ರಾಣಿ. ಆತ ಮೊದಲನೆ ಎರಡು ಸೆಟ್ ಸೋತಿದ್ದು ನೋಡಿದ ನನ್ನಲ್ಲಿ ಕರುಣೆ ಉಕ್ಕಿ ಬಂತು. 'ದಲಿತನಂತಿರುವ ಈ ಕೋರ್ಡಾ ನೋಡಿ!' ಅಂದೆ. ನನ್ನೆದುರಿಗಿದ್ದ ಸುಬ್ಬು ಹೊಲೆಯಾರ್ ಜೋರಾಗಿ ನಕ್ಕ. ನಾನು ತಮಾಷೆಗೆ ಹಾಗೆ ಹೇಳಿರಲಿಲ್ಲ. ಕೋರ್ಡಾ ನಿಜಕ್ಕೂ ಪ್ರತಿಭಾವಂತನಾದ ಆಟಗಾರ. ಜೆಕೋಸ್ಲೋವಾಕಿಯಾದಲ್ಲಿ ಹೀರೋ. ನಾವೆಲ್ಲ ಒಂದೆರಡು ವರ್ಷದಿಂದ ಆತನ ಹೆಸರು ಕೇಳಿದ್ದೇವೆ.... ಇಷ್ಟು ಯೋಚಿಸುವಾಗ ಕೋರ್ಡಾ ಹೊಡದ ಬಾಲ್ ಸಾಂಪ್ರಾಸ್ ಕಡೆ ಸಾಗಿ ಲೈನಿನ ಮೇಲೆ ಬಿತ್ತು. ಅದನ್ನು 'ಔಟ್' ಎಂದು ಲೈನ್‌ಮನ್ ಹೇಳಿದ; ಅಂಪೈರ್ ಅದನ್ನೇ ಅನುಮೋದಿಸಿದ. ನಾನು ಸಿಟ್ಟಿನಿಂದ ಅದು 'ಗುಡ್' ಅಂದೆ. ಟೆಲಿವಿಷನ್‌ನಲ್ಲಿ ಮತ್ತೆ ತೋರಿಸಿದರು. ಅದು **'almost good'** ಆಗಿತ್ತು. ಅರ್ಧ ಇಂಚು ಹೊರಗೆ ಹೋದ ಭ್ರಮೆ ಹುಟ್ಟಿಸುತ್ತಿತ್ತು. 'ಕೋರ್ಡಾಗೆ ಒಂದರ್ಧ ಇಂಚು ಸವಲತ್ತು ನೀಡದ ಈ ಸೂಳೆಮಕ್ಕಳನ್ನು ನೋಡಿ!' ಅಂದೆ. ನನ್ನ ಮುಂದಿದ್ದ ದಲಿತರು ಜೋರಾಗಿ ನಗತೊಡಗಿದರು. ನನಗೆ ನಗೆ ಬರಲಿಲ್ಲ. ನಾನು ರೇಗುವುದನ್ನು ನೋಡಿದ ಸುಬ್ಬು 'ಟೆನ್ನಿಸ್‌ನಲ್ಲಿ ಹಾಗೆಲ್ಲ ಕೊಡೋಕಾಗುತ್ತಾ ಸಾರ್?' ಅಂದ. 'ಯಾಕಾಗೋಲ್ಲ? ಆ ಸಾಂಪ್ರಾಸ್ ಅನ್ನೋ ಕತ್ತೆಯನ್ನು ನೋಡಿ-ಅಮೆರಿಕದಲ್ಲಿ ಚೆನ್ನಾಗಿ ತಿಂದು, ಉಂಡು, ಅತ್ಯುತ್ತಮ ಕೋಚ್‌ಗಳಿಂದ ಹೇಳಿಸಿಕೊಂಡು ಬಂದಿರುತ್ತಾನೆ. ಈ ಕೋರ್ಡಾ ಚೆಕ್ ದೇಶದವನು. ಅವನಿಗೆ ಏನೇನು ಗೋಳು ಇದೆಯೋ' ಅಂದೆ. ಅದಕ್ಕೆ ಅವರೆಲ್ಲಾ ನಗತೊಡಗಿದರು. ಅವರು ನಗುವುದರಲ್ಲಿ ಅರ್ಥವಿದೆ ಎಂದು ಕ್ರಮೇಣ ನನಗೂ ಅನ್ನಿಸತೊಡಗಿತು. 'ಹೌದು ಕಣ್ರಯ್ಯ ನಮ್ಮ ಹಿಂದುಳಿದವರಿಗೆ ಕಾಲು ಇಂಚು, ದಲಿತರಿಗೆ ಅರ್ಧ ಇಂಚು ಮಾರ್ಜಿನ್ ಕೊಟ್ಟರೆ... ಏನಾಗುತ್ತೆ?' ಅಂದೆ. ಮತ್ತೆ ಎಲ್ಲರೂ ನಗತೊಡಗಿ, 'ಹಾಗೆಲ್ಲ ಆಗಲ್ಲ' ಅಂದರು. ನಾನು "ಆಗಲ್ಲ ಸರಿ. ನನಗಿವತ್ತು ಇದೆಲ್ಲ ಬಹು ಸ್ವಾರಸ್ಯವಾಗಿ ಕಾಣುತ್ತೆ, ಯಾಕೆ ಗೊತ್ತಾ... ತಮಾಷೆ ಮುಖ್ಯ. ನಗುವ ಚಾಳಿ ಕಳೆದುಕೊಂಡವರು ಕ್ರೂರವಾಗಿ ವರ್ತಿಸುತ್ತಾರೆ. ನಗು ನಗುತ್ತಲೇ ದಿಟ್ಟವಾಗಿ, ನಮಗೆ ದೊರೆಯಬೇಕಾದ ಸವಲತ್ತು ಡಿಮ್ಯಾಂಡ್ ಮಾಡಿ ಪಡೆಯುವಂತಾಗಬೇಕು, ವಿನೋದ ಇಲ್ಲದ ಎಲ್ಲ ಆಂದೋಲನವೂ ಬೊಗಳೆ, ಅಲ್ಲವೆ?' ಅಂದೆ.



ನಾಗಲೋಟಿಮಠ

* * * * * * *

ಜುಲೈ 6ರ ಭಾನುವಾರ, ಅವತ್ತು ಪತ್ರಿಕೆಯ ಹದಿನೆಂಟನೆಯ ಹುಟ್ಟುಹಬ್ಬ. ನಮ್ಮ ಕಚೇರಿಯಲ್ಲಿ ಚಂದ್ರೇಗೌಡ, ಹೆಗ್ಗಳಗಿ, ರಾಮದಾಸ್, ಮೋಹನ್, ನಟರಾಜ ಮುಂತಾದವರು ಸೇರಿದ್ದರು. ಅದು 'ಪತ್ರಿಕೆ'ಯ ಬಳಗ; 'ಅಪ್ಪನ ಬಳಗ' ಎಂದು ಕೆಲವರು ತಮಾಷೆ ಮಾಡುತ್ತಿದ್ದರು. ಪುಟ್ಟ ಕವಿಮೇಳದಲ್ಲಿ ಮಹಾಬಲಮೂರ್ತಿ, ಶರ್ಮ, ಎಲ್ಸಿ ನಾಗರಾಜ್, ಪ್ರತಿಭಾ ಮುಂತಾದವರೆಲ್ಲ ಭಾಗವಹಿಸಿದ್ದರು. ಎಂದಿನಂತೆ ರಾಮದಾಸ್ ತಮ್ಮ ಮಾತಿನಿಂದ ನಮ್ಮೆಲ್ಲರ ಆಳಕ್ಕೆ ಇಳಿದು ಅಲ್ಲಾಡಿಸಿದರು.

ಒಂದು ರೀತಿಯಲ್ಲಿ ಇದು ಹದಿನೇಳು ವರ್ಷದ ನೆನಪು. ಇನ್ನೊಂದು ರೀತಿಯಲ್ಲಿ ಈ ಹದಿನೇಳು ವರ್ಷವೂ ಜನ್ಮದಿನ ಆಚರಿಸಿದ್ದರೂ ಹೊಸದಾಗಿಯೇ ಇರುವುದಕ್ಕೇ ಪಟ್ಟ ಅಚ್ಚರಿ. ಹದಿನೇಳು ವರ್ಷಗಳನ್ನು ಮುಗಿಸುವ ಹೊತ್ತಿಗೆ ಸಂಜೆಯ ಪಡುವಣ ಕೆಂಪಾಗುತ್ತಿದೆ. ನಮ್ಮ ಮೂರು ನಾಲ್ಕು ದಶಕದ ಹೋರಾಟ, ಆತ್ಮನಿರೀಕ್ಷೆ, ಕೋಪ, ಪರಿತಾಪದ ಸಮಯದಲ್ಲಿ ಅತ್ಯಂತ ಕೆಟ್ಟ ಸರ್ಕಾರಗಳನ್ನು, ಮುಖಂಡರನ್ನು ನೋಡುತ್ತಿದ್ದೇವೆ. ಇಲ್ಲಿ ಪ್ರಾಮಾಣಿಕರು, ಶುದ್ಧಹಸ್ತರು ಬದುಕಿ ಉಳಿಯುವುದೇ ಕಷ್ಟವಾಗುತ್ತಿದೆ. ಸಾರ್ವಜನಿಕ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡ ಜನ ಭ್ರಷ್ಟತೆ, ಸ್ವಜನಪಕ್ಷಪಾತ, ವ್ಯಭಿಚಾರ, ವಂಚನೆಯಲ್ಲಿ ಮುಳುಗಿರುವುದನ್ನು ನೋಡುದ್ದೇವೆ.

ಮೊನ್ನೆ ನಮ್ಮ ಕಣ್ಣೆದುರಿಗೇ ಆರ್. ಎಸ್. ಶೆಟ್ಟಿ, ಶ್ರೀನಿವಾಸ ಗೌಡ, ನಾಗಲೋಟಿಮಠರಿಗೆ ಅನ್ಯಾಯವಾಯಿತು. ದುಷ್ಟರು ಒಳ್ಳೆಯವರನ್ನು ಶಿಕ್ಷಿಸಿ ಆನಂದಭರಿತರಾದರು. ನಾಗಲೋಟಿಮಠರಿಗೆ ಆದದ್ದನ್ನು ನೋಡಿ. ಅವರನ್ನು ಕಿತ್ತು ಹಾಕಿದ ಶಂಕರ್ ನಾಯಕ್ ಎಂಬ ಮಂತ್ರಿಗೆ ಹುಬ್ಬಳ್ಳಿಯಲ್ಲಾದರೂ ಚಳ್ಳೆಹಣ್ಣು ತಿನ್ನಿಸುತ್ತಾರೆ ಎಂದು ನಾನು ತಿಳಿದಿದ್ದೆ. ನಾನು ಧಾರವಾಡದ ನಮ್ಮ ವರದಿಗಾರ ಮೋಹನನಿಗೆ ಕಾಗದ ಬರೆದು 'ಏನಾದರೂ ಮಾಡಲು ಸಾಧ್ಯವೇ?' ಎಂದು ಕೇಳಿದೆ. ಆತ ನಾಯಕ; ಬೇಡ ಜನಾಂಗಕ್ಕೆ ಸೇರಿದವನು. ದಿನಗಳುರುಳಿದರೂ ಏನೂ ಆಗಲಿಲ್ಲ. ಕೆಲವರು, 'ಬೇಡರೆಲ್ಲ ಒಂದೇ, ಮೋಹನ್ ಪ್ರತಿಭಟಿಸುವುದನ್ನು ನಿರೀಕ್ಷಿಸುವುದೇ ತಪ್ಪಲ್ಲವೆ?' ಅಂದರು. ನಾನು ಸುಮ್ಮನಿದ್ದೆ. ಆತ ಮೊನ್ನೆ ಬಂದಾಗ ಕೇಳಿದೆ. ಅವನು ಹೇಳಿದ, 'ನಾನು ಪ್ರಯತ್ನಿಸುತ್ತಿದ್ದೇನೆ. ಆದರೆ ಏನಾಗಿದೆ ಅಂದರೆ, ನಾಗಲೋಟಿಮಠ ಮಹಾ ಸಂಪ್ರದಾಯವಾದಿ. ವಿಭೂತಿ ಕಟ್ಟು ಹೊಡೆದುಕೊಳ್ಳುತ್ತಾರೆ. ನಮ್ಮ ಲಿಂಗಾಯತ ಜಾತಿಯ ಸಭೆಗಳಲ್ಲಿ ಭಾಗವಹಿಸುತ್ತಾರೆ. ಶಿವಪೂಜೆ ಮಾಡುತ್ತಾರೆ. ಅವರು ನಮ್ಮ ಪತ್ರಿಕೆಯ ಎಲ್ಲ ಮೌಲ್ಯಗಳಿಂದ ಹರಿದಾರಿ ದೂರ ಇದ್ದಂಗಿದ್ದಾರೆ. ನಾನು ಪ್ರತಿಭಟನೆಗೆ ಕರೆದರೆ, ಜನ ಇದನ್ನೆಲ್ಲ ತೋರಿಸಿ ನಾಗಲೋಟಿಮಠರು ಜಾತಿವಾದಿ ಎಂಬಂತೆ ಮಾತಾಡುತ್ತಾರೆ. ಬಿಜೆಪಿ, ಆರ್‌ಎಸ್‌ಎಸ್‌ಗಳು ಮಾತ್ರ ನಾಗಲೋಟಿಮಠರ ಪರವಾಗಿ ಹಿಂಡುಹಿಂಡಾಗಿ ಬರುತ್ತಾರೆ. ಏನು ಮಾಡುವುದು? ನಾನು ಮತ್ತು ಶಂಕರನಾಯಕ್ ಒಂದೇ ಜಾತಿಯಲ್ಲ, ಆತ ಲಂಬಾಣಿ' ಅಂದ.

ನಾನು ಯೋಚಿಸಿದೆ. 'ಅಲ್ಲಯ್ಯ ಮೋಹನ್, 'ಪತ್ರಿಕೆ'ಗೆ ವಿಭೂತಿ ಕಟ್ಟು, ಶಿವಪೂಜೆ ಮುಂತಾದ್ದರ ವಿರುದ್ಧ ಇರುವ 'ಇಮೇಜ್' ಇದೆ ಎಂದು ತಿಳಿದು ಪತ್ರಿಕೆಯ ನಿಜವಾದ ವ್ಯಕ್ತಿತ್ವವನ್ನೇ ಮರೆಯುತ್ತಿದ್ದೀ, ಅಲ್ಲವೆ? ವಿಭೂತಿ ಕಟ್ಟು ಹೊಡೆದುಕೊಳ್ಳುವ ನಾಗಲೋಟಿಮಠ ವಂಚಕರೆ, ಭ್ರಷ್ಟರೆ. ಅವರಿಂದ ಯಾರಿಗಾದರೂ ಅನ್ಯಾಯವಾಗಿದೆಯೆ? ಅಥವಾ ಅವರಿಂದ ಒಂದು ಸಂಸ್ಥೆಗೆ, ಒಂದು ಜನತೆಗೆ ಒಳ್ಳೆಯದಾಗಿದೆಯೆ? ಇದು ಮುಖ್ಯ. ಸಮಾಜದ ಎಲ್ಲ ರಂಗದಲ್ಲಿರುವವರೂ ನನ್ನಂತೆ ನಿನ್ನಂತೆ ಕ್ರಾಂತಿಕಾರಿಗಳಾಗಿರಬೇಕೆಂದು ನಿರೀಕ್ಷಿಸುವುದು ತಪ್ಪು. ನಾಗಲೋಟಿಮಠ ಮೂಢನಂಬಿಕೆಯನ್ನು, ಶೋಷಣೆಯನ್ನು ಬೆಳೆಸುತ್ತಿದ್ದಾರೆಯೇ? ಇಲ್ಲ... ವಿಭೂತಿ ಧರಿಸುವ ನಾಗಲೋಟಿಮಠರ ಸಂಪ್ರದಾಯವಂತಿಕೆ ಜೆ.ಎಚ್. ಪಟೇಲ್‌ರ ಸಮಾಜವಾದಕ್ಕಿಂತ ಒಳ್ಳೆಯದನ್ನು ಮಾಡಿದರೆ, ಪ್ರಾಮಾಣಿಕವಾಗಿ ಒಂದು ಸಂಸ್ಥೆ ಕಟ್ಟಿದರೆ, ಈ ಸಮಾಜದ ಅಸಹಾಯಕರ ನೆರವಿಗೆ ಬಂದರೆ... ಯಾವುದನ್ನು ಆರಿಸಿಕೊಳ್ಳುತ್ತೀ? ಎಲ್ಲರೂ ನನ್ನಂತೆ, ನಿನ್ನಂತೆ ಯಾಕಿರಬೇಕು?' ಅಂದೆ.

ಮೋಹನನ ಮುಗ್ಧ ಧೋರಣೆ ಆತ ದುಷ್ಟ ಬಂಡಾಯಗಾರನನ್ನು, ನೀಚ ಕಮ್ಯುನಿಸ್ಟ್‌ರನ್ನು ಮೆಚ್ಚುವಂತೆ ಮಾಡಬಹುದು ಎಂದು ಎಚ್ಚರಿಸಿದೆ. ಇದನ್ನೆಲ್ಲ ಮೋಹನನಿಗೆ ಪ್ರತಿಭಟನೆಯ ಬಗ್ಗೆ ಮನವೊಲಿಸಲು ನಾನು ಹೇಳಿರಲಿಲ್ಲ. ಪತ್ರಿಕೆ ಅನಿರೀಕ್ಷಿತ ರೀತಿಯಲ್ಲಿ, ಅಂತರ್ಜಲದಂತೆ ನಿಗೂಢವಾಗಿ ಬೆಳೆಯುವುದನ್ನು ಸೂಚಿಸಲು ಹೇಳಿದ್ದೆ. ನಾಗತಿಹಳ್ಳಿ ಚಂದ್ರಶೇಖರ್ ತನ್ನ ನಿಷ್ಠುರ ಕ್ಷಣದಲ್ಲಿ ನನಗೆ ಹೇಳಿದ್ದ: "ಮೇಷ್ಟರು ನನ್ನನ್ನು ವಿಮರ್ಶೆಯಿಂದ ಎಚ್ಚರಿಸಿದಂತೆಯೇ ಟೀಕಿಸಿದ್ದಾರೆ; ಬೇಸರ ಪಡಿಸಿದ್ದಾರೆ; ನನಗೆ ಬಹಳ ಅನ್ಯಾಯ ಮಾಡಿದ್ದಾರೆ. ಆದರೂ ನಾನು ಅವರನ್ನು ಬಿಡಲಾಗಿಲ್ಲ, ಇದು ವಿಚಿತ್ರ."

ನಾನೆಂದೆ "ನಿನ್ನ ಪ್ರಕಾರ ಅದೆಲ್ಲ ಟೀಕೆ ಮತ್ತು ಖಂಡನೆ. ನನ್ನ ಪ್ರಕಾರ **statement of fact.** ಕಂಡದ್ದನ್ನು ತಣ್ಣಗೆ ಹೇಳಿದ್ದು ಮಾತ್ರ."

ಅಷ್ಟರಲ್ಲಿ ಸಾಕಷ್ಟು ಹೊತ್ತಾಗಿತ್ತು. ಹದಿನೆಂಟರ ವರ್ಷದ ಬೇಸಿಗೆಯ ಸಂಜೆಯಲ್ಲಿದ್ದೆವು. ●

ಸಮಾಜವಾದಿ ಹೆಂಡತಿ, ಕೋಮುವಾದಿ ಗಂಡ ಇದ್ದರೆ ಸಂಸಾರ...?

ಕಣ್ಣಾಮುಚ್ಚಾಲೆ

ಮಹಾದೇವ್, ಶಿವನಗರ
ಕುಮ್ಮಿ-ಯಡ್ಡಿ ಸರ್ಕಾರಕ್ಕೆ ಒಂಬತ್ತು ತಿಂಗಳು ತುಂಬುತ್ತಾ ಬಂತು?
* ಪ್ರಿಮೆಚೂರ್ ಆಗಿ ಹಗರಣಗಳ ಡೆಲಿವರಿ ಆದಮೇಲೆ ಇನ್ನೇನು ಹಡೆಯಬಲ್ಲರು.

ಎಚ್.ಸಿ. ಭಾಗ್ಯಕುಮಾರ್, ಬೆಂಗಳೂರು
ಮಾನದಂಡ ಎಂದರೇನು?
* ವಂಶದ ಮಾನವನ್ನು ಹರಾಜು ಹಾಕಿದ ದಂಡಪಿಂಡ ನಿಖಿಲ್‌ಗೌಡ.

ಕೆ.ಶ್ರೀನಿವಾಸ್, ಮಂಡ್ಯ
ನಮ್ಮ ಸರ್ಕಾರ ರಾಜ್ಯೋತ್ಸವಕ್ಕೆ 'ವೀರ ಕನ್ನಡಿಗ' ಪ್ರಶಸ್ತಿ ಕೊಟ್ಟರೆ?
* ಸದಾನಂದಗೌಡ ಮತ್ತು ಸಿ.ಟಿ.ರವಿ ಶರ್ಟ್ ಬಿಚ್ಚಿ ಕದನಕ್ಕಿಳಿಯುತ್ತಾರಂತೆ.

ಜೆ.ಎ. ಖಲಂದರ್ ಅಜೀಜ್, ಜಾವಗಲ್
ಬಜರಂಗಿಗಳು ಹುಟ್ಟಿದ ಕ್ಷಣ ಮತ್ತು ನಕ್ಷತ್ರ ಯಾವುದು?
* ಅವಲಕ್ಷಣ ಮತ್ತು ನಕ್ಷತ್ರಿಕ ಕೂಡಿದ ಗಳಿಗೆ.

ಪಾರ್ವತಿ, ಕುಮಟಾ
ಆದರ್ಶ ಸೋದರರು ರಾಮ-ಲಕ್ಷ್ಮಣ, ಆದರ್ಶ ಸೋದರಿಯರು?
* ಕೃಷ್ಣ ಪರಮಾತ್ಮನ ಹೆಂಡತಿಯರೇ ಇರಬೇಕು.

ಒದು ಸಿದ್ದೇಗೌಡ, ಕಬ್ಬೇಹಳ್ಳಿ
ಬೈರಪ್ಪಂಗೆ ಅಮೆರಿಕದಲ್ಲಿ ಭಕ್ತರು, ಲಂಕೇಶ್‌ಗೆ?
* ದಡ್ಡ ಭಕ್ತರಿಗಿಂತ ಜಾಣ-ಜಾಣೆ ಅಭಿಮಾನಿಗಳೇ ಲೇಸು, ಗೊತ್ತಾ?

ಎಚ್.ಸಿ. ನಾಗರತ್ನ, ಬೆಂಗಳೂರು
ಕಾಡೇ-ಗೂಡೇ ವಿಭಾಗದಲ್ಲಿ ಬಹುಮಾನಿತ ಪ್ರಶ್ನೆಗಳ ಹಣವನ್ನೇ ಕಳುಹಿಸುವುದಿಲ್ಲ?
* ನಾವಂತೂ ಹಾಗೆ 'ಕಣ್ಣಾ ಮುಚ್ಚಾಲೆ' ಆಡೋಲ್ಲಪ್ಪ

ಅಂಬುಜಾ, ಶೋರಾಪುರ
'ಆಲ್‌ರೌಂಡರ್' ಎಂದರೆ?
* ನಮ್ಮ ಮಂಡ್ಯದ ಗಂಡು ಅಂಬಿ ಅನ್ನುತ್ತಿವೆ ಅಲ್ಲಿನ ಹೈಕಳುಗಳು.

ಎಂ. ನಿಸರ್ಗ, ದಾವಣಗೆರೆ
ಪತ್ರಿಕೆಯ ತುಂಟಾಟವನ್ನು ಮಠದಲ್ಲಿರುವ ಸ್ವಾಮಿಗಳು ಓದುತ್ತಾರಾ?
* ಅದರಲ್ಲೂ ಅವರದ್ದು 'ದ್ವೈತ' ನಿಲುವಂತೆ.

ಪಿ.ಎನ್. ಶ್ರೀವತ್ಸ, ಬೆಂಗಳೂರು
ನಾಲಿಗೆ ಕಚ್ಚಿದಾಗಲೇ ಸಾನಿಯಾ ಮಿರ್ಜಾ ಬಲು ಪಸಂದಾಗಿ ಕಾಣಿಸಲು ಕಾರಣ?
* ಅದನ್ನು ನೋಡೇ ಸದ್ಯದಲ್ಲೇ ಮಲಬಾರ್ ಗೋಲ್ಡ್ ಕಂಪನಿ ಅವಳ ನಾಲಿಗೆಗೂ ವಜ್ರ ತೊಡಿಸಲಿದೆಯಂತೆ.

ಡಿ.ಎಲ್. ಸುರೇಶ್, ಹರಪನಹಳ್ಳಿ
City ರವಿನಾ, ಸೀಟಿ ರವಿನಾ ಅಥವಾ CET ರವಿನಾ?
* ಈಗಂತೂ **'Puncture'** ರವಿ.

ಸಾಬಿಯಾ ಬೇಗಂ, ದೇವದುರ್ಗ
ನಾಯಕ ನಟರೆಲ್ಲಾ ಯಾಕೆ ಮೀಸೆ ಬಿಡಲ್ಲ?
* ಷ್...! ಇದನ್ನು ಕೇಳಿಸಿಕೊಂಡು ವಿಷ್ಣುವರ್ಧನ್ ಮತ್ತೆ ಗಿರಿಜಾ ಮೀಸೆ ಬಿಟ್ಟಾರು ಹುಷಾರ್.

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
ಲೈಫ್ ಪಾರ್ಟನರ್‌ಗೂ, ಬಿಸಿನೆಸ್ ಪಾರ್ಟನರ್‌ಗೂ ಏನು ವ್ಯತ್ಯಾಸ?
* ಎರಡೂ ಕಡೆ ಸ್ಲೀಪಿಂಗ್ ಪಾರ್ಟನರ್‌ಗಳಿಗೆ ಸ್ಕೋಪ್ ಇದೆ.

ಎಸ್. ಶಶಿಧರ, ಬೆಂಗಳೂರು
ಪ್ರಸಾದ್ ಬಿದ್ದಪ್ಪ ಬೆಂಗಳೂರಿನ ನಿರ್ಮಾಪಕನಂತೆ?
* ಕ್ಯಾಟ್‌ವಾಕಿಗೂ, ಪೊಲೀಸರ ಹ್ಯಾಂಡ್‌ಕಫಿಗೂ ವ್ಯತ್ಯಾಸ ಗೊತ್ತಿಲ್ಲ, ಪಾಪ!

ಚಾಂದಪಾಶಾ, ದೇವದುರ್ಗ
ಸರಸಕೆ ಸರಿ ಸಮಯ?
* ಆಶೆ + ಅವಕಾಶ ಸೇರಿಕೊಂಡಾಗ!

ಎಂ.ಶಿವಕುಮಾರ್, ಕುಮಟಾ
ಸಮಾಜವಾದಿ ಹೆಂಡತಿ, ಕೋಮುವಾದಿ ಗಂಡ ಇದ್ದರೆ ಸಂಸಾರ...?
* ಜಾಲಿ ಸರಕಾರದ ಗತಿಯೇ ಆಗುತ್ತೆ

ಬಹುಮಾನಿತ ಪ್ರಶ್ನೆ

ಧೀ ತುಂಟಿ!

ಊರಿನವರೆಲ್ಲಾ ವ್ಯಭಿಚಾರದಲ್ಲಿ ತೊಡಗಿದ್ದರಲ್ಲದೆ, ತಮ್ಮಿಂದಾದ ಪ್ರಮಾದದ ಬಗ್ಗೆ ಬಂದು ಪಾದ್ರಿಯ ಮುಂದೆ ಹೇಳುತ್ತಿದ್ದರು. ಅವರ ಕತೆಗಳನ್ನು ಕೇಳಿ, ಕೇಳಿ ಬೇಸರಗೊಂಡ ಪಾದ್ರಿ "ಇನ್ನು ಮುಂದೆ ಯಾರಾದರೂ ತಾವು ವ್ಯಭಿಚಾರದಲ್ಲಿ ತೊಡಗಿದ್ದೆವು ಎಂದರೆ ನಾನು ಈ ಊರನ್ನೇ ಬಿಟ್ಟುಹೋಗುತ್ತೇನೆ" ಎಂದು ಬೆದರಿಸಿದ. ಆತನನ್ನು ಕಂಡರೆ ಊರಿನವರಿಗೆಲ್ಲಾ ಇಷ್ಟವಿದ್ದರಿಂದ ಇನ್ನು ಮುಂದೆ ತಮ್ಮಿಂದಾದ ತಪ್ಪಿನ ಬಗ್ಗೆ ಹೇಳುವಾಗ "ಜಾರಿಬಿದ್ದೆ" ಎಂದು ಹೇಳುವುದಾಗಿ ನಿರ್ಧರಿಸಿದರು. ಈ ಪದ್ಧತಿ ಹೀಗೆ ಮುಂದುವರೆದು ಒಂದು ದಿನ ಪಾದ್ರಿ ತೀರಿಕೊಂಡ.

ಆತನ ಜಾಗಕ್ಕೆ ಬಂದ ಹೊಸ ಪಾದ್ರಿಗೆ ಊರಿನ ಜನ ಅಷ್ಟೊಂದು ಬಾರಿ "ಜಾರಿ ಬೀಳುತ್ತಿದ್ದದ್ದು" ಚಿಂತಾಕ್ರಾಂತನನ್ನಾಗಿಸಿತು. ಆತ ಊರಿನ ಮೇಯರ್‌ನನ್ನು ಕಂಡು "ಪಾದಚಾರಿಗಳಿಗೆ ತುಂಬಾ ಕಷ್ಟವಾಗಿ ಅವರೆಲ್ಲಾ ಜಾರಿ ಬೀಳುತ್ತಿದ್ದಾರೆ. ಇಲ್ಲಿನ ರಸ್ತೆಗಳನ್ನು ರಿಪೇರಿ ಮಾಡಿಸಿ" ಅಂದ.



ಅದನ್ನು ಕೇಳಿ, ಪಾದ್ರಿಗೆ "ಜಾರಿ ಬೀಳುವುದು" ಅಂದರೆ ಊರಿನವರ ಪ್ರಕಾರ ಏನೆಂದು ಗೊತ್ತಿಲ್ಲ ಎಂದು ಅರಿವಾಗಿ ಜೋರಾಗಿ ನಕ್ಕ. ಮೇಯರ್ ಆ ಪದದ ಹಿಂದಿನ ಅರ್ಥ ಹೇಳುವುದಕ್ಕೆ ಮುನ್ನ ಪಾದ್ರಿ "ಏನು ನಗುತ್ತಿದ್ದೀರಾ? ನಿಮ್ಮ ಹೆಂಡತಿಯೇ ಕಳೆದ ವಾರ ಮೂರು ಬಾರಿ ಜಾರಿ ಬಿದ್ದಿದ್ದಾಳೆ, ಗೊತ್ತಾ?" ಎಂದು ಕೇಳಿದ.

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:

ದೊಡ್ಡವರ ಮಕ್ಕಳೆನಿಸಿಕೊಳ್ಳಲು ಇರಬೇಕಾದ ಅರ್ಹತೆಗಳೇನು?

ಅಕ್ಟೋಬರ್ 25ರ ಸಂಚಿಕೆಯ ನಮ್ಮ ಪ್ರಶ್ನೆ: ಕೋಮುವಾದಿ ಸರ್ಕಾರವೇ 'ಕೋಮುವಾದಿಗಳಿಗೆ ಶಿಕ್ಷೆ' ಎನ್ನುತ್ತಿದೆಯಲ್ಲ?

ನಿಮ್ಮ ಉತ್ತರ: ಪೊಲೀಸರೇ ಕಳ್ಳತನ ಮಾಡಿಸಿ ಕಳ್ಳರನ್ನು ಹಿಡಿಯುತ್ತೇವೆ ಎನ್ನುವಂತಿದೆ.

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಎಸ್.ಎ. ಸಾಹೇಬ್, ದಾವಣಗೆರೆ

ಹುಲ್ಲುಭತ್ರದ ಹಕ್ಕಿರಾಮನೂ ಆತನ ನಾಯಿಯೂ!

ಇವತ್ತಿಗೂ ಅದನ್ನು ಹುಲ್ಲುಭತ್ರ ಅಂತಲೇ ಕರೆಯುತ್ತಾರೆ.

ಮಲ್ಲೇಶ್ವರ ಸರ್ಕಲ್‌ನಿಂದ ಗುಟ್ಟಳ್ಳಿ ಸರ್ಕಲ್‌ಗೆ ಹೋಗುವ ರಸ್ತೆಯಲ್ಲಿ ಸ್ವಿಮ್ಮಿಂಗ್ ಪೂಲ್ ಎದುರಿಗಿರುವುದೇ ಈ ಹುಲ್ಲುಭತ್ರ. ಲಿಂಕ್ ರಸ್ತೆಯ ಫ್ಲೈಓವರ್‌ಗೂ ಕೋದಂಡರಾಮಪುರಕ್ಕೂ ಕೊಂಡಿಯಂತಿರುವ ಈ ಹುಲ್ಲುಭತ್ರವೇ ರೌಡಿ ಜಗತ್ತಿನ ಅನೇಕ ಹತ್ಯೆಗಳಿಗೆ ಇವತ್ತಿಗೂ ಮೂಕಸಾಕ್ಷಿಯಂತಿದೆ. ಇದರ ಪಕ್ಕದ್ದೇ ರೌಡಿ ಅನಿಲನ ಮನೆ. ಇದರ ಮಗ್ಗುಲಿಗೇ ಹಕ್ಕಿರಾಮನ ಕೊಲೆಯಾಯಿತು. ಅದಕ್ಕೆ ಪ್ರತೀಕಾರವಾಗಿ ಹಕ್ಕಿರಾಮನ ಶಿಷ್ಯರು ಭಗವಾನ್ ಎಂಬ ಕಾರ್ಪೊರೇಷನ್ ಗುತ್ತಿಗೆದಾರನ ತಮ್ಮ ಸಂಪತ್ತು ಎಂಬಾತನನ್ನು ಕೊಂದರು. ಕ್ರಮೇಣ ಕೊಂದವರಲ್ಲೇ ಕಚ್ಚಾಟ ಬಂದು ಶೇಖ್ರಿ ಎಂಬ ರೌಡಿಯನ್ನು ಹಕ್ಕಿರಾಮನ ಅಕ್ಕನ ಮಗನ ಗ್ಯಾಂಗ್ ಇದೇ ಹುಲ್ಲುಭತ್ರದ ಎದುರಿಗೇ ಕೊಚ್ಚಿ ಹಾಕಿತು. ಇಲ್ಲೇ ಕೋದಂಡರಾಂಪುರದ ಮೊದಲ ರೌಡಿ ಮಾಲಿಂಗನ ಮೇಲೆ ಜೈರಾಜ್ ಗ್ಯಾಂಗ್ ದಾಳಿ ನಡೆಸಿತು. ಲೆಕ್ಕವಿಲ್ಲದಷ್ಟು ಮಾರಾಮಾರಿ, ಊಹೆಗೆ ನಿಲುಕದಷ್ಟು ಕೊಲೆಗಳೆಲ್ಲ ಈ ಹುಲ್ಲು ಭತ್ರದ ಎದುರಿಗೇ ಏಕೆ ನಡೆದವೋ ಗೊತ್ತಿಲ್ಲ.


ಹಕ್ಕಿರಾಮ

ಅದೇನು ಲತ್ತೆಯೋ ಈ ಹುಲ್ಲುಭತ್ರದ ಸುತ್ತಮುತ್ತ ಅದೆಷ್ಟು ಮನೆಗಳಿವೆಯೋ ಅಂಥ ಪ್ರತಿಮನೆಯಲ್ಲೂ ಒಬ್ಬನಲ್ಲಾ ಒಬ್ಬ ಜೈಲಿಗೆ ಹೋಗಿರ್‍ತಾನೆ.....!

ಹಾಗಂಥ ಹೇಳಿದ್ದು ಒಬ್ಬ ಪೊಲೀಸ್ ಅಧಿಕಾರಿ. ಕ್ರೈಂ ಜಗತ್ತಿನಲ್ಲಿ ಲತ್ತೆ ಎಂದರೆ ದುರ್ದೆಸೆ, ಗ್ರಹಚಾರ ಎಂದರ್ಥ. ಇಂಥ ಶನಿದೆಸೆಗೆ ಬೆಂಗಳೂರು ಮಹಾನಗರ ಪಾಲಿಕೆಯ ಟೆಂಡರ್ ದಂಧೆಯೇ ಕಾರಣ ಎಂಬುದು ಮಾತ್ರ ಈತನಕ ಯಾರಿಗೂ ಅರ್ಥವಾಗಿಲ್ಲ. ಬೆಂಗಳೂರಿನ ರೌಡಿ ಕಾಳಗಗಳಿಗೆ ಇವತ್ತು ಹೇಗೆ ರಿಯಲ್ ಎಸ್ಟೇಟ್ ದಂಧೆ ಕಾರಣವೋ ಹಾಗೆಯೇ ಒಂದಾನೊಂದು ಕಾಲಕ್ಕಿದ್ದ ಪೆಟ್ರೋಲ್ ಕಲಬೆರಕೆಯ ಸುತ್ತಲೇ ಭೀಕರ ಗ್ಯಾಂಗ್‌ವಾರ್‌ಗಳು ಹುಟ್ಟಿಕೊಂಡವು ಎಂಬುದು ಕೆಲವರ ವಾದ. ಬಹುಶಃ ಅವರ್‍ಯಾರಿಗೂ ಕಾರ್ಪೊರೇಷನ್ ಕಾಂಟ್ರಾಕ್ಟ್ ಮಾಫಿಯಾದ ವಿಸ್ತಾರ ಗೊತ್ತಿರಲಿಕ್ಕಿಲ್ಲ. ಅದರ ರಕ್ತದಾಹ ಆಯಿಲ್ ಮಾಫಿಯಾಕ್ಕಿಂತ ದೊಡ್ಡದಿತ್ತು. ರೌಡಿ ಕೊರಂಗು ಮತ್ತು ಬನಾಯ್ಸ್ ಮಧ್ಯೆ ಹೆಡೆಯೆತ್ತಿದ ಜಿದ್ದಾಜಿದ್ದಿ ಇವತ್ತು ಹೇಗೆ ಇಡೀ ಬೆಂಗಳೂರಿನ ಕ್ರೈಂ ಜಗತ್ತನ್ನು ಇಬ್ಭಾಗ ಮಾಡಿ ಹಾಕಿದೆಯೋ ಹಾಗೆಯೇ ಮೂರು ತಲೆಮಾರಿನ ರೌಡಿಗಳು ಈ ಒಂದೇ ಕಾರಣಕ್ಕಾಗಿ ರಕ್ತ ಹರಿಸಿದ್ದಾರೆ.

ಇದಕ್ಕೆ ಇವತ್ತಿಗೂ ಉದಾಹರಣೆಯಾಗಿ ನಿಲ್ಲುವವನು ಹಕ್ಕಿರಾಮ!


ಅಶೋಕ್ ಕುಮಾರ್

ಇಲ್ಲಿಗೆ ಹತ್ತು ವರ್ಷದ ಹಿಂದೆ ಇವತ್ತು ಕೊರಂಗುಗೆ ಇದ್ದಷ್ಟೇ ಕುಖ್ಯಾತಿ ಹಕ್ಕಿರಾಮನಿಗಿತ್ತು. ಜನರ ಬಾಯಲ್ಲಿ ಹಕ್ಕಿರಾಮ ಎಂದೇ ಹೆಸರಾಗಿದ್ದ ಆತನ ಬಗ್ಗೆ ಈಪಾಟಿ ಕುತೂಹಲಕ್ಕೆ ಕಾರಣವಾದದ್ದು ಆತನ ಡಾಬರ್‌ಮನ್ ನಾಯಿ. ಬೇರೆಲ್ಲಾ ರೌಡಿಗಳು ತಮ್ಮ ರಕ್ಷಣೆಗೆ ರೇಜರ್ ಅಥವಾ ಬಟನ್ ಚಾಕು ಇಟ್ಟುಕೊಂಡಿರುತ್ತಿದ್ದರೆ, ಬೆನ್ನಿಗೆ ಹಿಂಡು ಹುಡುಗರಿರುತ್ತಿದ್ದರೆ, ಈ ರಾಮ ಮಾತ್ರ ತನ್ನ 'ಬಾಡಿಗಾರ್ಡ್' ಆಗಿಟ್ಟುಕೊಂಡಿದ್ದು 'ಹನುಮ' ಎಂಬ ಡಾಬರ್‌ಮನ್ ತಳಿಯ ನಾಯಿಯನ್ನು. ಯಾವುದೋ ಕಾಲಕ್ಕೆ ಬರಗಾಲಕ್ಕೆ ಬೇಸತ್ತು ನಾಗಮಂಗಲದಿಂದ ವಲಸೆ ಬಂದಿದ್ದ ಆತನ ತಂದೆತಾಯಿ ಹುಲ್ಲುಭತ್ರದ ಬಳಿ ಮನೆ ಮಾಡಿ ಹಸು ಸಾಕಿಕೊಂಡಿದ್ದರು.

ಅದು 1985 ರ ಕಾಲ. ಆಗಿನ್ನೂ ಗುಟ್ಟಳ್ಳಿ, ಕೋದಂಡರಾಂಪುರ, ಶೇಷಾದ್ರಿಪುರ, ಶ್ರೀರಾಂಪುರ, ದೇವಯ್ಯ ಪಾರ್ಕ್ ಏರಿಯಾಗಳಲ್ಲಿ ಹಸುಗಳನ್ನು ಸಾಕಿ ಹಾಲು ಮಾರಿಕೊಂಡಿದ್ದ ಕುಣಿಗಲ್-ನಾಗಮಂಗಲದ ಕಡೆಯ ಒಕ್ಕಲಿಗರು ಈ ಸುತ್ತಮುತ್ತ ವಾಸಿಸುತ್ತಿದ್ದರು. ಈಗೇನಿದ್ದರೂ ಮನೆ ಮುಂದೆ ಹಸು ಕರೆಸಿಕೊಂಡು ಎದುರಿಗೇ ಹಾಲು ಕರೆಸಿಕೊಳ್ಳುವುದು ಮಾರ್ವಾಡಿಗಳಿಗಷ್ಟೇ ಸಾಧ್ಯ. ಅವತ್ತು ಈ ಸುತ್ತಮುತ್ತ ಡೈರಿ ಹಾಲಿಗಿಂತಲೂ ತಾಜಾ ಹಸುವಿನ ಹಾಲೇ ಜನಪ್ರಿಯವಾಗಿತ್ತು. ಅಂಥ ಹಸು ಸಾಕಿಕೊಂಡವರೆಲ್ಲ ಮೇವಿಗೆಂದು ಈ ಹುಲ್ಲು ಭತ್ರಕ್ಕೆ ಬರಲೇಬೇಕಿತ್ತು. ಪ್ರತಿ ದಿನ ಬೆಳಿಗ್ಗೆ ರಾಶಿಗಟ್ಟಲೆ ಹುಲ್ಲು, ಜೋಳದ ಕಡ್ಡಿಗಳ ಹೊರೆ ಲಾರಿಗಳಲ್ಲಿ ಬರುತ್ತಿತ್ತು. ಬೆಳಿಗ್ಗೆ ಹತ್ತು ಗಂಟೆಯ ಹೊತ್ತಿಗೆಲ್ಲಾ ಹುಲ್ಲು ವ್ಯಾಪಾರವಾಗಿಬಿಡುತ್ತಿತ್ತು. ಹಾಗೇ ಕುಣಿಗಲ್-ನಾಗಮಂಗಲದ ಕಡೆಯಿಂದ ವಲಸೆ ಬಂದ ರೈತಾಪಿ ಮೂಲದ ಕನ್ನಡಿಗರಿಗೂ, ಚಿತ್ತೂರು-ಗುಡಿಯಾತ್ತಂ ಕಡೆಯಿಂದ ವಲಸೆ ಬಂದ ಆಂಧ್ರದವರಿಗೂ 1978 ರ ತನಕ ಸಣ್ಣಪುಟ್ಟ ಘರ್ಷಣೆಗಳಿದ್ದವು. ಈ ಪೈಕಿ ಕನ್ನಡಿಗರ ಪರ ನಿಂತು ರೌಡಿ ಎನ್ನಿಸಿಕೊಂಡ ಮಾಲಿಂಗ ಕೋದಂಡರಾಂಪುರ ಕಂಡ ಮೊದಲ ರೌಡಿಯಾದರೆ ಆತನ ಮೇಲೆ ಜಯರಾಜ್ ಪಡೆಯನ್ನು ಛೂಬಿಟ್ಟು ಹೊಡೆಸಿದ ಮಾರಪ್ಪ ನಾಯ್ಡುವೇ ಇವತ್ತಿನ ರೌಡಿ ಕೊರಂಗು ಸೋದರ ಮಾವ.

ಹಕ್ಕಿರಾಮನ ತಂದೆ ರೌಡಿಯಲ್ಲದಿದ್ದರೂ ಮಾಲಿಂಗನ ಜೊತೆ ಆವತ್ತು ವಾಟಾಳ್ ಚಳವಳಿಗಳಲ್ಲಿ ಭಾಗವಹಿಸುತ್ತಿದ್ದ. ಆತನ ಮಗ ಹಕ್ಕಿರಾಮ ಪಕ್ಕಾ ರಾಜ್‌ಕುಮಾರ್ ಅಭಿಮಾನಿ. ಆ ದಿನಗಳಲ್ಲಿ ಈ ಸುತ್ತಮುತ್ತಲ ರೌಡಿಗಳನ್ನೆಲ್ಲ ಜನ ಒಟ್ಟೊಟ್ಟಾಗಿ ನೋಡುತ್ತಿದ್ದದ್ದು ಹಕ್ಕಿ ಜೂಜಿನಲ್ಲಿ. ಮನೆಯ ತಾರಸಿಗಳಲ್ಲಿ ಜಮೆಯಾಗಿ ಪಾರಿವಾಳಗಳನ್ನು ಹಾರಿಬಿಟ್ಟು ಅದರ ಮೇಲೆ ಜೂಜು ಕಟ್ಟಿ ಆಡುತ್ತಿದ್ದ ರೌಡಿಗಳ ಪೈಕಿ ಶ್ರೀರಾಂಪುರ ಕಿಟ್ಟಿ, ಕೋಳಿ ಫಯಾಜ್, ಗೆಡ್ಡಾನಾಗ, ಬಂಡ, ಮಾಸ್ತಿ, ಸಿದ್ಧ, ಕರಿಯ ಎಲ್ಲರೂ ಇರುತ್ತಿದ್ದರು. ತನ್ನ ಪ್ರಾಯಕ್ಕೆ ಬರುವ ಹೊತ್ತಿಗೆಲ್ಲಾ ಹಕ್ಕಿರಾಮ ಯಾರ್‍ಯಾರದೋ ಮನೆಗೆ ನುಗ್ಗಿದ್ದೇ ಪಾರಿವಾಳಗಳನ್ನು ಕದ್ದು ತರುತ್ತಿದ್ದ. ಅವನ್ನೆಲ್ಲ ತನ್ನ ಮನೆಯಲ್ಲೇ ಅಕ್ಕರೆಯಿಂದ ಸಾಕುತ್ತಿದ್ದ. ಹಾಗೇ ಕದ್ದ ಪಾರಿವಾಳಗಳ ವಸೂಲಿಗೆಂದು ಯಾರೇ ಬಂದರೂ ಅವರನ್ನು ತನ್ನ ಡಾಬರ್‌ಮನ್ ನಾಯಿಯನ್ನು ಛೂಬಿಟ್ಟು ಹೆದರಿಸುತ್ತಿದ್ದ. ಪಾರಿವಾಳದ ಜೂಜಿಗೆಂದು ಸಣ್ಣಪುಟ್ಟ ವಸೂಲಿಗೂ ಇಳಿದಿದ್ದ. ಅದಕ್ಕೆಂದು ತನ್ನದೇ ಗ್ಯಾಂಗ್ ಕೂಡ ಕಟ್ಟಿಕೊಂಡ.

ಕಾಂಟ್ರಾಕ್ಟ್ ಮಾಫಿಯಾದ ಪಿತಾಮಹ ಮಾರಪ್ಪ ನಾಯ್ಡು ಆಗಿನ್ನೂ ಬದುಕಿದ್ದ. ಆತನ ತಂಗಿಯ ಮಗ ಮುನಿರತ್ನ ಮತ್ತು ಭಗವಾನ್ ಎಂಬಿಬ್ಬರು ರೌಡಿಗಳು ಕೊತ್ವಾಲ್ ರಾಮಚಂದ್ರನ ಎಡಗೈ ಬಲಗೈಯಂತಿದ್ದರು. ಕ್ರಮೇಣ ಇಬ್ಬರೂ ಪ್ರಾಣಸ್ನೇಹಿತರು ಕಾರ್ಪೊರೇಷನ್ ಕಂಟ್ರಾಕ್ಟ್ ಶುರು ಹಚ್ಚಿಕೊಂಡರು. ಕೊತ್ವಾಲ್ ಬೆಂಗಳೂರಿನ ಬೀದಿಗಳಲ್ಲಿ ಶರವೇಗದಲ್ಲಿ ಬುಲೆಟ್ ಓಡಿಸುತ್ತಿದ್ದರೆ ಆತನ ಬಾಡಿಗಾರ್ಡ್‌ಗಳಂತೆ ಎಡಬಲಕ್ಕೆ ಆತನಷ್ಟೇ ವೇಗದಿಂದ ಬೈಕ್ ಓಡಿಸುತ್ತಿದ್ದ ಈ ಜೋಡಿಯ ಮಧ್ಯೆ 1987 ರ ಹೊತ್ತಿಗೆ ಸಣ್ಣದೊಂದು ಬಿರುಕು ಬಂದಿತ್ತು. ಅದು ಕೂಡ ಟೆಂಡರ್ ಜಗಳವಾಗಿತ್ತು. ಎಂ. ರಘುಪತಿ ಆ ಹೊತ್ತಿಗೆ ಮಲ್ಲೇಶ್ವರದ ಎಮ್ಮೆಲ್ಲೇ. ಬಹುತೇಕ ಕಾಮಗಾರಿ ಟೆಂಡರ್‌ಗಳನ್ನೆಲ್ಲ ಮುನಿಯೇ ಬಾಚಿಕೊಳ್ಳುತ್ತಿದ್ದರಿಂದ ಭಗವಾನ್ ರೊಚ್ಚಿಗೆದ್ದ.

ಎಷ್ಟೆಂದರೂ ಲಾಭದ ಬಾಬತ್ತು. ಬರಿ ಮಾತಿಗೆ ಬಗೆಹರಿಯುವಂತಿರಲಿಲ್ಲ. ಬರುಬರುತ್ತ ಭೋಗಸ್ ಬಿಲ್ ಕಾಯಕದಲ್ಲಿ ಮುನಿ ಶ್ರೀಮಂತನಾದದ್ದನ್ನು ಭಗವಾನ್ ಸಹಿಸದೇ ಹೋದ. ಅದಕ್ಕೆ ತಕ್ಕಂತೆ ಮುನಿ ತಮ್ಮ ಕೊರಂಗು ಜೇಡರಹಳ್ಳಿ ಕೃಷ್ಣಪ್ಪನ ಪಡೆಯಲ್ಲಿ ದಿನೇದಿನೇ ಬೆಳೆಯುತ್ತಿದ್ದ. ತನ್ನ ಎದುರಾಳಿ ಮುನಿಯನ್ನು ಮುಗಿಸಿಬಿಡಲು ತೀರ್ಮಾನಿಸಿದ ಭಗವಾನ್ ಅದಕ್ಕೆಂದು ಆಯ್ದುಕೊಂಡಿದ್ದೇ ಹಕ್ಕಿರಾಮನನ್ನು.

ಮುನಿಯನನ್ನು ಮುಗಿಸಿದರೆ ಒಂದು ಜೊತೆ ಹಸು ಮತ್ತು ಹೆಬ್ಬಾಳದಲ್ಲೊಂದು ಸೈಟು ಕೊಡುತ್ತೇನೆಂದು ಭಗವಾನ್ ಮಾತು ಕೊಟ್ಟಿದ್ದ. ಮುನಿ ಮತ್ತು ಭಗವಾನ್ ಮನೆಗಳೆರಡೂ ಅಕ್ಕಪಕ್ಕದಲ್ಲೇ ಇದ್ದವಾದರೂ ಕಾರ್ಪೊರೇಷನ್ ಟೆಂಡರ್‌ನ ಜಿದ್ದು ಒಬ್ಬರನ್ನೊಬ್ಬರು ಮುಗಿಸುವ ಮಟ್ಟಕ್ಕಿತ್ತು. ಆದರೆ ಮುನಿ ಆಯಸ್ಸು ಗಟ್ಟಿಯಿತ್ತೇನೋ; ಹಕ್ಕಿರಾಮನಿಂದ ಮಾರಕ ಪೆಟ್ಟು ತಿಂದೂ ಮುನಿ ಬದುಕಿಬಿಟ್ಟ.

1987ರ ಅಕ್ಟೋಬರ್ ತಿಂಗಳಲ್ಲಿ ಮಿನರ್ವ ಸರ್ಕಲ್ಲಿನ ಪಾಲಿಕೆ ಇಂಜಿನಿಯರ್ ಕಚೇರಿಯಲ್ಲಿದ್ದ ಮುನಿಯ ಮೇಲೆ ಹಕ್ಕಿರಾಮನ ಪಡೆ ಭಯಂಕರ ದಾಳಿಯನ್ನೇ ನಡೆಸಿತ್ತು. ಸರಿಸುಮಾರು ಹನ್ನೆರಡು ಮಚ್ಚಿನೇಟುಗಳನ್ನು ತಿಂದ ನಂತರವೂ ಮುನಿ ಬದುಕಿಬಿಟ್ಟ. ಸತ್ತೇ ಹೋದ ಎಂದುಕೊಂಡು ಕತ್ತರಿಸುವುದನ್ನು ನಿಲ್ಲಿಸಿ ವಾಪಸ್ಸಾಗಿದ್ದ ಹಕ್ಕಿರಾಮನಿಗೇ ಅಚ್ಚರಿಯಾಗುವಂತೆ ಮುನಿ ಚೇತರಿಸಿಕೊಂಡ ಮತ್ತು ಅದೇ ಕಾರಣಕ್ಕಾಗಿ ಹುಲ್ಲುಭತ್ರದ ಸುತ್ತ ಸರಣಿ ಹತ್ಯಾಕಾಂಡವೊಂದು ನಡೆದುಹೋಯಿತು.

'ನನ್ನ ಕೆಲಸ ನಾನು ಮಾಡಿದ್ದೇನೆ. ನಿನ್ನ ಮಾತಿಗೆ ತಕ್ಕಂತೆ ಜೊತೆ ಹಸು ಮತ್ತು ಸೈಟು ಮಡಗು' ಎಂದು ಹಕ್ಕಿರಾಮ ಭಗವಾನ್‌ನನ್ನು ಪೀಡಿಸತೊಡಗಿದ. ಆದರೆ ಭಗವಾನ್ ಪಾಕಡಾ 'ಮುನೀನ ನಿನ್ನಿಂದ ತೆಗೆಯೋಕ್ಕಾಗ್ಲಿಲ್ಲ ಅಂದಮೇಲೆ ನಿನಗೇಕೆ ಸೈಟು ಕೊಡಬೇಕು?' ಎಂದು ತಿರುಗಿಬಿದ್ದ.

ಹಾಗಂತ ಹಕ್ಕಿರಾಮ ಬಿಡಬೇಕಲ್ಲ; ಭಗವಾನ್ ಶಿಷ್ಯ ಪೈಪ್‌ಲೈನ್‌ನ ಟೆಂಪೋ

ರಿವೇಂಜ್ ಕಿಲ್ಲಿಂಗ್ಸ್ 2

ರಾ. ಸೋಮನಾಥ್

ರಮೇಶನನ್ನು ಅಟಕಾಯಿಸಿಕೊಂಡಿದ್ದೇ ಆತನ ದೇಹಕ್ಕೆ ಎಂಬತ್ತೂರು ಕಡೆ ಚಾಕು ಹಾಕಿದ್ದ. ಟೆಂಪೋ ರಮೇಶ ಆ ಕಾಲಕ್ಕೇ ದಿವಾಕರ್ ಹೆಗಡೆಯ ಶಿಷ್ಯನಾಗಿದ್ದ. ಮೊದಲು ಮುನಿಯ ಕೊಲೆಯತ್ನ ಆನಂತರ ಟೆಂಪೋ ರಮೇಶನ ಹತ್ಯಾಯತ್ನ; ಈ ಎರಡೂ ಪ್ರಕರಣಗಳಿಂದಾಗಿ ಹಕ್ಕಿರಾಮನ ಹೆಸರು ರಾತ್ರೋರಾತ್ರಿ ಕುಖ್ಯಾತಿಗೆ ಈಡಾಯಿತು. ಸುಭಾಶ್ ಭರಣಿ ಆಗ ಬೆಂಗಳೂರಿನ ಡಿಸಿಪಿ. ಹಕ್ಕಿರಾಮನನ್ನು ಹಿಡಿಯಲೆಂದೇ ಶೇಷಾದ್ರಿಪುರದ ಎಸಿಪಿ ಇಕ್ಬಾಲ್, ಸರ್ಕಲ್ ಇನ್ಸ್‌ಪೆಕ್ಟರ್ ಸುರೇಂದ್ರ ನಾಯಕ್, ವೈಯಾಲಿಕಾವಲ್ ಸಬ್ ಇನ್ಸ್‌ಪೆಕ್ಟರ್ ಬಿ.ಬಿ. ಅಶೋಕ್‌ಕುಮಾರ್ ಮುಂತಾದವರಿದ್ದ ವಿಶೇಷ ಪೊಲೀಸ್ ತಂಡವನ್ನೇ ರಚಿಸಿದರು.


ಮಾರಪ್ಪ ನಾಯ್ಡು

ಯಾವತ್ತು ಭಗವಾನ್ ವಿರುದ್ಧ ಹಕ್ಕಿರಾಮನ ಗ್ಯಾಂಗ್ ತಿರುಗಿಬಿತ್ತೋ ಮುನಿ ತಮ್ಮ ಕೊರಂಗು ಹಕ್ಕಿರಾಮನ ಬೆಂಬಲಕ್ಕೆ ನಿಂತ. ಆತನ ಎದುರಾಳಿ ಬನಾಯಸ್ ಭಗವಾನ್‌ನನ್ನು ಬೆಂಬಲಿಸತೊಡಗಿದ. ಅಂತಿಮವಾಗಿ 1988 ರ ಫೆಬ್ರವರಿಯಲ್ಲಿ ಹಕ್ಕಿರಾಮನನ್ನು ಆತನ ನಾಯಿಯ ಸಮೇತ ಅಶೋಕ್‌ಕುಮಾರ್ ಹಿಡಿದು ಜೈಲಿಗೆ ಹಾಕಿದಾಗ ಸಂಜೆವಾಣಿಯ ಮುಖಪುಟದಲ್ಲೇ ರಾಮನ ಫೋಟೋ ಪ್ರಿಂಟಾಗಿತ್ತು. ಅನ್ಯಾಯವಾಗಿ ರಾಮನ ನಾಯಿ 'ಹನುಮ' ಕೂಡ ವೈಯಾಲಿಕಾವಲ್‌ನ ಲಾಕಪ್ಪು ಸೇರಿತ್ತು.


ಮುನಿರತ್ನಂ

ಸರಿಸುಮಾರು ಒಂದು ವರ್ಷ ಜೈಲು ಕಳೆದ ರಾಮ ಜಾಮೀನುಗಿಟ್ಟಿಸಿ ಹೊರಬಿದ್ದನಾದರೂ ತನ್ನನ್ನು ಈ ಗತಿಗೆ ತಂದ ಭಗವಾನ್‌ನನ್ನು ಬಿಡಲಿಲ್ಲ. ಆತನ ಇನ್ನೊಬ್ಬ ಶಿಷ್ಯನನ್ನು ದೇವಯ್ಯ ಪಾರ್ಕ್ ಬಳಿ ತದಕುತ್ತಿದ್ದಾಗಲೇ ಎಸ್ಸೈ ಅಶೋಕ್‌ಕುಮಾರ್ ಆತನ ಮೇಲೆ ಗುಂಡು ಹಾರಿಸಿದ್ದರು. ಅದು ಆತನ ಕಾಲಿಗೆ ತಾಗಿತ್ತು. ಹಾಗಿದ್ದೂ ಎಸ್ಕೇಪಾಗಿದ್ದ ರಾಮ ಕೊನೆಗೆ ಮತ್ತಿಕೆರೆ ಸಮೀಪದ ಸಿಂಗಾಪೂರ್ ಲೇಔಟಿನಲ್ಲಿ ಎರಡನೇ ಬಾರಿ ಅಶೋಕ್ ಕುಮಾರ್ ಕೈಗೆ ಸಿಕ್ಕಿ ಮತ್ತೆ ಜೈಲು ಪಾಲಾದ. ಒಂದೇ ತಿಂಗಳಿಗೆ ಹೊರಬಂದು ಮತ್ತೆ ಭಗವಾನ್ ಮನೆ ಮೇಲೆ ದಾಳಿ ನಡೆಸಿದ. ಆತನ ತಾಯಿ ಮತ್ತು ಹೆಂಡತಿಯನ್ನೂ ಬಿಡದೇ ಕಾಟಕೊಟ್ಟ.

ಅಲ್ಲಿಗೆ ಭಗವಾನ್ ನಿರ್ಧರಿಸಿಬಿಟ್ಟ. 'ಆಯ್ತು ಸೈಟು ಮತ್ತು ಜೊತೆ ಹಸು ಕೊಡ್ತೀನಿ ಬಂದು ಬಿಡು' ಎಂದು ತನ್ನ ಮನೆಗೇ ಕರೆಸಿಕೊಂಡ. ತನ್ನ ಮನೆಯ ಕೊಟ್ಟಿಗೆಯ[illegible] ಆತನಿಗೆ ಕಂಠಮಟ್ಟ ಕುಡಿಸಿದ. ಮೂರ್ತಿ, ಟೆಂಪೋ ರಮೇಶ, ಭಗವಾನ್ ಮುಂತಾದವರೆಲ್ಲ ಹಕ್ಕಿರಾಮನ[illegible] ಕೊಟ್ಟಿಗೆಯಲ್ಲೇ ಕೊಚ್ಚಿ ಕೊಂದರು. ಆತನ [illegible]


ವಯ್ಯಾಲಿಕಾವಲ್‌ನಲ್ಲಿರುವ ಹುಲ್ಲುಭತ್ರ

ದೇಹವನ್ನು ತುಂಡುತುಂಡು ಮಾಡಿ ಮು[illegible] ಕಟ್ಟಿ ಮಲ್ಲೇಶ್ವರದ ಹದಿನೇಳನೇ ಕ[illegible] ಸೇತುವೆ ಮೇಲೆ ಎಸೆದರು.

ಅದು ಕೋದಂಡರಾಂಪುರದ ಕಾಂಟ್ರಾ[illegible] ಮಾಫಿಯಾದಲ್ಲಿ ಸಂಭವಿಸಿದ ಮೊ[illegible] ಕೊಲೆಯಾಗಿತ್ತು.

ಹಕ್ಕಿರಾಮ ಸತ್ತಿದ್ದೇ ಆತನ ನಿಯ[illegible] ನಾಯಿ 'ಹನುಮ' ಬೀದಿಗೆ ಬಿತ್ತು. ಒಂದ[illegible] ದಿನಗಳ ಕಾಲ ಹುಲ್ಲುಭತ್ರದ ಸುತ್ತಮ[illegible] ಓಡಾಡಿಕೊಂಡಿದ್ದ ಅದನ್ನು ಜನ ಕೊನೆ[illegible] ಬಾರಿ ನೋಡಿದ್ದು ರಸ್ತೆಗೆ ಅಪ್ಪಚ್ಚಿಯಾ[illegible] ಮಾಂಸದ ಮುದ್ದೆಯಾಗಿ. ಅನ್ನ ನೀರಿ[illegible] ಸುಸ್ತಾಗಿ ಮಲಗಿದ್ದ ಅದರ ಮೇಲೆ ಯಾ[illegible] ಲಾರಿ ಹತ್ತಿಸಿಕೊಂಡು ಹೋಗಿದ್ದರು!

ಬಹುಶಃ ಹಕ್ಕಿರಾಮನ ಶಿಷ್ಯರ್‍ಯಾರಾದರೂ ಇದ[illegible] ನಾಯಿ ಹನುಮನನ್ನು ನೋಡಿಕೊಳ್ಳುತ್ತಿದ್ದರೋ ಏ[illegible] ಆದರೆ ಹಕ್ಕಿರಾಮನನ್ನು ಕೊಂದು ಭಗವಾನ್ ಜ[illegible] ಪಾಲಾಗುತ್ತಿದ್ದಂತೆ; ರಾಮನ ಅಕ್ಕನ ಮಗ [illegible] ಹುಲ್ಲುಭತ್ರದ ಶೇಖ್ರಿ, ಮೂರ್ತಿ ತುತ[illegible] ರಾಜ, ನಟರಾಜ, ಎಳನೀರ್ ವ[illegible] ಮುಂತಾದವರೆಲ್ಲ ಸೇರಿಕೊಂಡು [illegible] ಹುಲ್ಲುಭತ್ರದ ಬಳಿ ಭಗವಾನ್‌ನ [illegible] ಸಂಪತ್ತು ಎಂಬಾತ ನನ್ನು ತುಂಡು ತು[illegible] ಮಾಡಿ ಕೊಂದರು. ಅಳಿದುಳಿದ ಶಿ[illegible] ಭಗವಾನ್‌ನ ಇನ್ನಿಬ್ಬರು ಶಿಷ್ಯರನ್ನು ಆರ್[illegible] ಬಾರ್‌ನ ಎದುರು ಮಾರಕವಾಗಿ ಕ[illegible] ಜೈಲು ಪಾಲಾದರು.

ರಾಮನ ಕೊಲೆ ಕೇಸು ಮು[illegible] ಭಗವಾನ್ ಜೈಲಿಂದ ಹೊರಬರು[illegible] ಹೊತ್ತಿಗೆ ಕೊರಂಗು ರೆಡಿಯಾಗಿದ[illegible] ಒಂದೆಡೆ ಕೊರಂಗು ಭಯ, ಮತ್ತೊಂದೆಡೆ ರಾಮ ಶಿಷ್ಯರ ಪ್ರತೀಕಾರದ ಭಯಕ್ಕೆ ಬಿದ್ದೇ ಭಗವಾನ್ ತನ್ನ ಕೋದಂಡರಾಂಪುರದ ಮನೆ ಖಾಲಿ ಮಾಡಿಕೊಂಡು ಗಂಗೇನಹಳ್ಳಿಗೆ ಹೋದ. ಅದೇನು ಶಾಪವೋ; ಹಾಗೇ ಹಕ್ಕಿರಾಮನ ಹತ್ಯೆಗೆ ಪ್ರತಿ[illegible] ಹೇಳಿದ ಆತನ ಶಿಷ್ಯರಲ್ಲೇ ಕ[illegible] ಶುರುವಾಗಿ ಅದು ಮತ್ತೊಂದು ರಕ್ತಗಾಥೆಗೆ [illegible] ಯಾಯಿತು. ಇವತ್ತಿಗೂ ಹುಲ್ಲುಭತ್ರ ಅವತ್ತಿ[illegible] ಇದೆ. ಅಲ್ಲಿಗೆ ಈಗ ದಿನಕ್ಕಷ್ಟು ಹುಲ್ಲು ರಾಶಿ ಬರು[illegible] ಏಕೆಂದರೆ ಈ ಸುತ್ತಮುತ್ತ ಹಸು ಸಾಕಿಕೊಂಡಿದ್ದವರು[illegible] ಅಲ್ಲಿಲ್ಲ; ಅವತ್ತು ಬಡಿದಾಡಿದ ಅನೇಕರಿಂದು ಬದು[illegible] ಆದರೆ ಕಾರ್ಪೊರೇಷನ್ ಟೆಂಡರ್ ಮಾಫಿಯಾ [illegible] ಇವತ್ತಿಗೂ ನಿಂತಿಲ್ಲ. ಅದು ಹುಟ್ಟುಹಾಕಿದ ಹಕ್ಕಿ[illegible] ನಂಥ ಒಬ್ಬ ರೌಡಿ ಮುಗಿದ ಮಾತ್ರಕ್ಕೇ ಹುಲ್ಲು[illegible] ರಕ್ತಗಾಥೆ ಮುಗಿ ಯಲಿಲ್ಲ.


ನಂತರ ನಡೆದದ್ದೇ ಶೇಖ್ರಿ ಕೊಲೆ. ಇವನು ಕೊ[illegible] ಶಿಷ್ಯ.

(ಮುಂದಿನ ವ[illegible]

ಚಾಮುಂಡೇಶ್ವರಿ:

ಅಭ್ಯರ್ಥಿಗಾಗಿ ಗೌಡರ ಲೇಟೆಸ್ಟ್ ತಂತ್ರ


ಹಿಂದಿನ ಕಾಲದಲ್ಲಿ ರಾಜಮಹಾರಾಜರ ಆಸ್ಥಾನಗಳಿಗೆ ಹೊರದೇಶದ ಪೈಲ್ವಾನರುಗಳು ಬಂದು ಸವಾಲ್ ಹಾಕುತ್ತಿದ್ದರು. "ನಿಮ್ಮ ರಾಜ್ಯದಲ್ಲಿ ನನ್ನ ವಿರುದ್ಧ ಸೆಣಸಾಡುವ ಪೈಲ್ವಾನರಿದ್ದರೆ ಕರೆಸಿ" ಎಂದು ಸೆಡ್ಡು ಹೊಡೆಯುತ್ತಿದ್ದರು. ಆಗ ಮಹಾರಾಜರು ತಮ್ಮ ಪ್ರಾಂತ್ಯದಲ್ಲೆಲ್ಲಾ ಡಂಗೂರ ಹೊಡೆಸಿ "ಇಂಥ ಹೊರದೇಶದ ಪೈಲ್ವಾನನನ್ನು ಸೋಲಿಸಿದರೆ ಇಷ್ಟು ಚಿನ್ನ, ಭೂಮಿ, ಇನಾಮು" ಎಂದು ಸಾರಿ ಸಮಬಲದ ಪೈಲ್ವಾನನ್ನು ಹುಡುಕಿ, ಹೊರ ದೇಶದ ಪೈಲ್ವಾನ್‌ನ ಮೇಲೆ ಕುಸ್ತಿಗೆ ಬಿಟ್ಟು ದೇಶದ ಮರ್ಯಾದೆಯನ್ನು ಕಾಪಾಡಿಕೊಳ್ಳುತ್ತಿದ್ದರು.



ಅಂತಹ ಸ್ಥಿತಿ ಈಗ ನಮ್ಮ ರಾಜ್ಯದ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ, ಅಗ್ರಜ ಎಚ್. ಡಿ. ರೇವಣ್ಣ ಮತ್ತವರ ಪಿತಾಜಿ ಎಚ್.ಡಿ.ದೇವೇಗೌಡರಿಗೆ ಬಂದಿದೆ. ಚಾಮುಂಡೇಶ್ವರಿ ಉಪ ಚುನಾವಣೆಯಲ್ಲಿ ಮಾಜಿ ಉಪಮುಖ್ಯಮಂತ್ರಿ ಸಿದ್ಧರಾಮಯ್ಯನವರ ವಿರುದ್ಧ ಒಬ್ಬ ಅಭ್ಯರ್ಥಿಯನ್ನೂ ತಮ್ಮ ಪಕ್ಷದಿಂದ ಆಯ್ಕೆ ಮಾಡಲು ಸಾಧ್ಯವಾಗದೆ ಈ ಅಪ್ಪ-ಮಕ್ಕಳು ದಿನಕ್ಕೊಂದು ಯೋಜನೆ, ಘೋಷಣೆ ಮತ್ತು ಕಂಡವರ ಮನೆಗಳಲ್ಲಿ ಮಲಗುತ್ತಾ ಹಾಸ್ಯಾಸ್ಪದರಾಗುತ್ತಿದ್ದಾರೆ. ಈವರೆಗೆ ಇವರು ಅಭ್ಯರ್ಥಿಗಾಗಿ ಹುಡುಕಿದ್ದು ತಮ್ಮ ಎದುರಾಳಿ ಕಾಂಗ್ರೆಸ್ ಮನೆಯಲ್ಲೆ. ಆದರೆ, ಅಲ್ಲಿ ಮಿಕಗಳು ಬಲೆಗೆ ಬೀಳಲಿಲ್ಲವಾದ್ದರಿಂದ, ಈಗ ಅಭ್ಯರ್ಥಿಗಾಗಿ ಮತ್ತೊಂದು ತಂತ್ರ ರೂಪುಗೊಂಡಿದೆ.


ಹಿರಿಯ ಮುಖಂಡ ಹಾಗೂ ರಾಜ್ಯಸಭಾ ಸದಸ್ಯ ಎಂ. ರಾಜಶೇಖರಮೂರ್ತಿಯವರಿಗೆ ತಮ್ಮ ಅಳಿಯ ಹಾಗೂ ವಿಧಾನ ಪರಿಷತ್ ಸದಸ್ಯ ಚಿದಾನಂದರವರನ್ನು ಸಚಿವರಾಗಿ ಮಾಡಬೇಕೆನ್ನುವ ಆಸೆ ಇರುವುದು ಎಲ್ಲರಿಗೂ ಗೊತ್ತಿರುವ ಸತ್ಯ. ಇದನ್ನೇ ಬಂಡವಾಳ ಮಾಡಿಕೊಂಡ ಕುಮಾರಸ್ವಾಮಿ, ಚಿದಾನಂದರನ್ನೇ ಅಭ್ಯರ್ಥಿಯಾಗಿ ಹಾಕಲು ಯೋಚಿಸಿದ್ದರು. ಆದರೆ, ಹೀಗೆ ರಿಸ್ಕ್ ತೆಗೆದುಕೊಳ್ಳಲು ರಾಜಶೇಖರಮೂರ್ತಿ ಮತ್ತವರ ಅಳಿಯ ಚಿದಾನಂದ ಇಬ್ಬರೂ ಸಿದ್ಧರಿರಲಿಲ್ಲ. ಈಗ ಅದೇ ತಂತ್ರಕ್ಕೆ ಒಂದಿಷ್ಟು ಬದಲಾವಣೆ ಮಾಡಿರುವ ಕುಮಾರಸ್ವಾಮಿ ಅಂಡ್ ಕೊ. ಅದರ ನೀಲನಕ್ಷೆಯನ್ನು ರಾಜಶೇಖರಮೂರ್ತಿಯವರ ಮುಂದಿಟ್ಟು ಕೈ ಕೈ ಹೊಸೆಯುತ್ತಾ ನಿಂತಿದೆ.

ಕುಮಾರಣ್ಣ ಅಂಡ್ ಕಂಪೆನಿಯ ಲೆಕ್ಕಾಚಾರದ ಪ್ರಕಾರ, ಈ ವಾರದಲ್ಲಿ ನಡೆಯುತ್ತದೆ ಎಂದು ಹೇಳಲಾಗಿರುವ ಸಚಿವ ಸಂಪುಟ ವಿಸ್ತರಣೆಯಲ್ಲಿ ಚಿದಾನಂದರವರನ್ನು ಮಂತ್ರಿಯನ್ನಾಗಿ ನೇಮಿಸಿಬಿಡುವುದು. ಆನಂತರ ಅವರನ್ನೇ ಚಾಮುಂಡೇಶ್ವರಿಯಿಂದ ಸ್ಪರ್ಧೆಗಿಳಿಸುವುದು. "ಚಾಮುಂಡೇಶ್ವರಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಒಬ್ಬ ಸಚಿವರನ್ನೇ ನೇಮಿಸಿದ್ದೇವೆ. ಅವರನ್ನು ಗೆಲ್ಲಿಸಿದರೆ ನಿಮಗೆ ಒಬ್ಬರು ಸಚಿವರೇ ದೊರೆತಂತಾಗುತ್ತದೆ" ಎಂದು ಮತದಾರರ ಕಿವಿ ಮೇಲೆ ಹೂವಿಡುವುದು- ಇದು ಕುಮಾರಸ್ವಾಮಿಯ ಲೇಟೆಸ್ಟ್ ತಂತ್ರ.



ಜೆ.ಟಿ.ದೇವೇಗೌಡ

ಒಂದು ಪಕ್ಷ ಚಿದಾನಂದ ಅಭ್ಯರ್ಥಿಯಾಗಲು ಒಪ್ಪದಿದ್ದರೆ? ಹೇಗಿದ್ದರೂ "ಆಯ್ಕೆ ರಾಜಶೇಖರಮೂರ್ತಿಯವರಿಗೆ ಬಿಟ್ಟಿದ್ದೇವೆ ಎಂದು ಹೇಳಿಕೆ ನೀಡಿದ್ದೇವೆ. ಮೂರ್ತಿಗಳು ಆಯ್ಕೆ ಮಾಡಲಿ. ಆ ಅಭ್ಯರ್ಥಿಯನ್ನು ಗೆಲ್ಲಿಸುವುದು ಸಹ ಅವರದ್ದೇ ಜವಾಬ್ದಾರಿಯಾಗುತ್ತದೆ. ಅದರೊಂದಿಗೆ ಸುತ್ತೂರು ಮಠದ ಬುದ್ಧಿಗಳನ್ನು ನಮ್ಮ ಅಭ್ಯರ್ಥಿಯ ಪರವಾಗಿ ನಿಲ್ಲುವಂತೆ ಮಾಡುವುದು ಸಹ ಮೂರ್ತಿಗಳ ಭುಜ ಏರುತ್ತದೆ. ಅವರು ಆ ಜವಾಬ್ದಾರಿಯಿಂದ ನುಣುಚಿಕೊಳ್ಳುವಂತಿಲ್ಲ. ಒಂದು ಪಕ್ಷ ನಮ್ಮ ಅಭ್ಯರ್ಥಿ ಸೋತರೆ? ಆಗ ಅದರ ಹೊಣೆಯನ್ನು ಮೂರ್ತಿಗಳ ಮೂತಿಗೆ ಒರೆಸಿದರಾಯಿತು" ಎಂಬ ತಂತ್ರ ಕುಮಾರಣ್ಣನದು.



ಆದರೆ, "ಮುಖ್ಯಮಂತ್ರಿ ಮಾಡುತ್ತೇವೆ, ಪಕ್ಷದ ಅಧ್ಯಕ್ಷರನ್ನಾಗಿ ಮಾಡುತ್ತೇವೆ" ಎಂದೆಲ್ಲಾ ಗೋಗರೆದು ರಾಜಶೇಖರಮೂರ್ತಿಯವರನ್ನು ಬಿಜೆಪಿಯಿಂದ ಜೆ.ಡಿ.ಎಸ್.ಗೆ ತಂದ ಅಪ್ಪ-ಮಕ್ಕಳು ಆನಂತರ ಮಾಡಿದ್ದೇನು ಎಂಬುದು ಅವರಿಗೆ ತಿಳಿದಿದೆ. ಇದೇ ಕಾರಣಕ್ಕಾಗಿ ರಾಜಶೇಖರಮೂರ್ತಿ ಯಾವುದೇ ಪ್ರತಿಕ್ರಿಯೆ ನೀಡದೆ ತಟಸ್ಥರಾಗಿದ್ದಾರೆ. ಇದರ ಮಧ್ಯೆ ಸಿದ್ಧರಾಮಯ್ಯ ಮತ್ತು ಮೂರ್ತಿಗಳ ನಡುವೆ ಕೆಲ ದಿನಗಳ ಹಿಂದೆ ಮಾತುಕತೆ ನಡೆದಿದ್ದು, "ಯಾವುದೇ ಕಾರಣದಿಂದ ನಾನಾಗಲಿ ಇಲ್ಲವೇ ನನ್ನ ಅಭ್ಯರ್ಥಿಯಾಗಲಿ ನಿಮ್ಮ ಎದುರು ಸ್ಪರ್ಧಿಸುವುದಿಲ್ಲ" ಎಂದು ಮೂರ್ತಿ ಸಿದ್ಧರಾಮಯ್ಯನವರಿಗೆ ವಚನ ನೀಡಿದ್ದಾರಂತೆ. ಹೀಗಾಗಿ, ಜೆ.ಡಿ.ಎಸ್.ಗೆ ಅಭ್ಯರ್ಥಿಗಳೇ ಸಿಗದೆ ಇಕ್ಕಟ್ಟಿನ ಪರಿಸ್ಥಿತಿ ಎದುರಾಗಿದೆ.

ಅಭ್ಯರ್ಥಿಯ ಕತೆ ಹೀಗಾದರೆ, ಯಾರನ್ನೂ ನಂಬದ ಸ್ಥಿತಿಗೆ ತಲುಪಿರುವ ಗೌಡ ಅಂಡ್ ಸನ್ಸ್, ಮೈಸೂರು ಜಿಲ್ಲಾ ಜೆ.ಡಿ.ಎಸ್. ಅಧ್ಯಕ್ಷ ಹಾಗೂ ಶಾಸಕ ಜಿ.ಟಿ. ದೇವೇಗೌಡರನ್ನೇ ದೂರ ಸರಿಸಿರುವ ಸುದ್ದಿ ಹಬ್ಬಿದೆ. ಸಿದ್ಧರಾಮಯ್ಯನವರ ಬಲಗೈ ಬಂಟರಂತಿದ್ದ ಜಿ.ಟಿ. ದೇವೇಗೌಡರು ನಂತರದ ರಾಜಕೀಯ ಬೆಳವಣಿಗೆಯಲ್ಲಿ ಗೌಡರ ಪರ ನಿಂತಿದ್ದು ನಿಜ. ಆದರೆ, ಇವರು ಒಳಗಿಂದೊಳಗೆ ತಮ್ಮ ಗುರು ಸಿದ್ಧರಾಮಯ್ಯನವರಿಗೆ ಸಹಾಯ ಮಾಡುತ್ತಿದ್ದಾರೆಂಬ ಬಲವಾದ ಅನುಮಾನ ಕುಮಾರಸ್ವಾಮಿಗಿದೆ. ಕಳೆದ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯ್ತಿ ಚುನಾವಣೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಸಿದ್ಧರಾಮಯ್ಯ ಬೆಂಬಲಿಗರು ಗೆಲ್ಲಲು ಜಿ.ಟಿ. ದೇವೇಗೌಡರ ಪರೋಕ್ಷ ಬೆಂಬಲವೇ ಕಾರಣವೆಂದು ಇವರ ಭಾವನೆ.

ಈ ಕಾರಣದಿಂದ ಈಗ ಚಾಮುಂಡೇಶ್ವರಿಯಲ್ಲಿ ಪಕ್ಷದ ಬಲಿಷ್ಠ ಸೇನಾನಿಗಳು ಯಾರೂ ಇಲ್ಲ. ಅಭ್ಯರ್ಥಿಗಳ ಆಯ್ಕೆ ಜವಾಬ್ದಾರಿಯನ್ನು ರಾಜಶೇಖರ ಮೂರ್ತಿಯವರ ಮೇಲೆ ಹೊರೆಸಿದ್ದೇವೆ ಎಂದು ಜಿ.ಟಿ. ದೇವೇಗೌಡರಿಂದಲೇ ಪತ್ರಿಕಾ ಹೇಳಿಕೆ ಕೊಡಿಸಲಾಯ್ತು. ಇನ್ನು ಹಣಕಾಸಿನ ಉಸ್ತುವಾರಿಯನ್ನು ಲ್ಯಾಂಡ್ ಡೆವಲಪರ್ ಸಾ. ರಾ. ಮಹೇಶ್‌ಗೆ ವಹಿಸಿ, ಜಿ.ಟಿ.ಡಿ.ಯನ್ನು ಸಂಪೂರ್ಣ ಕಡೆಗಣಿಸಲಾಗಿದೆ. ಕಳೆದ ಬಾರಿ ಭಾರತೀಯ ಜನತಾಪಕ್ಷದಿಂದ ಜೆ.ಡಿ.ಎಸ್.ಗೆ ಬಂದ ಕೆ.ಆರ್. ನಗರ ತಾಲೂಕಿನ ಸಾಲಿಗ್ರಾಮದ ಸಾ. ರಾ. ಮಹೇಶ್‌ಗೆ ಮಹತ್ವ ಸಿಕ್ಕಿರುವುದು ಸಹಜವಾಗಿ ಜಿ.ಟಿ. ದೇವೇಗೌಡರಿಗೆ ಅಸಮಾಧಾನ ತಂದಿದೆ. ಹೀಗೆ ಗಾಯವನ್ನು ಕೆರೆಕೆರೆದು ರಣ ಮಾಡಿಕೊಳ್ಳುತ್ತಿರುವ ಕುಮಾರಸ್ವಾಮಿ, ಅಭ್ಯರ್ಥಿಗಾಗಿ ಇನ್ನೆಷ್ಟು ತಂತ್ರ ರೂಪಿಸಲಿದ್ದಾರೋ ಕಾದುನೋಡಬೇಕು.

-ಎಂ. ಎಸ್. ಸತೀಶ್

ನನ್ನ ಸಹಾಯ ಇಲ್ದೆ ಕಾಂಗ್ರೆಸ್ ಸರಕಾರ ಮಾಡಂಗೇಯಿಲ್ಲ



ಪ್ರತಿ ವರ್ಷದ ಸಂಪ್ರದಾಯದಂತೆ ಈ ವರ್ಷವೂ ಕೂಡ ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ತಾರತಮ್ಯವನ್ನು ಹೊರಹಾಕಿದೆಯಂತಲ್ಲಾ. "ಈಗಾಗಲೇ ಪ್ರಕಟಗೊಂಡಿರುವ ಪ್ರಶಸ್ತಿ ಪಟ್ಟಿ ನೋಡಿದರೆ ಜೆಡಿಎಸ್ ಪಟ್ಟಿ ನೋಡಿದಂತಾಗುತ್ತದೆ. ಆದ್ದರಿಂದ ಚೆಡ್ಡಿ ಪಟ್ಟಿಯೊಂದನ್ನು ಕೂಡಲೇ ಬಿಡುಗಡೆ ಮಾಡಬೇಕು" ಎಂದು ಚೆಡ್ಡಿಗಳೆಲ್ಲ ಒಂದೆಡೆ ಸೇರಿ ಎಡೂರಪ್ಪನ ಮೇಲೆ ಒತ್ತಡ ಹಾಕಿದವಂತಲ್ಲಾ. ಎಡೂರಪ್ಪ ಚೆಡ್ಡಿಗಳ ಆಕ್ರೋಶವನ್ನು ಕಿಂಚಿತ್ತೂ ಅರ್ಥಮಾಡಿಕೊಳ್ಳದೆ "ನಾನು ಮುಖ್ಯಮಂತ್ರಿಗಳಿಗೆ ಹೇಳಿ ಎಲ್ಲಾ ವಿಭಾಗದ ಪ್ರಶಸ್ತಿಗೂ ನಮ್ಮವರನ್ನು ಆಯ್ಕೆ ಮಾಡಿ ಎಂದು ಒತ್ತಾಯ ಮಾಡ್ತಿನಿ. ಯಾರೂ ಹೆದರೊ ಅಗತ್ಯವಿಲ್ಲ" ಎಂದುಬಿಟ್ಟರಂತಲ್ಲಾ. ಈ ಕೋ-ಜಾ ಸರಕಾರದ ಹಾದರಕ್ಕುಟ್ಟಿದಂತಿರುವ ಪ್ರಶಸ್ತಿಯನ್ನು ಮುಟ್ಟಿಯೂ ನೋಡುವುದಿಲ್ಲ ಎಂದು ಉಗ್ರ ಸಮಾಜವಾದಿ, ಸಾಹಿತಿಗಳು, ಜಾನಪದ ತಜ್ಞರು ಆಲೋಚಿಸುತ್ತಿರಲಾಗಿ, ಪ್ರಶಸ್ತಿ ಕಾರಣಕ್ಕೆ ಬೆಂಗಳೂರಿನಲ್ಲಿ ಸಿಗುವ ಸೈಟಿನ ಬೆಲೆ ನೋಡಿ ಬೆಪ್ಪಡಿದಂತೆ ಸುಮ್ಮನಾದರಂತಲ್ಲಾ, ಧೂತ್ತೇರಿ!

* * * * * * * * * * *

"ಯಾವ ಕಾರಣಗಳನ್ನು ಮುಂದಿಟ್ಟು ಕಾಂಗ್ರೆಸಿನಿಂದ ಹೊರಬಂದು, ರೆಸಾರ್ಟ್ ಬೀಚುಗಳಲ್ಲಿ ಪಾರ್ಟಿ ಮಾಡಿ, ಕೋ-ಜಾ ಸರಕಾರದೊಳಕ್ಕೆ ಸೇರಿದೆವೊ, ಆವತ್ತಿನಿಂದ ನಮ್ಮ ಮುಂದಿಟ್ಟದ್ದ ಆಮಿಷಗಳು ಒಂದೂ ಈಡೇರಿಲ್ಲ. ಮಂತ್ರಿಗಳಾಗಬೇಕಾದವರು ಮಂತ್ರಿಗಳಾಗಿಲ್ಲ, ನಿಗಮ ಮಂಡಲಿ ಕುರ್ಚಿಗಳು ಖಾಲಿ ಹೊಡೆಯುತ್ತಿವೆ. ಆದ್ದರಿಂದ ಇನ್ನು ಸುಮ್ಮನಿರಲು ಸಾಧ್ಯವೇ ಇಲ್ಲ" ಎಂದು ಜೆಡಿಎಸ್‌ನ ಜೀತಗಾರ ಶಾಸಕರು ಬಂಡಾಯ ಏಳಲಿದ್ದರಂತಲ್ಲಾ, ಈ ಶಾಸಕರ ಬಂಡಾಯದ ಸುಳಿವರಿತ ಕುಮಾರಸ್ವಾಮಿ, ಸದರಿ ಶಾಸಕರಿಗೆ ಹಂಚಲು ಗಣಿ ದುಡ್ಡು ನಿಂತು ಹೋಗಿರುವುದರಿಂದ ಏನು ಮಾಡುವುದೆಂದು ಯೋಚಿಸಿ "ನಿಮಗೆಲ್ಲಾ ಬೆಂಗಳೂರಿನ ಸುತ್ತ ಸೈಟು ಕೊಡುತ್ತೇನೆ" ಎಂದರಂತಲ್ಲಾ, ಸೈಟಿನ ಆಸೆ ಕೇಳಿದ ಶಾಸಕರು, ಇವತ್ತಿನ ಬೆಲೆಯಲ್ಲಿ ಏನಿಲ್ಲವೆಂದರೂ ಆರು ಕೋಟಿ ಬೆಲೆಬಾಳುವ ಸೈಟನ್ನು ಪಡೆದು ಇರುವಷ್ಟು ದಿನ ಮಜವಾಗಿರುವುದಕ್ಕಿಂತಲೂ ಒಣ ಬಂಡಾಯ ವನವಾಸದಂತೆ ಕಂಡು ತೆಪ್ಪಗಾದರಂತಲ್ಲಾ, ಧೂತ್ತೇರಿ!!

* * * * * * * * * * * *

ಹೆಗ್ಗಸುಟ್ಟು ಕಂಟ್ರಾಕ್ಟ್ ಮಾಡಿಸುತ್ತಲೇ ದಸ್ಯೆ ಸೇತುವೆಯನ್ನು ನುಂಗುವ ಕಲೆಯಲ್ಲಿ ನುರಿತ ಚೆಲುವರಾಯಸ್ವಾಮಿಯನ್ನು ನೋಡಿದ ದೇವೇಗೌಡರು ತಮ್ಮ ದತ್ತುಪುತ್ರನಂತೆ ಸಾಕಿ, ಬೆಳೆಸಿ ಮಂತ್ರಿ ಮಾಡಿದ್ದರಂತಲ್ಲಾ. ಮಂತ್ರಿಯಾಗಿದ್ದರೂ ಕೂಡ ಚೆಲುವರಾಯಸ್ವಾಮಿಯ ಮೂಗುದಾರವನ್ನು ಬಾಲಕೃಷ್ಣೇಗೌಡ ಹಿಡಿದು, ಕೊಳ್ಳುರಿಯನ್ನು ಕುಮಾರಣ್ಣ ಹಿಡಿದು, ಹಗ್ಗವನ್ನು ಮಾತ್ರ ಹಾಗೆ ಬಿಟ್ಟಿದ್ದರಂತಲ್ಲಾ. ಕೊಳ್ಳುರಿ ಮತ್ತು ಮೂಗುದಾರಕ್ಕೆ ಸೇರಿದ ಹಗ್ಗ ಮಾತ್ರ ಹಾಗೇ ಇದ್ದು ಈ ಹಗ್ಗವನ್ನು ಆಗಾಗ್ಗೆ ಯಾರೋ ಜಗ್ಗುತ್ತಾ ಚೆಲುವನಿಗೆ ಸನ್ನೆ ಮಾಡುತ್ತಿದ್ದುದು ಪತ್ತೆಯಾಗಿ, ಆಸಾಮಿಗಳು ಯಾರೆಂದು ಗುರುತಿಸಿದಾಗ, ಅವರೆಲ್ಲಾ ಕಾಂಗ್ರೆ ಪಾಳೆಯದವರೆಂದು ದೇವೇಗೌಡರಿಗೆ ಗೊತ್ತಾಗಿ ಹೋಯ್ತಂತಲ್ಲಾ. "ಗುಂಡೂರಾಯನಂತೆಯೇ ದೇಹ ಬೆಳೆಸಿಕೊಂಡು, ಜೊತೆಗೆ ಬುದ್ಧಿಯನ್ನು ಬೆಳೆಸಿಕೊಂಡಿರುವ ನೀನು, ಮನಸ್ಸು ಮಾಡಿದರೆ ಆ ದೇವೇಗೌಡರ ದಡ್ಡ ಮಕ್ಕಳನ್ನು ಮೀರಿಸಿಬಿಡಬಲ್ಲೆ. ಸುಮ್ಮನೆ ನಮ್ಮೊಡನೆ ಬಾ" ಎಂದು ಕಾಂಗ್ರೆಗಳು ಚೆಲುವನನ್ನು ಕರೆಯುತ್ತಿರುವುದು ಕಡೆಗೂ ಗೌಡರಿಗೆ ಗೊತ್ತಾಗಿ "ಯಾವುದಕ್ಕೂ ಚಾಮುಂಡೇಶ್ವರಿ ಚುನಾವಣೆ ಮುಗಿಯಲಿ. ಆ ಚೆಲುವನ ಜಾಗಕ್ಕೆ ಸುರೇಶ್‌ಗೌಡನನ್ನು ತಂದು ಬೆಳೆಸೋಣ" ಎಂದರಂತಲ್ಲಾ, ಧೂತ್ತೇರಿ!!

* * * * * * * * * * *

ಮಂಡ್ಯ ಬಸ್ಟಾಂಡಿನ ಕ್ಲೀನರ್‌ಗಳು "ಯಾರ್ರೀ ಹಟ್ನ, ಬೇವು, ಕಲ್ಲು, ಕೊತ್ತತ್ತಿ, ಕೊಡಿಯಾಲ, ಜಕ್ಕನಹಳ್ಳಿ, ಮೇಲುಕೋಟೆ" ಎಂದು ಕೂಗುವಂತೆ, ಕುಮಾರಸ್ವಾಮಿ ಪಟಾಲಂ ಎಲ್ಲಾ ಹಳ್ಳಿಗಳನ್ನು ತಡಕಾಡಿ, ಕೊನೆಗೆ ಬೇವುಕಲ್ಲಿನಲ್ಲಿ ಸೊಪ್ಪು ಸಾರು ಮುದ್ದೆ ನುಂಗಿ ಮಲಗಿದ್ದು ಹೊರಟರಂತಲ್ಲಾ, ಆಗ ಎದುರಿಗೆ ಕಾಣಿಸಿಕೊಂಡ ಅಂಗವಿಕಲರನ್ನು ನೋಡಿ "ನಿಮಗೆಲ್ಲಾ ಮುಂದಿನ ವರ್ಷದಿಂದ ಐನೂರು ಕೊಡ್ತೀನಿ" ಎಂದು ಮುಂದೆ ಸಾಗಿ, ವಯೋವೃದ್ಧರು ಕಂಡ ಕೂಡಲೇ "ನಿಮಗೂ ಐನೂರು ಕೊಡ್ತೀನಿ ಮುಂದಿನ ವರ್ಷ" ಎಂದುಬಿಟ್ಟರಂತಲ್ಲಾ. ಇನ್ನುಳಿದಂತೆ ಕೇಳಿದವರಿಗೆಲ್ಲಾ ಚೀಲದಲ್ಲಿ ತುಂಬಿಕೊಂಡು ಹೋಗಿದ್ದ ಹಣವನ್ನು ಎಣಿಸದೆ ಹಾಗೆ ಇರಿದುಕೊಡುತ್ತಿರಲಾಗಿ ಬೇವುಕಲ್ಲಿನ ಜನ "ಮುಖ್ಯಮಂತ್ರಿಯಂದ್ರೆ ಇವುನು ಕನಯ್ಯ, ದುಡಿದಿರೊ ದುಡ್ಡನೆಲ್ಲಾ ಜನಗಳಿಗೆ ಹಂಚತಾಕುಂತವುನಲ್ಲಾ, ರಾಜಕಾರಣಿ ಅಂದ್ರೆ ಹಿಂಗಿರಬೇಕು. ಆ ದೇವೇಗೌಡ ಬರೀ ಜೇಬಲ್ಲಿ ಬಂದು ನಮ್ಮನ್ನೇ ಕೇಳತಿದ್ದ. ಅಂಥಾ ಅಪ್ಪನಿಗೆ ಇಂತಾ ಮಗನೆ?" ಎಂದು ಮೆಚ್ಚಿಕೊಂಡರಂತಲ್ಲಾ, ಧೂತ್ತೇರಿ!!

* * * * * * * * * * *

ನಮ್ಮ ಪಂಚರಂಗಿ ಪಾರ್ಟಿ ಲೀಡರ್ ಬಂಗಾರಪ್ಪನವರಿಗೆ ಆಗಲೇ 74 ವರ್ಷ ತುಂಬಿ ಎರಡು ದಿನವಾಯ್ತು, ಇನ್ನು ಅಭಿನಂದಿಸಲೇ ಇಲ್ಲವಲ್ಲ ಎಂದು ಹೊಳೆದ ಕೂಡಲೇ ಫೋನ್ ಮಾಡಲಾಯ್ತು. ಸುಮಾರು ಹೊತ್ತು ರಿಂಗಾದ ನಂತರ "ಹಲೋ" ಎಂದರು. "ಹಲೋ, ನಾನು ಸಾರ್ ಯಾಹೂ. ತಮಗೆ 74 ವರ್ಷ ತುಂಬಿದ್ದಕ್ಕೆ ಅಭಿನಂದನೆಗಳು."

"ಥ್ಯಾಂಕ್ಯೂ ಯಾಹೂ. ಬಾಳ ದಿನಾಯ್ತು, ಸಿಕ್ಕಲೇಯಿಲ್ಲ?"



"ಹೌದು ಸಾರ್, ಅಂತೂ 74 ವರ್ಷ ತುಂಬಿಸಿಬಿಟ್ರಲ್ಲಾ ಸಾರ್?"

"ತುಂಬಿಸಲೇಬೇಕಲ್ಲ, ಕಳೆದ ವರ್ಷ 73 ವರ್ಷಾಗಿತ್ತು, ಅದ್ಕೆ ಈ ವರ್ಷ ಆಟೋಮ್ಯಾಟಿಕ್ಕಾಗಿ 74 ಆಯ್ತು."

"ನಿಜವಾಗ್ಲು ಅಂಗೆ ಕಾಣಲ್ಲ ಸಾರ್ ನೀವು. ಇನ್ನ 54 ವರ್ಷ ಅನ್ನಂಗೆ ಕಾಣ್ತಿರಿ!"

"ಯಾರ್ರಿ ಹೇಳಿದ್ದು ನಿಮಗೆ? 24 ವರ್ಷ ನನಗೆ. ಬೇಕಿದ್ರೆ ಬೆಳಿಗ್ಗೆ ಶಟ್ಲಾಡುವಾಗ ಬಂದು ನೋಡಿ."

"ನೋಡಿದ್ದೀನಿ ಸಾರ್. ನೀವು ಟ್ರ್ಯಾಕ್ ಸೂಟಲ್ಲೇ ಮನೆಗೆ ಬರುವಾಗ ನೋಡಿದೆ, ಅದೇ ಸೂಟಲ್ಲಿ ಬರ್ತಡೇ ಆಚರಿಸಿಕೊಂಡದ್ದು ನೋಡಿದೆ, ಆದ್ರೆ ರಾಜಕಾರಣ ಮಾತ್ರ ಕ್ರಾಕ್ ತರ ಮಾಡ್ತಿರಿ ಅನ್ನೋದೆ ಬೇಸರ ನಮಿಗೆ."

"ಮಿಸ್ಟರ್ ಯಾಹೂ, ಸರಿಯಾಗಿ ಮಾತಾಡದನ್ನ ಕಲ್ತುಕೊಬೇಕು ನೀವು. ಸಲಿಗೆ ಕೊಟ್ರೆ ನಾಯಿ ಕಂಕುಳ ಮೂಸಿ ನೋಡ್ತು ಅಂತ ನಾನೇನು ಕ್ರಾಕ್ ತರ ರಾಜಕಾರಣ ಮಾಡಿಲ್ಲ ಗೊತ್ತಾಯ್ತಾ?"

"ಸಾರಿ, ನೀವು ಬಿಜೆಪಿಗೋಗಿ ಅವುರಿಗೆ ಕನಿಷ್ಟ ಎಂಟತ್ತು ಸೀಟು ಹೆಚ್ಚಿಗೆ ಬರಂಗೆ ಮಾಡಿದ್ದು ಒಪ್ಪಿಗತ್ತಿರಾ?"

"ಎಂಟತ್ತು ಸೀಟೆಲ್ಲಿ? ಬರೋಬರಿ ನಲವತ್ತು ಸೀಟು ಗೆಲ್ಲಿಸಿಕೊಟ್ಟದ್ದೀನಿ."

"ಅವುರೀಗ ಅಧಿಕಾರ ಅನುಭವಸ್ತ ಅವುರೆ, ಆದರೆ ನೀವು ಟ್ರ್ಯಾಕ್ ಸೂಟಲ್ಲಿ ಇನ್ನ ಓಡುತ್ಲೆ ಇದ್ದೀರಿ?"

"ಏನೂ ಮಾಡಕ್ಕಾಗಲ್ಲ, ಪರಿಸ್ಥಿತಿಗಳು ಹಂಗಿರತವೆ. ನಾನ್ಯಾವತ್ತು ನನ್ನ ರಾಜಕಾರಣದ ಶೈಲಿ ನೋಡಿ ಬೇಸರ ಮಾಡಿಕೊಂಡಿಲ್ಲ."

"ಮುಂದೆ ಹ್ಯಂಗೆ ಸಾರ್?"

"ಮುಂದೆ ದೇವೇಗೌಡ್ರು ನಾನು ಜೊತೆಲಿ ಆಟ ಆಡ್ತೀವಿ. ಬಿಜೆಪಿ ಬರದು ಕಷ್ಟ. ಕಾಂಗ್ರೆಸ್ಸು ನನ್ನ ಸಹಾಯ ಇಲ್ದೆ ಸರಕಾರ ರಚನೆ ಮಾಡಕ್ಕಾಗಲ್ಲ, ಆಗೊಂದಾಟ ಆಡ್ತಿನಿ."

"ಪುನಃ ಮುಖ್ಯಮಂತ್ರಿ ಆಯ್ತಿರಾ?"

"ಆಗ್ಲೆ ಬೇಕಾಗಿದೆ!"

"ಯಾಕೆ ಸಾರ್?"

"ನನ್ನ ಆಶ್ರಯ, ಅಕ್ಷಯ, ಕುಶಲೂಪನೆ, ಯೋಜನೆ, ಎಷ್ಟೆ ಕಾರ್ಯಕ್ರಮಗಳು ಶುರು ಮಾಡಿದ ಜಾಗದಲ್ಲೇ ನಿಂತವೆ. ಅವನ್ನ ಮುಂದುವರಿಸಬೇಕು."

"ಆಶ್ರಯ ಐದು ಕೋಟಿ ಲಾಭ ತಂದು ಕೊಟ್ಟಿತ್ತಲವೆ?"

"ಇಡ್ರಿ, ಫೋನ್, ನಾನ್‌ಸೆನ್ಸ್!"

"ಥೂತ್ತೇರಿ!!!"

-ಯಾಹೂ

ಮಗ ಪುಂಡ ಅಪ್ಪ ಭಂಡ

ಅಣ್ಣಾ? ಯಾಕ್ ಹೇಳ್ತೀರಿ? ಎಸ್ಸೆಲ್ಸಿ ಓದುವಾಗಲೇ ಎಷ್ಟುಟ್ಟ ಹೋಗಿದ್ದ. ಹೋಟಿ ಮಾಡೋ ವಯಸ್ಸಾ ಅದು? ಅಪ್ಪ ಪಾರ್ಟಿ ಮೀಟಿಂಗು ಅಂಥ ಸುತ್ತಾದಿ ಕೊಂಡಿದ್ದ. ಅಮ್ಮ ಶಾಪಿಂಗು ಅದೂ ಇದೂ ಓಡಾದಿ ಕೊಂಡಿದ್ರು. ಇವ್ನು ಆ ವಯಸ್ಸಿಗೇ ಯಾರ್ಯಾರೋ ಹುಡುಗೀರನ್ನ ಮನೆಗೆ ಕರಕೊಂಡು ಬರ್ತಿದ್ದ! ನಾವು ಕೇಳೋಕ್ಕಾಗುತ್ತಾ? ಎಷ್ಟೆಂದರೂ ಅದು ಅವರ ಪರ್ಸನಲ್ ವಿಷ್ಯ ನೋಡಿ. ನಮ್ಮದೇನಿದ್ದರೂ ಪೊಲೀಸ್ ಕೆಲಸ ಮಾತ್ರ. ಒಂದೊಂದ್ ಸಲ ವಯಸ್ನಲ್ಲಿ ತನಗಿಂತ ದೊಡ್ಡವರನ್ನೂ ಕರ್‍ಕೊಂಡ್ ಬರ್ತಿದ್ದ. ಆವತ್ತು ಇದನ್ನ ಯಾರೋ ಪೊಲೀಸ್ರು ಅವರ ತಾಯಿ ಅನಿತಮ್ಮನಿಗೆ ಹೇಳಿಬಿಟ್ರು. ನನಗೆ ಚೆನ್ನಾಗಿ ನೆನಪಿದೆ: ತಾಯಿ ಅನಿತಮ್ಮ ಈ ಬಗ್ಗೆ ಬೈದ್ರು ಅಂತ ಆವತ್ತು ನಿಖಿಲ್ ಎಂಥಾ ಗಲಾಟೆ ಮಾಡಿಬಿಟ್ಟ ಅಂದ್ರೆ: ಕಲರ್ ಟೀವಿ ಸೆಟ್ಟಿತ್ತಲ್ಲ; ಅದನ್ನ ಎತ್ತಿದ್ದೇ ಮಹಡಿಯಿಂದ ಕೆಳಕ್ಕೆಸೆದು ಬಿಟ್ಟ. ಮನೆ ತುಂಬ ಚೆಲ್ಲಾಡಿದ್ದ ಟೀವಿ ಚೂರುಗಳನ್ನೆಲ್ಲ ನಾವು ಪೊಲೀಸರೇ ನಿಂತು ಕ್ಲೀನ್ ಮಾಡಿ ಕೊಟ್ವೀ....!



ನಿಖಿಲ್ ಗೌಡ

ಮಾಜಿ ಪ್ರಧಾನಿ ದೇವೇಗೌಡರ ಕುಟುಂಬದ ರಕ್ಷಣೆಗೆಂದು ನೇಮಕಗೊಂಡಿದ್ದ ಒಬ್ಬ ಪೊಲೀಸ್ ಪೇದೆಯ ಮಾತಿದು. ಈ ಘಟನೆ ನಡೆದಾಗಿನ್ನೂ ನಿಖಿಲ್‌ಗೆ ಕೇವಲ ಹದಿನೇಳರ ಹರೆಯ. ಇದು ನಡೆದದ್ದು ಮುಖ್ಯಮಂತ್ರಿ ಕುಮಾರಸ್ವಾಮಿಯವರ ಜೇಪಿನಗರದ ಬಂಗಲೆಯಲ್ಲಿ. ಕುಮಾರಸ್ವಾಮಿ ಆಗಿನ್ನೂ ಜೆಡಿಎಸ್‌ನ ಕಾರ್ಯಾಧ್ಯಕ್ಷ. ಪಾರ್ಟಿ, ಮೀಟಿಂಗ್ ಅಂತ ಬೆಳಿಗ್ಗೆ ಎದ್ದು ಹೊರಟುಬಿಟ್ಟರೆ ವಾಪಸ್ಸಾಗುತ್ತಿದ್ದದ್ದು ರಾತ್ರಿ ಮೂರರ ನಂತರವೇ. ಸಂಜೆಯಾದರೆ ಸದಾಶಿವ ನಗರದ ಜಮೀರ್ ಗೆಸ್ಟ್‌ಹೌಸಿನಲ್ಲಿ ರಂಗೇರುತ್ತಿದ್ದ ಕುಮಾರಣ್ಣನಿಗೆ ತನ್ನ ಒಬ್ಬನೇ ಒಬ್ಬ ಮಗನ ಇತ್ಯೋಪರಿ ವಿಚಾರಿಸುವ ವ್ಯವಧಾನವಾದರೂ ಎಲ್ಲಿತ್ತು?

ಇನ್ನು ತಾಯಿ ಅನಿತಮ್ಮನಿಗೆ ಪೆಟ್ರೋಲ್ ಬಂಕಿನ ವ್ಯಾಪಾರ, ಸಿನಿಮಾಕ್ಕೆ ಹಾಕಿದ ದುಡ್ಡಿನ ಲೆಕ್ಕಾಚಾರ ಇತ್ಯಾದಿಗಳಿಗೇ ಸಮಯ ಸಾಲುತ್ತಿರಲಿಲ್ಲ. ಹೀಗಿರುವಾಗ ಮಗ ಉದ್ಧಾರವಾಗಬೇಕೆಂದರೆ ಎಲ್ಲಿಂದ?

ಇದು ಮುಖ್ಯಮಂತ್ರಿ ಕುಮಾರಸ್ವಾಮಿಯ ಏಕಮೇವಾದ್ವಿತೀಯ ಪುತ್ರ ನಿಖಿಲ್‌ನ ಸಂಕ್ಷಿಪ್ತ ಪರಿಚಯ ಮಾತ್ರ. ಪಿಯುಸಿ ಪರೀಕ್ಷೆಗೂ ಲಾಯಕ್ಕಾಗದ, ಕುಡಿದು ಚಿತ್ತಾಗಿ ನಡುರಾತ್ರಿ ಹೋಟೆಲೊಂದಕ್ಕೆ ನುಗ್ಗಿ ದಾಂಧಲೆ ನಡೆಸಿದ ನಿಖಿಲ್ ಬೇರೆಲ್ಲಾ ಮುಖ್ಯಮಂತ್ರಿ ಮಕ್ಕಳ ಪುಂಡು ದಾಖಲೆಯನ್ನು ತನ್ನ ಹದಿನೆಂಟನೇ ವಯಸ್ಸಿಗೇ ಬ್ರೇಕ್ ಮಾಡಿದ್ದಾನೆ!

ನಿಜ; ಕೆಂಗಲ್ ಹನುಮಂತಯ್ಯನವರ ಮೊಮ್ಮಗನೇ ರಾಬರಿ ಕೇಸಿನಲ್ಲಿ ಜೈಲು ಪಾಲಾಗಿದ್ದ. ಜಾಫರ್ ಷರೀಫರ ಮಗ ಕುಡಿಕುಡಿದೇ ಸತ್ತ. ದೇವರಾಜ ಅರಸರ ಮಗಳು ತನ್ನ ದಾಯಾದಿಯನ್ನೇ ಕೊಂದಳು. ಆದರೆ ದೇವೇಗೌಡರು ಹಾಗಲ್ಲ; ಅವರು ಮಣ್ಣಿನ ಮಗ. ರಾಗಿಮುದ್ದೆ ಸೊಪ್ಪಿನ ಸಾರು ಅವರ ಶಾಶ್ವತ ಟ್ರೇಡ್ ಮಾರ್ಕು ಮತ್ತು ಪಂಚೆ ಉಟ್ಟೇ ದೇಶಕಟ್ಟಲು ನಿಂತ ರೈತ ನಾಯಕರಾತ. ಇವತ್ತು ನಡುರಾತ್ರಿ ತನಕ ಕುಡಿದು ಬೆಳಗಿನ ಜಾವಕ್ಕೆ ಹೋಗಿ ಊಟ ಕೊಡಲಿಲ್ಲ ಎಂದು ಅವರ ಮೊಮ್ಮಗನ ಪಟಾಲಂ ಹೋಟೆಲೊಂದನ್ನು ಚಂದಿಯೆಬ್ಬಿಸಿದ್ದರಲ್ಲಿ ಅವರ ತಪ್ಪಾದರೂ ಏನಿದ್ದೀತು?

ಹಾಗೆಂದೇ ಪ್ರಶ್ನೆ ಹಾಕಿಕೊಂಡು ದೇವೇಗೌಡರ ಇಡೀ ಕುಟುಂಬದ ಮಣ್ಣಿನ ಋಣವನ್ನು ಕೆದಕುತ್ತಾ ಹೋದಂತೆಲ್ಲ ಕಟು ಸತ್ಯವೊಂದು ತೆರೆದುಕೊಳ್ಳುತ್ತದೆ. ಮೊದಲಿಗೆ ಗೌಡರ ಫ್ಯಾಮಿಲಿಯ ಸಾಂಸ್ಕೃತಿಕ ಪರಿಸರವನ್ನೇ ನೋಡಿ; ಅವರ ಕುಲಪುತ್ರ ಬಾಲಕೃಷ್ಣೇಗೌಡರ ಮಗನ ಹೆಸರು ಕುಣಾಲ್. ರೇವಣ್ಣನ ಇಬ್ಬರು ಮಕ್ಕಳ ಪೈಕಿ ಒಬ್ಬ ಪ್ರಜ್ವಲ್ ಮತ್ತೊಬ್ಬ ಸೂರಜ್. ಕುಮಾರಸ್ವಾಮಿಯ ಮಗನ ಹೆಸರು ನಿಖಿಲ್. ಮಗಳು ಶೈಲಜಾ ಚಂದ್ರಶೇಖರ್ ಮಗನ ಹೆಸರು ಅಮೋಘ್. ಇದ್ಯಾವುದು ರೈತಾಪಿ ಹೆಸರುಗಳಲ್ಲ, ಕನ್ನಡದ ಹೆಸರುಗಳೂ ಅಲ್ಲ, ಮಾರ್ವಾಡಿ ಹೆಸರುಗಳು! ತಮ್ಮ ಯಾರಾದರೂ ಮೊಮ್ಮಗನಿಗೆ ಏಕೆ ರೇವಣ್ಣ, ಭೈರಪ್ಪ, ದೊಡ್ಡೇಗೌಡ, ಬಸವೇಗೌಡ ಇತ್ಯಾದಿ ತಮ್ಮ ಪೂರ್ವಿಕರ ಹೆಸರಿಟ್ಟಿಲ್ಲ?


ಇದರರ್ಥ ದೇವೇಗೌಡರಿಗೆ ತಮ್ಮ ಒಕ್ಕಲು ಸಂಸ್ಕೃತಿಯ ಬಗ್ಗೆಯೇ ಅಸಹ್ಯವಿದೆ. ಅದು ಅವರ ಮಕ್ಕಳಿಗೂ ಅನುವಂಶಿಕವಾಗಿದೆ. ಅದಕ್ಕೇ ಮೊಮ್ಮಕ್ಕಳನ್ನೆಲ್ಲ ಸಾರಾಸಗಟಾಗಿ ಇಂಗ್ಲಿಷ್ ಕಾನ್ವೆಂಟಿಗೆ ಹಾಕಿದ್ದು ಮತ್ತು ಇಂಥ ಪರದೇಶಿ ಹೆಸರುಗಳನ್ನಿಟ್ಟದ್ದು!

ಗೌಡರ ಇಂಥ ಭೂಟಕದ ಮೂರ್ತರೂಪ ಅಂತಿದ್ದರೆ ಅದು ಕುಮಾರಸ್ವಾಮಿ. ವಿಜಯಾ ಕಾಲೇಜಿನಲ್ಲಿ ಪಿಯೂಸಿಯಲ್ಲಿ ಒಂದಲ್ಲ ಎರಡು ಬಾರಿ ಡುಮಿಕಿ ಹೊಡೆದು ಆನಂತರ ಹೇಗೋ ತಂದೆಯ ಪ್ರಭಾವದಿಂದ ಬಸವನಗುಡಿಯ ನ್ಯಾಷನಲ್ ಕಾಲೇಜ್ ಸೇರಿಕೊಂಡರೂ ಕೊನೆತನಕ ಡಿಗ್ರಿ ಮುಗಿಸುವುದು ಕುಮಾರಸ್ವಾಮಿಯ ಕೈಲಾಗಲಿಲ್ಲ. ಚಿಕ್ಕ ವಯಸ್ಸಿಗೇ ಕುಡಿತ ಜೊತೆಗೆ ಸಿಗರೇಟು ಚಟ. ಮಗ ಇನ್ನೇನು ಯಡವಟ್ಟು ಮಾಡಿಕೊಂಡಾನೋ ಎಂದು ಬೇಗನೇ ಮದುವೆ ಮಾಡಿದರಾದರೂ ಕುಮಾರ್ ದಾರಿಗೆ ಬರಲಿಲ್ಲ, ನಡುರಾತ್ರಿ ತನಕ ಜಮೀರ್ ಗೆಸ್ಟ್ ಹೌಸಿನಲ್ಲಿ ಇಸ್ಪೀಟು ಜೊತೆಗೆ ಕುಡಿತ. ಸಾಲದ್ದಕ್ಕೆ ಅಂಥದ್ದೇ ಅಭಿರುಚಿಯ ಗೆಳೆಯರ ಕೂಟ. ಇದನ್ನೆಲ್ಲ ನೋಡುತ್ತಲೇ ಬೆಳೆದವನು ಮಗ ನಿಖಿಲ್.



ಅದೇನು ಪ್ರಾರಬ್ಧವೋ ಗೊತ್ತಿಲ್ಲ; ನಿಖಿಲ್ ಎಂಬ ಹೆಸರೇ ಗೌಡರ ಫ್ಯಾಮಿಲಿಗೆ ದುಸ್ವಪ್ನವಾಗಿ ಕಾಡುತ್ತಲೇ ಇದೆ. ನಿಖಿಲ್‌ನ ಹೆಸರು ಮೊದಲ ಬಾರಿಗೆ ವಿವಾದವಾಗಿದ್ದು 1997 ರಲ್ಲಿ. ದೇವೇಗೌಡ ಆಗ ಪ್ರಧಾನಿ. ನಿರುದ್ಯೋಗಿ ಸೊಸೆ ಅನಿತಮ್ಮನ ಹೆಸರಿಗೆ ಪೆಟ್ರೋಲ್ ಬಂಕ್ ಮಂಜೂರು ಮಾಡಿಸಿಕೊಂಡಿದ್ದು ದೇಶಾದ್ಯಂತ ಸುದ್ದಿಯಾದಾಗಲೇ ದೇವೇಗೌಡರಿಗೆ ನಿಖಿಲ್ ಹೆಸರಿನ ಮೊಮ್ಮಗನಿದ್ದಾನೆಂಬುದು ಲೋಕಕ್ಕೆ ಗೊತ್ತಾಗಿದ್ದು. ಮುಂದೆ ವಿಜಯಾ ಹೈಸ್ಕೂಲಿಗೆ ಸೇರಿದ ನಿಖಿಲ್ ಎಸ್ಸೆಲ್ಸಿ ಮುಗಿಸುವ ಹೊತ್ತಿಗೇ ದಾರಿ ತಪ್ಪಿದ್ದ. ಅಪ್ಪನ ರಾಜಕೀಯ ಮತ್ತು ಅಮ್ಮನ ಶಾಪಿಂಗ್ ಖಯಾಲಿಯಲ್ಲಿ ನಿಖಿಲ್‌ನ ಇತ್ಯೋಪರಿಯನ್ನು ಯಾರೂ ಗಮನಿಸಲಿಲ್ಲ, ಐಷಾರಾಮವಿತ್ತು, ಶೋಕಿಗೆ ದುಡ್ಡಿತ್ತು, ಅದಕ್ಕೆ ತಕ್ಕಂತೆ ಶ್ರೀಮಂತ ಗೆಳೆಯರ ಪಟಾಲಮ್ಮಿತ್ತು.

ಎಸ್ಸೆಲ್ಸಿ ಹೊತ್ತಿಗೇ ಮಗ ದಾರಿ ತಪ್ಪಿದ್ದು ಕುಮಾರಸ್ವಾಮಿಗೆ ಗೊತ್ತಾಗಿತ್ತು. ಆ ವಯಸ್ಸಿಗೇ ಬಿಯರ್ ಕುಡಿಯುವ-ಸಿಗರೇಟು ಸೇದುವ ಚಟ ನಿಖಿಲ್‌ಗೆ ಅಂಟಿತ್ತು. ಯಾರೇ ಜವಾಬ್ದಾರಿಯುತ ತಂದೆ ಇಂಥಾ



ನಿಖಿಲ್‌ನ ಐಷಾರಾಮಿ ಕಾರು

ಸ್ಥಿತಿಯಲ್ಲಿ ಮಕ್ಕಳನ್ನು ಊಟಿಯ ರೆಸಿಡೆನ್ಷಿಯಲ್ ಸ್ಕೂಲುಗಳಿಗೋ ಅಥವಾ ಆದಿಚುಂಚನಗಿರಿಯ ಕುಂಬಳಗೋಡಿನ ರೆಸಿಡೆನ್ಷಿಯಲ್ ಶಾಲೆಗೋ ಸೇರಿಸುತ್ತಾರೆ. ಕನಿಷ್ಠ ತಾನೇ ಓದಿದ ನ್ಯಾಷನಲ್ ಕಾಲೇಜಿಗಾದರೂ ಸೇರಿಸಬೇಕಿತ್ತು. ಆದರೆ ಕುಮಾರಸ್ವಾಮಿ ಮಗನನ್ನು ಮಾರ್ವಾಡಿಗಳ ಮಕ್ಕಳೇ ಇಟ್ಟಾಡುವ ವಿ.ವಿ.ಪುರಂನ ಮಹಾವೀರ್ ಜೈನ್ ಕಾಲೇಜಿಗೆ ಸೇರಿಸಿದರು.



ಅದೇ ಅವರು ಮಾಡಿದ ದೊಡ್ಡ ತಪ್ಪಾಗಿತ್ತು. ಜೈನ್ ಕಾಲೇಜು ಹೇಳಿಕೇಳಿ ಚಿಕ್ಕಪೇಟೆಯ ಮಾರ್ವಾಡಿಗಳ ಪುಂಡ ಮಕ್ಕಳ ಕಾಲೇಜು. ಅದರ ಧಣಿ ಚೆನ್‌ರಾಜ್ ಜೈನ್ ಹೇಳಿಕೇಳಿ ಪಕ್ಕಾ ಖದೀಮ ಮತ್ತು ನೆಲಗಳ್ಳ. ಕಾಲೇಜಿನ ಕಟ್ಟಡವೇನೋ ಹೈಟೆಕ್ಕಾಗಿದೆ. ಆದರೆ ತಜ್ಞ ಶಿಕ್ಷಕರಿಲ್ಲ. ಯಾವ ಶಿಕ್ಷಕರಿಗೂ ಚೆನ್‌ರಾಜ್ ನೆಟ್ಟಗೆ ಸಂಬಳ ಕೊಡುವುದಿಲ್ಲ. ಆತನ ಮಾರ್ವಾಡಿ ಬುದ್ಧಿ ಹೇಗಿದೆಯೆಂದರೆ ಅರ್ಧಕ್ಕರ್ಧ ರ್‍ಯಾಂಕ್ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ಮಿಕ್ಕರ್ಧ ಸೀಟುಗಳನ್ನು ಕುಬೇರರ ಮಕ್ಕಳಿಗೆ ವಿಪರೀತ ಡೊನೇಷನ್ನಿಗೆ ಮಾರಿಕೊಳ್ಳುತ್ತಾನೆ. ಪಾಠ ಮಾಡದೇ ಹೋದರೂ ಈ ಜಾಣ ವಿದ್ಯಾರ್ಥಿಗಳು ಪಾಸಾಗುತ್ತಾರೆ.

ಜೈನ್ ಕಾಲೇಜಿನ ಮರ್ಮ ಕುಮಾರಸ್ವಾಮಿಗೆಲ್ಲಿ ಗೊತ್ತಾಗಬೇಕು?

ಪಿಯೂಸಿ ಕಾಮರ್ಸಿಗೆ ಸೇರಿದ ನಿಖಿಲ್ ಮೊದಲ ವರ್ಷ ಅಷ್ಟಿಷ್ಟು ನೆಟ್ಟಗಿದ್ದ. ಎರಡನೇ ವರ್ಷಕ್ಕೆ ಪೂರ್ತಿ ಕುಲಗೆಟ್ಟ. ಮಾಮೂಲಿ ಬೈಕ್ ಬದಲು ಕ್ರಮೇಣ 25 ಲಕ್ಷದ ಹಾರ್ಲೆ ಡೇವಿಡ್‌ಸನ್ ಬೈಕಿನಲ್ಲಿ ಕಾಲೇಜಿಗೆ ಬರುತ್ತಿದ್ದ. ಈ ಹೊತ್ತಿಗಾಗಲೇ ಜೆಡಿಎಸ್-ಕಾಂಗ್ರೆ ಸರಕಾರ ಅಧಿಕಾರದಲ್ಲಿದ್ದು ಪೊಲೀಸ್ ಠಾಣೆಗಳಲ್ಲಿ ನಿಖಿ ಮಾತು ನಡೆಯುತ್ತಿತ್ತು. ಅಪ್ಪ ಮುಖ್ಯಮಂತ್ರಿಯಾ ಮೇಲಂತೂ ಆತನ ಖದರ್ರೇ ಬದಲಾಯಿತು. ಕ್ಲಾ ಚಕ್ಕರ್ ಹಾಕಿ ಜೈನ್ ಕಾಲೇ ಹಿಂಭಾಗದ ಗಣೇಶ್ ದರ್ಶ ಎಂಬ ಕ್ಯಾಂಟೀನ್ ಸಂಧಿಯ ರೇಟು ಅಂಗಡಿಯ ಪಕ್ಕ ಅ ಹಾಕುತ್ತಿದ್ದ. ಆತನ ಕ್ಲಾಸ್‌ಮೇ ನರಸಿಂಹ ಎಂಬಾತನೇ ನಿಖಿಲ ಕಾರಿನ ಹುಚ್ಚು ಹಿಡಿಸಿದ್ದು. ಈ ಅವಿನ್ಯೂ ರಸ್ತೆಯ ರಜತ ಜ್ಯುವೆಲ ಮಾಲೀಕ ರವಿ ಎಂಬ ಕೋಮ ಶೆಟ್ಟಿಯ ಮಗ.

ಅದಕ್ಕೆ ತಕ್ಕಂಥ ನಕಲಿ ಚ ಪೇಟೆಯ ಎಲೆಕ್ಟ್ರಿಕಲ್ಸ್ ದಂಧೆ ಉಗಮ್ ರಾಜ್‌ನ ಮಗ ನಿರ್ಮ ಮತ್ತು ಕಾಂತಿಲಾಲ್ ಜ್ಯುವೆಲ್ಲರ್ಸ್ ಮಾಲೀಕ ಹುಕ ಚಂದ್‌ನ ಮಗ ವಿಮಲ್ ಎಂಬಬ್ಬರು ಹುಡುಗ ನಿಖಿಲ್‌ನ ಜೊತೆಬಿದ್ದರು. ಇವರಿಬ್ಬರೂ ಜೈನ್ ಕಾಲೇ ಉತ್ಪನ್ನಗಳೆ. ಜೊತೆಗೆ ಬ್ರಿಗೇಡ್ ರಸ್ತೆಯ ಸ್ಪೀನ್ ಎಂ

ರಾ. ಸೋಮನಾಥ್

ಡಿಸ್ಕೋ ಅಡ್ಡೆಯಲ್ಲಿ ಕಾಲೇಜು ಹುಡುಗರಿಗೆಂ ನಡೆಯುವ Day Discoಗೆ ಇವರಿಬ್ಬರೂ ಸಂಘಟಕ ಪ್ರಾರಂಭ ದಲ್ಲಿ ಜೈನ್ ಕಾಲೇಜ್ ಪಕ್ಕದ ಕೆ. ಅಪಾರ್ಟ್ ಮೆಂಟ್ ನಲ್ಲಿರುವ ಹಾಸ್ಟೆಲ್‌ನ ಬೆಂಗ ಹುಡುಗಿ ಯೊಬ್ಬಳ ಜೊತೆ ನಿಖಿಲ್ ಡಿಸ್ಕೋ ಹೋಗುತ್ತಿದ್ದ. ಮೊದಲು ಅಪ್ಪನ ಲ್ಯಾಂಡ್ ಕ್ರೂಜ ಕಾರಿನಲ್ಲಿ ಬರುತ್ತಿದ್ದವನು ಕ್ರಮೇಣ ಮೂವ ಲಕ್ಷದ BMW ಕಾರಿನಲ್ಲಿ ಬರಲಾರಂಭಿಸಿ ಕೆಲವೊಮ್ಮೆ ನಲವತ್ತೈದು ಲಕ್ಷದ Lexus II 470 ಕಾರು, ಮತ್ತೊಮ್ಮೆ ಒಂದು ಕಾಲೂ ಕೋ 911 ಕೆರಿರಾ ಕಾರು; ಹೀಗೆ ದಿನಕ್ಕೊಂದು ಕಾ ನಿಖಿಲ್ ಕಾಲೇಜಿಗೆ ಬರುತ್ತಿದ್ದ.

ದಿನಕ್ಕೊಂದು ಐಷಾರಾಮಿ ಕಾರು ಕೊ ಕೊಟ್ಟರೆ ಮಗ ಏನಾಗುತ್ತಾನೆ ಎಂಬ ಪ್ರ ಮುಖ್ಯಮಂತ್ರಿ ಗಿರಿಬೇಕಿತ್ತು. ಕನಿಷ್ಠ ಹಾಜರಾತಿ ಕೊರತೆಯಿಂದ ತನ್ನ ಮಗನಿಗೆ ಪರೀಕ್ಷೆ ಕೈತಪ್ಪಿದೆಯೆ ಸುದ್ದಿ ಪತ್ರಿಕೆಗಳಲ್ಲಿ ಬಂದ ಮೇಲಾದರೂ ಕುಮ ಸ್ವಾಮಿಗೆ ಜ್ಞಾನೋದಯ ವಾಗಬೇಕಿತ್ತು. ಬದಲಾ ಮತ್ತೆ ಒಂದೂಮುಕ್ಕಾಲು ಕೋಟಿಯ ಹಮ್ಮರ್ ಕಾರ ದುಬೈನಿಂದ ತರಿಸಿಕೊಟ್ಟರು. ಅ ಎಡಗೈ ಡ್ರೈವಿಂಗ್ ಎಂದು ವಾಪ ಮಾಡಿ ಮತ್ತೆ ಅಂಥದ್ದೇ ಬಲ ಡ್ರೈವಿಂಗ್ ಹಮ್ಮರ್ ತರಿಸಿಕೊಳ್ಳು ಮುಖ್ಯಮಂತ್ರಿಯ ಆಸಕ್ತಿಯಿತ್ತು.

ಖರ್ಚಿಗೆ ದುಡ್ಡು ಓಡಾಡಲು ಕಾರು, ಡಿಸ್ಕೋಥೆಕ್ ಜೊತೆಗೆ ಗರ್ಲ್‌ಫ್ರೆಂಡ್ಸ್, ತನ್ನ ಪಿಯೂಸಿ ಪರೀಕ್ಷೆಯನ್ನು ಮರತೇಬಿಟ್ಟ ನಿಖಿಲ್ ಬನಶಂಕರಿಯ ಶ್ರೀಧರ್, ಚಾಮರಾಜಪೇಟೆಯ ಮಂಜ, ಚುಮ್ಮಿ, ಎಸ್‌ಎಲ್‌ವಿ ಹೋಟೆಲ್ ಪಕ್ಕದ ನರಸಿಂ ಮಾರ್ವಾಡಿ ಮಕ್ಕಳಾದ ನಿರ್ಮಲ್, ವಿಮಲ್ ಮುಂತಾ ಶ್ರೀಮಂತ ಪಡ್ಡೆಗಳ ಜೊತೆ ಲ್ಯಾವೆಲ್ಲಿ ರಸ್ತೆಯ 'ಕಾ ಡೇ'ಯಲ್ಲಿ ಅಡ್ಡೆ ಹಾಕತೊಡಗಿದ. ಅಲ್ಲಿ ಆತನ ಜೊತೆಯಾದವನು ಜಾಫರ್ ಷರೀಫ್ ಮೊಮ ರೆಹಮಾನ್ ಷರೀಫ್. ಮತ್ತು ಆತನ ಗೆಳೆ ಸೈಯದ್ ಎಹಸಾನ್ ಎಂಬಬ್ಬರು ಬ್ರಿಗೇಡ್ ರೋ ಪಡ್ಡೆಗಳು. ಈ ಪೈಕಿ ಸೈಯದ್ ಎಹಸಾನ್ ಮಾ ಮಂತ್ರಿ ನಫೀಸಾ ಫಜಲ್ ಸಂಬಂಧಿ. ರಾತ್ರಿಯಾ ಸ್ಪಿನ್‌ನ ಡಿಸ್ಕೋ ಅಥವಾ ಲೇ ಮೆರಿಡಿಯನ್ ಇನ್‌ಸೋಮ್ನಿಯಾ. ಈ ಮಧ್ಯೆ ಬೈಕ್ ಓಡಿಸು

ಊಟಕ್ಕಾಗಿ ಅಂಡಲೆಯುವ ಅಪ್ಪ-ಮಗ

ಒಬ್ಬರು ಮಾಜಿ ಪ್ರಧಾನಿಯ ಮಗ, ಹಾಲಿ ಮುಖ್ಯಮಂತ್ರಿ, ಇನ್ನೊಬ್ಬ ಇವರಿಬ್ಬರ ವಂಶೋದ್ಧಾರಕ. ಕೋಟ್ಯಂತರ ಹಡಬೆ ದುಡ್ಡು, ಅಧಿಕಾರ ಎಲ್ಲಾ ಇದೆ. ಆದರೇನು ಮಾಡುವುದು, ನಡುರಾತ್ರಿಯಲ್ಲಿ ಊಟಕ್ಕಾಗಿ ಕಂಡವರ ಮನೆ ಬಾಗಿಲಿಗೆ ಹೋಗುವ ಚಾಳಿ ಇವರಿಬ್ಬರಿಗೂ.

ಒಂದೆಡೆ ಕುಮಾರಸ್ವಾಮಿ ಯಾವ್ಯಾವುದೋ ಹಳ್ಳಿಗಳಿಗೇ ಹೋಗಿ ಮಧ್ಯರಾತ್ರಿ ಊಟ ಕೇಳಿ ತಿಂದು ಅಲ್ಲೇ ನಿದ್ರೆ ಮಾಡಿ ಬರುತ್ತಿದ್ದಾರೆ.

ಮತ್ತೊಂದೆಡೆ ಬೆಂಗಳೂರಿನಲ್ಲೇ ದಿವಿನಾದ ಐಷಾರಾಮಿ ಬಂಗಲೆಗಳಿದ್ದರೂ ಇದೇ ಕುಮಾರಸ್ವಾಮಿ ಮಗ ಬೀದಿ ಬೀದಿ ಸುತ್ತುತ್ತಾ ಮಧ್ಯರಾತ್ರಿ ಕಳೆದ ನಂತರ ಯಾವುದೋ ಹೋಟೆಲ್ ಬಾಗಿಲು ಬಡಿದು 'ಅನ್ನ ಹಾಕಿ' ಎನ್ನುತ್ತಾನೆ.



ಯಥಾ ರಾಜಾ, ತಥಾ ಪುತ್ರ!

ಭ್ರಷ್ಟ ಪರಿವಾರದ ದುಷ್ಟ ಸಂತಾನ!

ಅಂದು 1995 ರಲ್ಲಿ, ಬಾಬಾಸಾಹೇಬ್ ಅಂಬೇಡ್ಕರ್ ಪುತ್ಥಳಿಗೆ ಪುಷ್ಪಮಾಲೆ ಹಾಕುವ ವಿಚಾರದಲ್ಲಿ ಉಂಟಾದ ಕಾರಣದಿಂದಾಗಿ ಲಮಾಣಿ ಮಹಿಳೆ ಲಲಿತಾನಾಯಕ್ ರಿಂದ ಮಂತ್ರಿ ಪದವಿಗೆ ರಾಜೀನಾಮೆ ಕೊಡಿಸಿ ಆಕೆಯ ರಾಜಕೀಯ ಬದುಕನ್ನೇ ಛಿದ್ರಗೊಳಿಸಿದ್ದರು ಅಂದಿನ ಮುಖ್ಯಮಂತ್ರಿ ಎಚ್.ಡಿ. ದೇವೇಗೌಡರು!

ಇವತ್ತು 2006 ರಲ್ಲಿ, ಬೆಳಗಿನ ಜಾವದ ಅಪರ ವೇಳೆಯಲ್ಲಿ ಎಂಪೈರ್ ಹೋಟೆಲ್ಲಿನ ಮೇಲೆ ಅನವಶ್ಯಕ ದಾಳಿ ನಡೆಸಿ ಗೂಂಡಾಗಿರಿ ಪ್ರದರ್ಶಿಸಿದ ತಮ್ಮ ಮೊಮ್ಮಗ ನಿಖಿಲ್ ಗೌಡನ ಮಾನರಕ್ಷಣೆಗೆ ತುರ್ತು ಪತ್ರಿಕಾಗೋಷ್ಠಿ ನಡೆಸುತ್ತಾರೆ ಮಾಜಿ ಪ್ರಧಾನಿ ದೇವೇಗೌಡರು!!

ಗೌಡರ ವಾದಸರಣಿಯಲ್ಲಿ ನಿಖಿಲ್‌ನ ತಂದೆ ಹಾಗು ತಮ್ಮ ಸುಪುತ್ರ ಕುಮಾರಸ್ವಾಮಿ ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ ಪದವಿಗೆ ರಾಜೀನಾಮೆ ಕೊಡಬೇಕೆಂಬ ಪ್ರಾಸಂಗಿಕ ಉಲ್ಲೇಖವೂ ಇಲ್ಲ... ಅದರ ಬದಲು "ಮಹಾತ್ಮಾ ಗಾಂಧೀಜಿಯ ಮೊಮ್ಮಕ್ಕಳು ಸಹ ಇಂತಹದ್ದೇ ಅವಾಂತರ ತಂದುಕೊಂಡಿದ್ದರೆಂದು ಎಲ್ಲೋ ಪೇಪರಿನಲ್ಲಿ ಓದಿದ್ದು ನೆನಪಿಗೆ ಬರ್‍ತಿದೆ..." ಎಂದು ಹಲುಬುತ್ತಾರೆ ಈ ಜೆಡಿಎಸ್ ಪಿತಾಶ್ರೀಯವರು!!

ನಿಖಿಲ್ ಮತ್ತು ಆತನ ಸ್ನೇಹಿತರು ಕುಡಿದ ಮತ್ತಿನಲ್ಲಿ ಮಹಾತ್ಮಾ ಗಾಂಧಿ ರಸ್ತೆ ಪಕ್ಕದ ಹೋಟೆಲ್ಲಿನಲ್ಲಿ ನಡೆಸಿದ ದೌರ್ಜನ್ಯದ ಸಮರ್ಥನೆಗೆ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಮೊಮ್ಮಕ್ಕಳ ವೃತ್ತಾಂತವನ್ನು ಬಳಸಿಕೊಳ್ಳುವ ಮಟ್ಟಕ್ಕೆ ಇಳಿದುಬಿಟ್ಟಿದ್ದಾರೆ ನೋಡಿ, ಪಿತಾಮಹ ದೇವೇಗೌಡ್ರು!?


ತಮ್ಮ ಸಾರ್ವಜನಿಕ ಬದುಕಿನುದ್ದಕ್ಕೂ ತಮ್ಮ ಕುಟುಂಬದ ಸಂಬಂಧಿಕರಲ್ಲದ ಅನ್ಯ ರಾಜಕೀಯ ಮುಖಂಡರುಗಳು ಹಾಗು ಅಧಿಕಾರಿಗಳ ವಿರುದ್ಧ ನ್ಯಾಯಾಂಗ ತನಿಖಾ ವರದಿಗಳು ಮತ್ತು ವಿಧಾನಮಂಡಲ ಸಮಿತಿಗಳ ಶಿಫಾರಸ್ಸುಗಳನ್ನು ಝಳಪಿಸುತ್ತ ತಪ್ಪಿತಸ್ಥರಿಗೆ ಉಗ್ರ ಶಿಕ್ಷೆಯಾಗಬೇಕೆಂದು ಆಗ್ರಹಿಸುತ್ತಲೇ ಬಂದಿದ್ದ ದೇವೇಗೌಡರೀಗ ತಮ್ಮ ಬದುಕಿನ ಸಂಧ್ಯಾಕಾಲದಲ್ಲಿ ಎಂತಹ ದೈನೇಸಿ ಸನ್ನಿವೇಶ ಸೃಷ್ಟಿಸಿಕೊಂಡಿದ್ದಾರೆ ಗಮನಿಸಿ....

ಕೇವಲ ಎರಡು ತಿಂಗಳ ಹಿಂದೆಯಷ್ಟೇ ತಮ್ಮ ಮನೆತನದ ಹೆಣ್ಣುಮಕ್ಕಳು ಮತ್ತು ಸೊಸೆಯಂದಿರು ವೈಟ್‌ಫೀಲ್ಡ್‌ನಲ್ಲಿ 36 ಕೋಟಿ ರೂ. ನ ದುಬಾರಿ ಆಸ್ತಿ ಖರೀದಿಸಿದ ಹಗರಣ ಸ್ಫೋಟಗೊಂಡಾಗಲೂ ಅಷ್ಟೇ: ಸ್ವಯಂ ದೇವೇಗೌಡರೇ ತಮ್ಮ ಕುಟುಂಬದ ಖಾಸಗಿ ಜಮೀನು ಹಂಚಿಕೆಯ ಪತ್ರಗಳ ದಾಖಲೆಯನ್ನು ಕೈಯಲ್ಲಿ ಹಿಡಿದುಕೊಂಡು ಉದಯ ನ್ಯೂಸ್ ಚಾನೆಲ್ಲಿನ ಸಂದರ್ಶನದಲ್ಲಿ ವಕಾಲತ್ತು ನಡೆಸಿದ್ದರು....

ಅದೇ ಗೌಡ್ರು ಮೊನ್ನೆ ಸ್ಫೋಟಗೊಂಡ ತಮ್ಮ ಮುದ್ದಿನ ಮೊಮ್ಮಗನ ಪುಂಡಾಟಿಕೆಯ ಪ್ರಸಂಗದಲ್ಲಾದ ಮುಜುಗರದ ಬಗ್ಗೆ, ಸಾರ್ವಜನಿಕರ ತಲ್ಲಣದ ಬಗ್ಗೆ ಮುಗುಮ್ಮಾಗಿ ವಿಷಾದ ವ್ಯಕ್ತಪಡಿಸಿ ಪ್ರಾಯಶ್ಚಿತ್ತ ಮಾಡಿಕೊಳ್ಳುವ ಬದಲು ಮೊಮ್ಮಕ್ಕಳ ಫೋಟೋ ಹಿಡಿದುಕೊಂಡು ಬಂದು ಪತ್ರಕರ್ತರೆದುರು ಪ್ರತ್ಯಕ್ಷರಾಗುತ್ತಾರೆ; ಕುಮಾರಣ್ಣನ ಮಗ ನಿಖಿಲ್‌ನ ಬದಲು ರೇವಣ್ಣನ ಮಗ ಪ್ರಜ್ವಲ್‌ನ ಫೋಟೋ ಪ್ರಕಟಿಸಿದ ಮಾಧ್ಯಮಗಳ ಆತಾತುರ್ಯದ ವಿರುದ್ಧ ಕಿಡಿಕಾರುತ್ತಾರೆ!!

ಮುಖ್ಯಮಂತ್ರಿ ಸ್ಥಾನದಲ್ಲಿ ವಿಜೃಂಭಿಸುತ್ತಿರುವ ಅವರ ಪುತ್ರ ಕುಮಾರಣ್ಣನವರ ಪ್ರತಿಕ್ರಿಯೆಯೂ ಇದೇ ಗೌಡಿಕೆ ಶೈಲಿಗಿಂತ ಭಿನ್ನವಾಗೇನೂ ಇಲ್ಲ... ತಮ್ಮ 19 ವರ್ಷದ ಕಾಲೇಜು ಡ್ರಾಪ್‌ಔಟ್ ಪುತ್ರ ನಿಖಿಲ್‌ನ ಪೌಡಿತನಕ್ಕೆ ಬೆಂಗಳೂರು ಮಹಾನಗರಿಯ ಐಷಾರಾಮಿ ಸಂಸ್ಕೃತಿ ಮತ್ತು ಶ್ರೀಮಂತ ಜೀವನಶೈಲಿಯೇ ಕಾರಣವೆಂದು ಒಂದು ಹೊಸ ಫಿಲಾಸಫಿಯನ್ನೇ ಮಂಡಿಸುತ್ತಾರೆ!!

ಬರೀ ಇಷ್ಟೇ ಅಲ್ಲ, ಅದೇ ಪಾಳೇಗಾರಿಕೆ ಗತ್ತಿನಲ್ಲಿಯೇ ಮುಂದುವರಿದ ಕುಮಾರಸ್ವಾಮಿ ಅಡ್ಡದಾರಿ ಹಿಡಿದಿರುವ ತಮ್ಮ ಪುತ್ರನಿಗೆ ಸೂಕ್ತ ಶಿಕ್ಷೆ-ತರಬೇತಿಯ ಬಗ್ಗೆ ಯೋಚಿಸುವ ಬದಲು ಎಂಪೈರ್ ಹೋಟೆಲ್ ರಾದ್ಧಾಂತವನ್ನು ಬಯಲು ಮಾಡಿರಬಹುದಾದ ತಮ್ಮ ರಾಜಕೀಯ ಶತ್ರುಗಳು ಯಾರೆಂದು "ಒಂದೆರಡು ದಿನಗಳಲ್ಲಿಯೇ ಬಯಲಿಗೆ ಎಳೆಯುತ್ತೇನೆ" ಎಂದು ಹೂಂಕರಿಸುತ್ತ ಬೆದರಿಕೆ ಹಾಕುತ್ತಾರೆ!



ಮುಖ್ಯಮಂತ್ರಿಯಾದ ಹೊಸತರಲ್ಲಿ ಬಸವನಗುಡಿಯ ನ್ಯಾಷನಲ್ ಕಾಲೇಜು ತನ್ನ ಹಳೆಯ ವಿದ್ಯಾರ್ಥಿಯೆಂಬ ಹೆಮ್ಮೆಯಿಂದ ಕುಮಾರಸ್ವಾಮಿಯವರಿಗೆ ಸನ್ಮಾನವೇರ್ಪಡಿಸಿದಾಗ ಅವರೇ ತನ್ನ ವಿದ್ಯಾರ್ಥಿದೆಸೆಯ ಪ್ರಮಾದಗಳನ್ನು ನೆನೆಸಿಕೊಂಡು ತೊಳಲಾಡಿದ್ದರು: "ನಾನು ಇಂತಹ ಒಳ್ಳೆಯ ಕಾಲೇಜಿನಲ್ಲಿದ್ದರೂ ಸ್ವತಃ ಒಳ್ಳೆಯ ವಿದ್ಯಾರ್ಥಿ ಎನ್ನಿಸಿಕೊಳ್ಳಲಿಲ್ಲವಲ್ಲ ಎಂಬ ಕೊರಗು ನನ್ನನ್ನು ಕಾಡ್ತಾ ಇದೆ" ಎಂದು ಹೇಳಿಕೊಂಡು ಮೆಚ್ಚುಗೆಯ ಚಪ್ಪಾಳೆ ಗಿಟ್ಟಿಸಿದ್ದರು......

ಆದರೆ ವಿಪರ್ಯಾಸ ಎಂತಹದ್ದು ನೋಡಿ: ಇಂದು ಕಾಲೇಜು ಡ್ರಾಪ್‌ಔಟ್ ಒಳ್ಳೆಯ ವಿದ್ಯಾರ್ಥಿಯಾಗಲಿಲ್ಲವಲ್ಲ ಎಂಬ ವ್ಯಥೆ, ಮಾನಸಿಕ ಕೊರಗು ಅಥವಾ ಪ್ರಾಯಶ್ಚಿತ್ತ ಅಧಿಕಾರ ಗದ್ದುಗೆಯ ರಾಜವೈಭವದಲ್ಲಿರುವ ಕುಮಾರಣ್ಣನಿಗೆ ಕಿಂಚಿತ್ತೂ ಬಾಧಿಸುತ್ತಿಲ್ಲ....

ದಾರಿತಪ್ಪಿದ ಮಗನಿಗೆ ತಾನು ಒಳ್ಳೆಯ ತಂದೆಯಾಗಬೇಕೆಂಬ ಅನಿವಾರ್ಯತೆಯೂ ಕುಮಾರಣ್ಣನಿಗೆ ಗೋಚರಿಸುತ್ತಿರುವಂತೆ ಕಾಣುತ್ತಿಲ್ಲ.... ಒಂದು ವೇಳೆ ಅಂತಹ ಅನಿಸಿಕೆಯೇನಾದರೂ ಇದ್ದಲ್ಲಿ ಕುಮಾರಣ್ಣ ತಮ್ಮ ಎಡವಟ್ಟು ಮಗನಿಗೆ ಲ್ಯಾನ್ಸರ್, ನಿಸ್ಸಾನ್ ಸ್ಪೋರ್ಟ್ಸ್, ಲೆಕ್ಸಸ್, ಮರ್ಸಿಡೆಸ್ ಬೆಂಜ್ (BMW 7) ಹಾಗು ಹಮ್ಮರ್ ಗಳಂತಹ ಕೋಟ್ಯಂತರ ರೂ. ಬೆಲೆಬಾಳುವ ದುಬಾರಿ ಕಾರುಗಳ ಸವಲತ್ತು ನೀಡಿ ಓಲೈಸುವುದು ಸಾಧ್ಯವೇ ಇರಲಿಲ್ಲ!!...

ಕುಮಾರಸ್ವಾಮಿಯವರು ಪ್ರತಿಪಾದಿಸುವ 'ಐಷಾರಾಮಿ ಶ್ರೀಮಂತ ಜೀವನ ಶೈಲಿ' ಎಂಬ ಫಿಲಾಸಫಿಯ ಅನುಷ್ಠಾನವಾದರೂ ಶುರುವಾಗಬೇಕಿದ್ದು ಮಣ್ಣಿನ ಮಗನ ವಂಶಾವಳಿಗೆ ಸೇರಿದ ಅವರ ಸ್ವಂತ ಕುಟುಂಬದಲ್ಲೇ ತಾನೇ?

ಅಲ್ಲಿ ಪದ್ಮನಾಭನಗರದಿಂದ ಹಿಡಿದು ಜೆಪಿನಗರದವರೆಗೂ ಹಬ್ಬಿರುವ ದೇವೇಗೌಡರ ರಾಜವಂಶದ ಹಿರಿಯ ತಲೆಗಳ ಚಟುವಟಿಕೆಗಳಾದ್ರೂ ಎಂತಹವು: 2004 ರಿಂದ ಸಮ್ಮಿಶ್ರ ಸರ್ಕಾರಗಳ ಮೂಲಕ ತಮ್ಮ ಅಧಿಪತ್ಯ ಆರಂಭಗೊಳ್ಳುತ್ತಿದ್ದಂತೆಯೇ ಶುರುವಾದ ಕುಮಾರಣ್ಣ, ಬಾಲಣ್ಣ, ರಮೇಶಣ್ಣ, ರೇವಣ್ಣ... ಇತ್ಯಾದಿ ಅವಸರದ ಆಸ್ತಿಗಳಿಕೆ, ಯಥೇಚ್ಛವಾದ ರಿಯಲ್ ಎಸ್ಟೇಟ್ ಭೂಮಿ ಖರೀದಿ ವ್ಯಾಪಾರ, ಭಾರೀ ಸಡಗರದ ಐರನ್ ಓರ್ ವಹಿವಾಟು, ಹೊಸ ಹೊಸ ಮೀಡಿಯಾ, ಟಿವಿ ಚಾನೆಲ್ ಡೆವಲಪ್‌ಮೆಂಟ್ ಕಂಪನಿಗಳ ಸ್ಥಾಪನೆ.... ಮುಂತಾದ ತುರ್ತು ಐಶ್ವರ್ಯ ಸಂಪಾದನೆಯ ಸಂಭ್ರಮದಲ್ಲಿದ್ದ ಗೌಡ ಕುಟುಂಬದ ಕಿರಿಯ ತಲೆಮಾರಿನ ಮಕ್ಕಳಿಗೆ ಎಂತಹ 'ನೈತಿಕ' ಸಂದೇಶ ನೀಡಿರಲು ಸಾಧ್ಯ, ಹೇಳಿ?


ಲಲಿತಾ ನಾಯಕ್

ಕುಟುಂಬದ ಹಿರಿಯರ ಇಂತಹ ಅಧಿಕಾರದಾಹ ಮತ್ತು ಆಸ್ತಿ ಸಂಪಾದನೆಯ ಅರ್ಭಟ ಹಾಗು ಅಧಿಕಾರ ಸ್ಥಾನಗಳ ಅಬ್ಬರದ ನಡುವೆ ಕುಮಾರಣ್ಣನ ಪುತ್ರ ನಿಖಿಲ್‌ಗಾಗಲೀ ಬಾಲಣ್ಣನ ಮಗ ಕುಣಾಲ್‌ಗಾಗಲಿ ಎಂತಹ ಮೌಲ್ಯಪ್ರಜ್ಞೆ ಬೆಳೆದೀತು ಊಹಿಸಿ....

ಸಾರ್ವಜನಿಕ ಬದುಕಿನ ಎಲ್ಲ ಸಜ್ಜನಿಕೆ, ಶಿಷ್ಟಾಚಾರಗಳನ್ನು ಗಾಳಿಗೆ ತೂರುತ್ತ ಬಂದ ಇಡೀ ಕುಟುಂಬ ವರ್ಗದ ಮೌಲ್ಯಹನನದ ಫಲವಾಗಿಯೇ ಇಂದು ದೇವೇಗೌಡರ ಪರಿವಾರದಲ್ಲಿ ನಿಖಿಲ್ ಎಂಬ ಜನಪೀಡಕ ಯುವಕ ಉದ್ಭವಿಸಿರುವುದು!

ನಿಖಿಲ್ ಪ್ರಸಂಗವನ್ನು ರಾಜಕೀಕರಣ ಮಾಡಬಾರದೆಂದು ತಮ್ಮ ಎದುರಾಳಿಗಳನ್ನು ಆಗ್ರಹಿಸುವ ದೇವೇಗೌಡ್ರು ಒಂದೆಡೆಗಿದ್ದರೆ, ತಮ್ಮಷ್ಟಕ್ಕೆ ತಾವೇ 'ರಾಜಕೀಕರಣ ಮಾಡೋದಿಲ್ಲ' ಎಂದು ಹೇಳುತ್ತ ತಮ್ಮ ಜಂಟಲ್‌ಮನ್ ಗಿರಿ ಪ್ರದರ್ಶಿಸುವ ಕಾಂಗ್ರೆಸ್ ತಿಳಿಗೇಡಿ ನಾಯಕರುಗಳು ಇನ್ನೊಂದೆಡೆಗಿದ್ದಾರೆ....

ಇಂತಹ ತಿಳಿಗೇಡಿತನಕ್ಕೆ ಕರ್ನಾಟಕದ ಜನತಂತ್ರ ಪ್ರೇಮಿಗಳು ಹಣೆಹಣೆ ಬಡಿದುಕೊಳ್ಳಬೇಕಷ್ಟೇ.

ಫೈವ್‌ಸ್ಟಾರ್ ರೆಸಾರ್ಟ್ ರಾಜಕೀಯದ ಮೂಲಕವೇ ಮುಖ್ಯಮಂತ್ರಿಯಾಗುವ 'ಕ್ರಾಂತಿ' ಮಾಡಿದ ಡ್ಯಾಡಿ ಕುಮಾರಣ್ಣ, ಬೇನಾಮಿ ಆಸ್ತಿಗಳಿಕೆಯನ್ನೇ ಒಂದು ಕಾರ್ಪೋರೇಟ್ ಉದ್ಯಮದ ಮಟ್ಟಕ್ಕೇರಿಸಿದ ಮಮ್ಮಿ-ಆಂಟಿ-ಅಂಕಲ್‌ಗಳ ನಡುವೆ ಬೆಳೆದ ಹುಡುಗ ನಿಖಿಲ್ ಸಹಜವಾಗಿಯೇ ರಾಜಧಾನಿಯ ಐಷಾರಾಮಿ ಬದುಕಿನ ಗುಲಾಮನಾಗುತ್ತಾನೆ... ರಾದ್ಧಾಂತ ಮಾಡಿಕೊಂಡು ಬೌರಿಂಗ್ ಆಸ್ಪತ್ರೆಯಲ್ಲಿ ಚೆಕ್ ಅಪ್ ಮಾಡಿಸಿಕೊಳ್ಳುವಾಗ ಮೊದಲು 'ಅಖಿಲೇಶ್' ಎಂತಲೂ, ತದನಂತರ 'ನಿಖಿಲ್ ಕುಮಾರ್, ಜೆಪಿನಗರ' ಎಂದೂ ಬೇನಾಮಿ ಹೆಸರು ದಾಖಲಿಸುತ್ತಾನೆ.....

ಮುಖ್ಯಮಂತ್ರಿಯ ಮಗನ ಈ ಪಡಿಪಾಟಲು ಅವರ ಸರ್ಕಾರದ 'ಅನುಗ್ರಹ'ದಿಂದ ಬೈಸಿಕಲ್ ಪಡೆದುಕೊಳ್ಳುವ ಬಡವರ ಮಕ್ಕಳಿಗೆಲ್ಲ ಎಂತಹ ಅನುಕರಣೀಯ ಮಾದರಿಯಾಗಬಹುದಲ್ಲವೇ?!

–ರವೀಂದ್ರ ರೇಶ್ಮೆ

ಗಲಾಟೆ ಮಾಡಿಕೊಂಡ ತನ್ನಿಬ್ಬರು ಸ್ನೇಹಿತರನ್ನು ತರಾಟೆಗೆ ತೆಗೆದುಕೊಂಡ ಶಂಕರಿ ಇನ್ಸ್‌ಪೆಕ್ಟರ್‌ಗೆ ಧಮಕಿ ಹಾಕಿಯೇ ನಿಖಿಲ್ ಬಿಡಿಸಿದ್ದಾನೆ. ...ವೆಲ್ಲಿ ರೋಡ್ 'ಕಾಫಿ ಡೇ'ಯಿಂದ ಎರ್ರಾಬಿರ್ರಿ ಕಾರ್ ಓಡಿಸಿಕೊಂಡು ...ಂದು ಕೈಯೊಡ್ಡಿದ್ದ ಟ್ರಾಫಿಕ್ ಪೊಲೀಸ್ ಪೇದೆಗೆ ಬಯ್ದಿದ್ದಾನೆ. ...ಮುಂಬಯಿಯಿಂದ ಬರುತ್ತಿದ್ದ ತನ್ನ ಗರ್ಲ್‌ಫ್ರೆಂಡ್‌ಳನ್ನು ಕರೆತರಲು ...ರ್‌ಪೋರ್ಟಿನಲ್ಲಿ ತನ್ನ ಕಾರ್ ಬಿಟ್ಟಿಲ್ಲ ಎಂದು ಅಲ್ಲೂ ಧಾಂದಲೆ ...ಡೆಸಿದ್ದಾನೆ.

ಅದು ಮುಖ್ಯಮಂತ್ರಿ ಮಗನ ರಾತ್ರಿ ಹಾವಳಿಯ ಪರಮಾವಧಿ ...ಯಾಗಿತ್ತೇನೊ.. ಬುಧವಾರ ನಡುರಾತ್ರಿ ತನಕ ಯಾವುದೋ ಡಿಸ್ಕೋ ...ಥೆಕ್ಯಲ್ಲಿದ್ದ ನಿಖಿಲ್‌ಗೆ ಬೆಳಗಿನ ಜಾವ ಮೂರು ಮುಕ್ಕಾಲದ ...ಹೊತ್ತಿಗೆ ಹಸಿವಾಗಿದೆ. ತನ್ನ ಪೋರ್ಷ್ ಕಾರಿನಲ್ಲೇ ಚರ್ಚ್ ಸ್ಟ್ರೀಟ್‌ಗೆ ...ಬಂದಿದ್ದಾನೆ. ಇನ್ನಿಬ್ಬರು ಹುಡುಗರ ಜೊತೆ ಎಂಪೈರ್ ಹೋಟೆಲಿಗೆ ...ನುಗ್ಗಿ ಊಟ ಕೇಳಿದ್ದಾನೆ. ಬಂದಾಗ ಬೆಳಗಿನ ಜಾವ ನಾಲ್ಕೂಕಾಲು. ...ಊಟ ಎಲ್ಲಿದ್ದೀತು? ಅಷ್ಟಕ್ಕೇ ಬಿಯರ್ ಬಾಟಲ್ ಒಡೆದು ...ಧಾಂದಲೆಗಿಳಿದಿದ್ದಾನೆ. ಹೋಟೆಲ್ ಸಿಬ್ಬಂದಿ ಸೇರಿ ಸಮಾ ಬಾರಿಸಿ ...ಕಳಿಸಿದ್ದಾರೆ. ಇಷ್ಟಾಗಿದ್ದೇ ಮತ್ತೆ ಐದಾರು ಹುಡುಗರನ್ನು ಕರೆಸಿದ ...ನಿಖಿಲ್ ಗ್ಯಾಂಗ್ ಹೋಟೆಲಿನ ಮೇಲೆ ಎರಡನೇ ದಾಳಿ ನಡೆಸಿತು. ...ಹೋಟೆಲ್ ಗಾಜುಗಳೂ ಚಿಂದಿಯಾಗಿವೆ.


ಈಗ ದೇವೇಗೌಡರು ತಿಪ್ಪೆ ಸಾರಿಸುತ್ತಿದ್ದಾರೆ. ತನ್ನ ಮೊಮ್ಮಗ ...ರೀತಿ ದಾರಿ ತಪ್ಪಿದ್ದಕ್ಕಾಗಿ ಸಣ್ಣದೊಂದು ಪಶ್ಚಾತ್ತಾಪ ಕೂಡ ...ಅವರಲ್ಲಿಲ್ಲವೆಂದರೆ ಏನರ್ಥ?

ಅವರ ಮಗ ಕುಮಾರಸ್ವಾಮಿಯಂತೂ "ಅಮ್ಮ ಹಾಕಿದ ಊಟ ...ದೇ ಸುಮ್ಮನೆಯಾಗಿ ಮಲಗಿದ್ದ ಮಗನನ್ನು ಯಾರೋ ಬೇಕಂತಲೇ ...ಸಿದ್ದಾರೆ, ಕರೆದುಕೊಂಡು ಹೋಗಿ, ಅವನ ಕೈಯಲ್ಲಿ ಹೀಗೆ ...ಮಾಡಿಸಿದ್ದಾರೆ" ಎಂದು ಹೇಳಿದ್ದಾರೆ. ಮತ್ತು ತಮ್ಮ ಯಥಾಪ್ರಕಾರ ...ಶೈಲಿಯಲ್ಲಿ "ಇದೆಲ್ಲದರ ಹಿಂದೆ ಯಾರಿದ್ದಾರೆಂದು ನನಗೆ ಗೊತ್ತು, ... ಬಯಲಿಗೆ ಎಳೆಯುತ್ತೇನೆ" ಎಂದಿದ್ದಾರೆ.

ಸಂಗಸ ಪುಂಡತನಕ್ಕೆ ಅಪ್ಪನ ಭಂಡತನ ಸಾಥ್ ನೀಡುತ್ತಿದೆ!

ಕೇಸ್ ಮುಚ್ಚಿ ಹಾಕಿದ್ದು ಹೇಗೆ?

ಪ್ರಾರಂಭದಲ್ಲಿ ನಿಖಿಲ್ ವಿರುದ್ಧ ಇನ್ನಿಲ್ಲದಂತೆ ಟೀವಿಗೆ ಪೋಜು ಕೊಟ್ಟು ಕೂಗಾಡಿದ ಎಂಪೈರ್ ರೆಸ್ಟೋರೆಂಟಿನ ಮ್ಯಾನೇಜರ್ ಜುನೈದ್ ಎಂಬಾತ ಶುಕ್ರವಾರದ ಹೊತ್ತಿಗೆ ನಾಪತ್ತೆಯಾಗಿದ್ದ.


ಅಬ್ದುಲ್ ಅಜೀಜ್

ಆ ಹೊತ್ತಿಗೆಲ್ಲ ಹೋಟೆಲ್ ಮಾಲೀಕ ಅಬ್ದುಲ್ ಅಜೀಜ್‌ಗೆ ಸರ್ಕಾರಿ ಬೆದರಿಕೆ ಶುರುವಾಗಿತ್ತು. ಧಾಂದಲೆಯ ಮರುದಿನ "ನಮ್ಮ ಹೋಟೆಲಿನ ಸೀಸಿ ಟೀವಿಯಲ್ಲಿ ಮುಖ್ಯಮಂತ್ರಿ ಮಗನ ಫೋಟೋ ಇದೆ. ಆತ ಹೇಗೆಲ್ಲಾ ಗಲಾಟೆ ಮಾಡಿದ ಎಂಬುದಕ್ಕೆ ಅದರ ಸೀಡಿಯನ್ನೂ ಬಿಡುಗಡೆ ಮಾಡ್ತೀವಿ" ಎಂದು ಮ್ಯಾನೇಜರ್ ಜುನೈದ್ ಟೀವಿ ಕ್ಯಾಮರಾಗಳ ಮುಂದೆ ಕೂಗಾಡಿದ್ದು ಎಲ್ಲಾ ಟೀವಿಗಳಲ್ಲೂ ಬಂದಿತ್ತು. ಗುರುವಾರ ಬೆಳಗ್ಗೆ ಆತನೇ ಹೋಗಿ ದುಷ್ಕರ್ಮಿಗಳ ವಿರುದ್ಧ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ದೂರನ್ನೂ ದಾಖಲಿಸಿದ್ದ.

ಆದರೆ ವಾಸ್ತವವೇನೆಂದರೆ ಈತನಕ ಪೊಲೀಸರು ಹೇಳಿಕೊಂಡಂತೆ ನಿಖಿಲ್ ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟೇ ಇರಲಿಲ್ಲ. ಗಲಾಟೆಯಲ್ಲಿ ಪೆಟ್ಟು ಬಿದ್ದ ತಕ್ಷಣವೇ ನಿಖಿಲ್ ತನ್ನ ತಾಯಿಗೆ ಫೋನ್ ಮಾಡಿದ್ದಾನೆ. ಆಕೆ ಕಬಡ್ಡಿ ಬಾಬುಗೆ ಫೋನ್ ಮಾಡಿದ್ದಾರೆ. ಜೊತೆಗೆ ಮುಂಬಯಿಯಲ್ಲಿ ಜಮೀರ್ ಟ್ರಾವೆಲ್ಸ್‌ಗೆ ಮ್ಯಾನೇಜರ್ ಆಗಿದ್ದು ಸಧ್ಯ ಮುಖ್ಯಮಂತ್ರಿಯ ಎಲ್ಲಾ ಡೀಲುಗಳನ್ನೂ ಪೂರೈಸುವ ತಿಲಕ್ ಎಂಬಾತನಿಗೂ ಫೋನ್ ಮಾಡಿದ್ದಾರೆ. ಈ ತಿಲಕ್ ಇಂಟಲಿಜೆನ್ಸ್ ಡಿಐಜಿ ಕಿಶೋರ್ ಚಂದ್ರರಿಗೆ ... ಮುಟ್ಟಿಸಿದ್ದಾನೆ.

ಅಲ್ಲಿಯ ತನಕ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದದ್ದು ಕೇವಲ ಎಂಪೈರ್ ಹೋಟೆಲಿನ ಮ್ಯಾನೇಜರ್ ಕೊಟ್ಟ ದೂರು ಮಾತ್ರ. ಯಾವಾಗ ಮುಖ್ಯಮಂತ್ರಿ ಮಗನಿಗೆ ಗೂಸಾ ಬಿದ್ದದ್ದು ಗೊತ್ತಾಯಿತೋ ... ನಿಖಿಲ್ ಬರೆದಂತೆ ಪೊಲೀಸರೇ ...


ಏಕೆಂದರೆ ನಿಖಿಲ್‌ಗಾಗಲಿ ಆತನ ಪಂಟ ಸಹಚರರಿಗಾಗಲಿ ಈ ರೀತಿ ಕನ್ನಡದಲ್ಲಿ ಬರೆಯುವುದೇ ಗೊತ್ತಿಲ್ಲ. ಬಹುಶಃ ಪೊಲೀಸರೇ ದೂರು ಬರೆದು ನಿಖಿಲ್‌ನ ಸಹಿ ಪಡೆದಿದ್ದಾರೆ.

ಶುಕ್ರವಾರದ ಹೊತ್ತಿಗೆಲ್ಲಾ ಮುಖ್ಯಮಂತ್ರಿ ಮಗನ ಗೂಂಡಾಗಿರಿ ವಿರುದ್ಧ ಯುವ ಕಾಂಗ್ರೆಸ್ ಕಾರ್ಯಕರ್ತರು ಬೀದಿಗಿಳಿದಾಗಿತ್ತು. ಶಿವಾಜಿನಗರದ ಕಾಂಗ್ರೆಸ್ ನಾಯಕ ಓಬೇದುಲ್ಲಾ ಷರೀಫ್ ರ ಪ್ರತಿಭಟನೆಯ ನೇತೃತ್ವ ವಹಿಸಿದ್ದರೂ ಹೋಟೆಲ್ ಸಿಬ್ಬಂದಿ ಕೂಡ ಹೋಟೆಲ್ ಮುಚ್ಚಿ ಪ್ರತಿಭಟಿಸಿದ್ದರು. ಆದರೆ ಸಂಜೆಯ ಹೊತ್ತಿಗೆ ಕೇಸೇ ಉಲ್ಟಾ ಆಗಿತ್ತು. ಕಬ್ಬನ್‌ಪಾರ್ಕ್ ಪೊಲೀಸರು ಬಂದು "ನಿಮ್ಮ ವಿರುದ್ಧವೂ ನಿಖಿಲ್ ಕಂಪ್ಲೇಂಟ್ ಕೊಟ್ಟಿದ್ದಾನೆ" ಎಂದು ಹೋಟೆಲಿನವರಿಗೆ ಶಾಕ್ ಕೊಟ್ಟಿದ್ದರು.


ಬಹುಶಃ ಇದಿಷ್ಟೇ ಆಗಿದ್ದರೆ ಹೋಟೆಲ್‌ನ ಧಣಿ ಅಬ್ದುಲ್ ಅಜೀಜ್ ಹೆದರುತ್ತಿರಲಿಲ್ಲ. ಆ ಹೊತ್ತಿಗೆಲ್ಲಾ ಆತನಿಗೆ ಹಿರಿಯ ಪೊಲೀಸ್ ಅಧಿಕಾರಿಗಳಿಂದ ಉಪದೇಶದ ಕರೆಗಳು ಬರಲಾರಂಭಿಸಿದವು. ಎಂಪೈರ್ ಮಾಲೀಕ ಅಬ್ದುಲ್ ಅಜೀಜ್‌ನ ಭೀತಿಗೆ ಕಾರಣಗಳು ಒಂದೆರಡಲ್ಲ. ಚರ್ಚ್ ಸ್ಟ್ರೀಟ್‌ನಲ್ಲಿ ಎಂಪೈರ್ ಇಂಟರ್‌ನ್ಯಾಷನಲ್, ರಸೆಲ್ ಮಾರ್ಕೆಟ್ಟಿನಲ್ಲಿ ಎಂಪೈರ್ ರೆಸ್ಟೋರೆಂಟ್, ಅದೇ ಹೆಸರಲ್ಲಿ ಕಮ್ಮನಹಳ್ಳಿಯಲ್ಲೊಂದು ರೆಸ್ಟೋರೆಂಟ್, ಗರುಡಾ ಮಾಲ್, ಮಿಲ್ಲರ್ಸ್ ರಸ್ತೆ, ಇಂದಿರಾ ನಗರದ ಸಿಎಂಎಚ್ ರಸ್ತೆ ಮತ್ತು ಕಾಮರಾಜ್ ರಸ್ತೆಯಲ್ಲೂ ಅಜೀಜ್ ಎಂಪೈರ್ ಹೆಸರಿನಲ್ಲೇ ರೆಸ್ಟೋರೆಂಟ್‌ಗಳನ್ನು ನಡೆಸುತ್ತಾನೆ. ಮುಖ್ಯಮಂತ್ರಿಯನ್ನೇ ಎದುರು ಹಾಕಿಕೊಂಡು ಬೆಂಗಳೂರಿನಲ್ಲಿ ಅಷ್ಟು ಎಂಟು ರೆಸ್ಟೋರೆಂಟ್‌ಗಳನ್ನು ನಡೆಸಲಾಗುತ್ತಾ?

... ಮಗನ ವಿರುದ್ಧ ವಿವಾದ ಬೆಳೆಸುವುದುಂಟಾ? ... ಹೇಳಿದಂತೆ ಎಲವನ್ನೂ ಪೊಲೀಸರಿಗೆ ...





ಮೈಸೂರು : ನಲವತ್ತು ಉಗ್ರರಿಗಾಗಿ ತಲಾಶ್



ಎಂ.ಎಸ್. ಸತೀಶ್

ಸಾಂಸ್ಕೃತಿಕ ರಾಜಧಾನಿ, ಅರಮನೆಗಳ ನಗರ, ಪಿಂಚಣಿದಾರರ ಸ್ವರ್ಗ ಎಂದೆಲ್ಲಾ ಬಣ್ಣಿಸಲ್ಪಡುತ್ತಿದ್ದ ಶಾಂತಿನಗರಿ ಮೈಸೂರಿನಲ್ಲಿ ಉಗ್ರಗಾಮಿಗಳ ಗುಂಡಿನ ಸದ್ದು ಕೇಳಿದೆ. ನಗರದ ಜನತೆ ಬೆಚ್ಚಿ ಬಿದ್ದಿದ್ದಾರೆ. ನಮ್ಮೂರಲ್ಲೂ ಉಗ್ರರಿರಬಹುದು ಎಂಬ ಕಿಂಚಿತ್ ಶಂಕೆಯೂ ಇಲ್ಲದಿದ್ದ ಇಲ್ಲಿನ ಜನ, "ಇನ್ನು ಮೈಸೂರು ಹಾಳಾಯ್ತು ಬಿಡಿ" ಎಂದು ನಿಟ್ಟುಸಿರು ಬಿಡುತ್ತಿದ್ದಾರೆ. ಸಮಾಧಾನದ ವಿಷಯವೆಂದರೆ ವಿಧ್ವಂಸಕ ಕೃತ್ಯಗಳನ್ನು ನಡೆಸಲು ಸಜ್ಜಾಗಿದ್ದ ಉಗ್ರರನ್ನು ಪೊಲೀಸರು ಶಸ್ತ್ರಾಸ್ತ್ರಗಳ ಸಮೇತ ಬಂಧಿಸಿದ್ದಾರೆ. ಅಲ್ಲಿಗೆ ನಡೆಯಬೇಕಿದ್ದ ಭಾರೀ ದುರಂತಗಳು ತಪ್ಪಿತಲ್ಲ ಎಂದು ನೆಮ್ಮದಿಯ ನಿಟ್ಟುಸಿರಿಟ್ಟಿದ್ದಾರೆ.

ಆದರೆ ಈ ಮಾತನ್ನು ಇಡೀ ಕಾರ್ಯಾಚರಣೆಯನ್ನು ರೂಪಿಸಿ, ಉಗ್ರರ ಇರುವಿಕೆ ಬಗ್ಗೆ ಮೊದಲೇ ಮಾಹಿತಿ ನೀಡಿದ್ದ ಕೇಂದ್ರ ಬೇಹುಗಾರಿಕೆ ಸಂಸ್ಥೆ (ಇಂಟಲಿಜೆನ್ಸ್ ಬ್ಯೂರೋ) ಒಪ್ಪುವುದಿಲ್ಲ. ಅವರ ಪ್ರಕಾರ ಈಗ ಸಿಕ್ಕಿಬಿದ್ದಿರುವ ಉಗ್ರರಾದ ಮೊಹಮದ್ ಫಹಾದ್ ಆಲಿ ಮತ್ತು ಹುಸೇನ್ ಆಲಿ, ಉದ್ದೇಶಿಸಿದ್ದ ಭಾರಿ ಷಡ್ಯಂತ್ರದ ಕೊನೆ ಕೊಂಡಿ. ಉಗ್ರರು ಯಾವುದೇ ಕೃತ್ಯ ನಡೆಸುವ ಮುನ್ನ 'ಸ್ಕೌಟ್ಸ್' ಎಂಬ ಹೆಸರಿನಲ್ಲಿ ಒಂದು ಗುಂಪನ್ನು ಕಳಿಸಿ ಕಾರ್ಯಾಚರಣೆ ನಡೆಸಬೇಕಾದ ಜಾಗ, ಪರಿಸ್ಥಿತಿ, ಮತ್ತಿತರ ವಿವರಗಳನ್ನು ಪಡೆಯುತ್ತಾರೆ. ಆನಂತರ ಅದೇ ಜಾಗಕ್ಕೆ 'ಅಡ್ವಾನ್ಸ್ ಪಾರ್ಟಿ' ಎಂಬ ಮತ್ತೊಂದು ಗುಂಪು ಬರುತ್ತದೆ. ಉಗ್ರರಿಗೆ ಅಡಗುದಾಣ, ಲೋಕಲ್ ಸಪೋರ್ಟ್, 'ಟಾರ್ಗೆಟ್‌ಗಳು ಮತ್ತು ಪರಾರಿಯಾಗಲು ದಾರಿ ಸಿದ್ಧಪಡಿಸುವುದು 'ಅಡ್ವಾನ್ಸ್ ಪಾರ್ಟಿ'ಯ ಕೆಲಸ. ಈ ಎಲ್ಲ ತಯಾರಿ ಮುಗಿಸಿದ ಮೇಲೆ 'ಸ್ಟ್ರೈಕಿಂಗ್ ಮತ್ತು ಬಾಂಬ್ ಸ್ಕ್ವಾಡ್‌ಗಳು' ಹಾಜರ್. ಈ ಸ್ಕ್ವಾಡ್‌ಗಳು ಬಂದಿಳಿಯುವ ಸಮಯಕ್ಕೆ ಸ್ಕೌಟ್ಸ್ ಮತ್ತು ಅಡ್ವಾನ್ಸ್ ಪಾರ್ಟಿಯವರು ಜಾಗ ಖಾಲಿ ಮಾಡಿರುತ್ತಾರೆ.

ಈಗ ನಮಗೆ ಸಿಕ್ಕಿಬಿದ್ದಿರುವುದು ಅದೇ 'ಅಡ್ವಾನ್ಸ್ ಪಾರ್ಟಿಯ' ಉಗ್ರರು, ನೇರವಾಗಿ ಬುಡಮೇಲು ಕೃತ್ಯ ನಡೆಸುವ 'ಸ್ಟ್ರೈಕಿಂಗ್' ಫೋರ್ಸ್ ಎಲ್ಲಿದೆ ಎಂಬುದರ ಬಗ್ಗೆ ನಮಗೆ ಮಾಹಿತಿ ಇಲ್ಲ. 'ಈಗ ಹಾವಿನ ಬಾಲ ಕಂಡಿದ್ದೇವೆ ಆದರೆ ಬಾಯಿ ಇನ್ನೂ ಸಿಕ್ಕಿಲ್ಲ' ಎಂಬ ಹೇಳಿಕೆ ಕೇಂದ್ರ ಬೇಹುಗಾರಿಕೆ ಸಂಸ್ಥೆಯದು. ಈ ಸಂಸ್ಥೆ ಇದುವರೆಗೆ ಸಂಗ್ರಹಿಸಿರುವ ಮಾಹಿತಿ ಪ್ರಕಾರ, ಮೈಸೂರಿನಲ್ಲೇ ಇನ್ನೂ 40 ಉಗ್ರರು ಅಡಗಿರುವ ಸಂಭವವಿದೆಯಂತೆ. ಇವರ ಪತ್ತೆಯ ನಂತರವೇ ಉಳಿದ ವಿವರಗಳು, ಅವರ ಯೋಜನೆಗಳು ಬಹಿರಂಗವಾಗಬೇಕಿದೆ. ಹಾಗಾಗಿ ಶಂಕಿತ ವ್ಯಕ್ತಿಗಳು ಮತ್ತು ಮನೆಗಳ ಮೇಲೆ ಸೂಕ್ಷ್ಮವಾಗಿ ಕಣ್ಗಾವಲಿಡಲಾಗಿದೆ.



ಉಗ್ರರಿಂದ ವಶಪಡಿಸಿಕೊಳ್ಳಲಾದ ವಸ್ತುಗಳು

ಅಕ್ಟೋಬರ್ 27ರ ಮಧ್ಯರಾತ್ರಿ ನಡೆದ ಸಿನಿಮೀಯ ಕಾರ್ಯಾಚರಣೆಯಲ್ಲಿ ಬಂಧಿತರಾದ ಫಹಾದ್ ಅಲಿಯಾಸ್ ನೆಡುತನ್ನಿ ಅಲಿಯಾಸ್ ಮಹಮದ್ ಕೋಯ ಕರಾಚಿಯವನು. ಅವನ ಸಹಚರ ಮಹಮದ್ ಅಲಿ ಹುಸೇನ್ ಅಲಿಯಾಸ್ ಜಹಂಗೀರ್ ಅಲಿಯಾಸ್ ಅಫ್ಘಾನ್ ಅಲಿಯಾಸ್ ಆಸಿಫ್ ಖಾನ್ ಪಾಕಿಸ್ತಾನದ ಮುನ್ಸೆರಾದವನು. ಇವರಿಬ್ಬರು ನಿಷೇಧಿತ ಅಲ್‌ಖೈದ ಉಗ್ರಗಾಮಿ ಸಂಘಟನೆಯ ಅಂಗಸಂಸ್ಥೆಯಾದ 'ಅಲ್‌ಬದರ್' ಸಂಘಟನೆಯ ಸದಸ್ಯರು.

ಬಂಧಿತರ ಬಳಿ ಲ್ಯಾಪ್‌ಟಾಪ್, ಡೆಸ್ಕ್ ಟಾಪ್ ಕಂಪ್ಯೂಟರ್‌ಗಳು, ಒಂದು ಎಕೆ 47 ರೈಫಲ್, ಒಂದು ಪಿಸ್ತೂಲು, ಎರಡು ಸ್ಯಾಟಲೈಟ್ ಫೋನ್, ಬಾಂಬ್ ತಯಾರಿಸಲು ಬಳಸುವ ರಾಸಾಯನಿಕಗಳು, ಡಿಟೋನೇಟರ್ಸ್, ಫ್ಯೂಜ್‌ಗಳು ಮತ್ತು ಬಿನ್ ಲಾಡೆನ್ ಕುರಿತು ಪುಸ್ತಕಗಳು ಸಿಕ್ಕಿವೆ. ಬಂಧಿತರು ನೀಡಿರುವ ಮಾಹಿತಿ ಪ್ರಕಾರ, ಅವರು ಮೈಸೂರಿನ ಕೇಂದ್ರೀಯ ಭಾಷಾ ಸದನ, ಕೆಲವು ಐಟಿ ಕಂಪನಿಗಳು ಮತ್ತು ಬೆಂಗಳೂರಿನ ವಿಕಾಸ ಸೌಧ ಮತ್ತು ವಿಧಾನ ಸೌಧವನ್ನು ಉಡಾಯಿಸಲು ನೀಲ ನಕ್ಷೆ ಸಿದ್ಧಪಡಿಸಿದ್ದರಂತೆ. ಆದರೆ ಇವರಿಬ್ಬರಿಂದಲೇ ಇಂಥ ಭಾರಿ ಮಟ್ಟದ ವಿಧ್ವಂಸಕ ಕೃತ್ಯ ಸಾಧ್ಯವೇ?

ಕೇಂದ್ರ ಬೇಹುಗಾರಿಕೆ ಸಂಸ್ಥೆ ಶಂಕೆ ವ್ಯಕ್ತಪಡಿಸಿರುವಂತೆ, ಬಂಧಿತ ಉಗ್ರರಾದ ಫಹಾದ್ ಮತ್ತು ಆಲಿ ಹುಸೇನ್‌ರ ಹಿಂದೆ, ಒಂದು ವ್ಯವಸ್ಥಿತ ಜಾಲವೇ ಮೈಸೂರು ಮತ್ತು ಬೆಂಗಳೂರಿನಲ್ಲಿ ಬೀಡುಬಿಟ್ಟಿದೆ. ಅದಲ್ಲದೆ ಈ ಉಗ್ರರಿಗೆ ಸ್ಥಳೀಯರ ಒಂದು ಗುಂಪು ಲಾಜಿಸ್ಟಿಕ್ ಸಪೋರ್ಟರ್‌ಗಳಂತೆ ಕೆಲಸ ಮಾಡುತ್ತಾ, ಉಗ್ರರ ಅಗತ್ಯಗಳನ್ನು ಪೂರೈಸುತ್ತಿದೆ. ಇಲ್ಲವಾದಲ್ಲಿ ಕರಾಚಿಯಿಂದ ಬಂದ ಈ ಇಬ್ಬರು ಅಪರಿಚಿತ ಉಗ್ರರಿಗೆ ಉಳಿದುಕೊಳ್ಳಲು ಮನೆ, ವ್ಯಾಪಾರ ನಡ[...] ಅಂಗಡಿಯನ್ನು ಕೊಡಿಸಲು ಸಾಧ್ಯವೇ?

ಈ ವಿಷಯಗಳಲ್ಲಿ ಉಗ್ರರಿಗೆ ಇಬ್ಬರು ಸ್ಥಳೀ[...] ಮಾಡಿದ ಸಹಾಯ ಎಷ್ಟರಮಟ್ಟಿಗಿದೆ ನೋಡಿ. ಕ[...] ಮೂಲದ ಫಹಾದ್, ಮೈಸೂರಿನ ಲಷ್ಕರ್ ಮೊಹ[...] ಕೊಯಾ ಮತ್ತು ಜುಬೇದ ದಂಪತಿಗಳಿಗೆ ಫೆಬ್ರವರಿ[...] 1983ರಲ್ಲಿ ಜನಿಸಿದನೆಂದು ಮೈಸೂರು ನಗರ ಪಾ[...] ಬರ್ತ್ ಸರ್ಟಿಫಿಕೇಟ್ ನೀಡಿದೆ (ಕ್ರಮ.ಸಂ. 5/2[...] 1124). ಈ ದಾಖಲೆಯನ್ನು ಜುಲೈ 26 ರ[...] ನೀಡಲಾಗಿದೆ. ಇಷ್ಟೇ ಅಲ್ಲಾ ಮತ್ತೊಬ್ಬ ಉಗ್ರ[...] ಆಲಿ ಹುಸೇನ್‌ಗೆ ಮೈಸೂರು ಪ್ರಾದೇಶಿಕ ಸಾರಿಗೆ ಇ[...] (ಆರ್.ಟಿ.ಓ.) ಡ್ರೈವಿಂಗ್ ಲೈಸೆನ್ಸ್ ನೀಡಿದೆ.

ಆಸಿಫ್ ಖಾನ್ ಸನ್ ಆಫ್ ವಾಜಿರ್ ಖಾನ್ [...] ಹೆಸರಿನಲ್ಲಿ ನೀಡಿರುವ ಈ ಲೈಸೆನ್ಸ್ ಮೇಲೆ ಅಲಿ ಹು[...] ಫೋಟೋ ಲಗತ್ತಿಸಲಾಗಿದೆ. ಲರ್ನಿಂಗ್ ಲೈಸೆನ್ಸಿಗಾಗಿ[...] ದಿನಗಟ್ಟಲೇ ಅಲೆಸುವ ಆರ್‌ಟಿಓ ಅಧಿಕಾರಿಗಳು [...] ಹುಸೇನ್‌ಗೆ ಒಂದೇ ದಿನದಲ್ಲಿ ಲರ್ನಿಂಗ್ ವ[...] ಪರ್ಮನೆಂಟ್ ಲೈಸೆನ್ಸ್ ನೀಡಿದ್ದಾರೆ. ಇದಿಷ್ಟೇ ಅಲ್ಲ[...] ಹುಸೇನ್ 1997ರಲ್ಲಿ ಮೈಸೂರಿನ 'ಸೇಂಟ್ ಫಿಲೋ[...] ಪ್ರೌಢಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪಾಸಾಗಿರುವ [...] ಏಪ್ರಿಲ್ 26, 2005ರಲ್ಲಿ ಸರ್ಟಿಫಿಕೇಟ್ ನೀಡಲಾ[...] ಅಂದಮೇಲೆ ಉಗ್ರರು ಅದೆಷ್ಟು ವ್ಯವಸ್ಥಿತ[...] ಮೈಸೂರಿನಲ್ಲಿ ತಳ ಊರಿದ್ದಾರೆ ಮತ್ತು ಅವರಿಗೆ ಸ್ಥಳೀ[...] ಕೆಲವು ಶಕ್ತಿಗಳು ಎಷ್ಟರಮಟ್ಟಿಗೆ ಪೂರಕವಾಗಿದೆಯೆ[...] ಅರ್ಥವಾಗುತ್ತದೆ.

ಇಷ್ಟೆಲ್ಲಾ ತಯಾರಿ ಮಾಡಿಕೊಂಡು ಟಾರ್ಗೆಟ್‌ಗ[...] ಗುರುತಿಸಿ ಅವುಗಳ ಮೇಲಿನ ದಾಳಿಗೆ ರಂಗ ಸಿದ್ಧಪಡಿ[...] ನಂತರ ಮತ್ತೊಂದು ಉಗ್ರರ ಗುಂಪು ಅಸಲಿ ಕಾರ್ಯಾ[...] ನಡೆಸುತ್ತಿತ್ತೆಂದು ಬಂಧಿತ ಉಗ್ರರು ಬಾಯಿಬಿಟ್ಟಿ[...] ಆದರೆ ಆ ಮತ್ತೊಂದು ಗುಂಪು ಯಾವುದು? ಅ[...] ಎಲ್ಲಿ ಅಡಗಿದ್ದಾರೆ ಮತ್ತು ಅವರು ಎಂತಹ ಶಕ್ತಿ[...] ಶಸ್ತ್ರಾಸ್ತ್ರಗಳನ್ನು ಹೊಂದಿದ್ದಾರೆ ಎಂಬುದರ ಬಗ್ಗೆ ಕೆ[...] ಬೇಹುಗಾರಿಕೆ ದಳ ತೀವ್ರ ತನಿಖೆ ನಡೆಸುತ್ತಿದೆ. [...] ತಿಂಗಳ ಹಿಂದೆ ಮುಂಬೈನ ರೈಲುಗಳಲ್ಲಿ ಸಂಭವಿ[...] ಸರಣಿ ಸ್ಫೋಟಗಳ ಆರೋಪಿಗಳು ಮೈಸೂರಿನಲ್ಲಿ ಅಡ[...] ರೆಂಬ ಮಾಹಿತಿ ಇತ್ತು. ಈ ಸಂಬಂಧ ಮುಂ[...] ಪೊಲೀಸರು ಮೈಸೂರಿನ ಕೆಲವು ಶಂಕಿತರನ್ನು [...] ತೆಗೆದುಕೊಂಡು ವಿಚಾರಣೆ ನಡೆಸಿದ್ದರು. ಈಗ ಸಿಕ್ಕಿ[...] ಉಗ್ರರಿಗೂ ಮುಂಬೈನ ಸರಣಿ ಸ್ಫೋಟಕ್ಕೂ ಸಂಬ[...] ವಿದೆಯೇ? ಎಂಬುವ ದಿಕ್ಕಿನಲ್ಲೂ ವಿಚಾರಣೆ ನಡೆಯು[...]


ಈ ಮಧ್ಯೆ ಪಾಕಿಸ್ತಾನಿ ಉಗ್ರರಿಗೆ ಮೈಸೂ[...] ರಾಜೀವ್ ನಗರದಲ್ಲಿ ಮನೆ ಕೊಡಿಸಿದ ಖಾದರ್ ಭಾ[...] ಅಲಿಯಾಸ್ ಖಾದರ್ ಭಾಯಿ ನಾಪತ್ತೆಯಾಗಿ[...] ರಾಜೀವ್ ನಗರದಲ್ಲಿ "ಪರೋಪಕಾರಿ" ಗೆಟಪ್‌ನ[...] ಖಾದರ್‌ಗೆ ಈ ಉಗ್ರರು ಮೊದಲಿನಿಂದಲೂ ಪರಿಚ[...] ಅವರು ನಡೆಸಲು ಉದ್ದೇಶಿಸಿರುವ ಕೃತ್ಯಗಳ ಬಗ್ಗೆ ಅ[...]

ಉಗ್ರರನ್ನು 20 ದಿನ ಹಿಂದೆಯೇ ಬಂಧಿಸಲಾಗಿತ್ತು!

ಅಕ್ಟೋಬರ್ 27ರಂದು ಎನ್‌ಕೌಂಟರ್ ಮೂಲಕ ವಿಜಯನಗರದ ರಸ್ತೆಯಲ್ಲಿ ಬಂಧಿಸಲಾದ ಉಗ್ರಗಾಮಿಗಳಾದ ಮೊಹಮದ್ ಫಹಾದ್ ಮತ್ತು ಹುಸೇನ್ ಆಲಿಯನ್ನು ಪೊಲೀಸರು ಇಪ್ಪತ್ತು ದಿನಗಳ ಹಿಂದೆ, ಅಂದರೆ ಅಕ್ಟೋಬರ್ 11ರಂದೇ ಬಂಧಿಸಿದ್ದರೆ? ಹೌದು ಎನ್ನುತ್ತಾರೆ ಉಗ್ರಗಾಮಿಗಳಿಗೆ ತಮ್ಮ ರಾಜೀವನಗರದ ಮನೆಯನ್ನು ಬಾಡಿಗೆ ಕೊಟ್ಟಿದ್ದ ಎಂ.ಕೆ. ರವಿಕುಮಾರ್‌ರವರ ಪತ್ನಿ ಸುವರ್ಣ.

ಅಕ್ಟೋಬರ್ 10ರಂದು ಸಾಧಾರಣ ಉಡುಪಿನಲ್ಲಿ ಬಂದ ಐವರು ವ್ಯಕ್ತಿಗಳು, "ನಾವು ಉದಯಗಿರಿ ಪೊಲೀಸ್ ಠಾಣೆಯವರು. ನಿಮ್ಮ ಮನೇಲಿ ಬಾಡಿಗೆಗೆ ಇದ್ದ ಮುಸ್ಲಿಮ್ಸ್ ಅವರೆಲ್ಲಿ?" ಎಂದು ಸುವರ್ಣರವರನ್ನು ಕೇಳಿದ್ದಾರೆ. ಅವರು ಮೇಲಿದ್ದಾರೆ ಎಂಬ ಉತ್ತರ ಪಡೆದ ಪೊಲೀಸರು ಮಹಡಿ ಹತ್ತಿ ಹೋಗಿದ್ದಾರೆ. ಹಾಗೆ ಕೆಳಗೆ ಬರುವಾಗ ಅವರೊಂದಿಗೆ ಮೊಹಮದ್ ಫಹಾದ್ ಮತ್ತು ಹುಸೇನ್ ಆಲಿ ಇದ್ದರು. ಅವರೊಂದಿಗೆ ಕಂಪ್ಯೂಟರ್ ಮತ್ತು ಸೂಟ್‌ಕೇಸ್‌ನ್ನು ಸಹ ಪೊಲೀಸರು ಒಯ್ದಿದ್ದಾರೆ. ಅವತ್ತಿನಿಂದ ನಾಪತ್ತೆಯಾದ ಈ ಮುಸ್ಲಿಂ ಉಗ್ರರು ನಂತರ ಕಂಡಿದ್ದೇ ಪತ್ರಿಕೆಗಳ ಮುಖಪುಟಗಳಲ್ಲಿ, ಎನ್‌ಕೌಂಟರ್ ವಿವರಗಳೊಂದಿಗೆ.

ಹಾಗಾದರೆ ಈ ಇಬ್ಬರು ಉಗ್ರರನ್ನು 20 ದಿನ ಇಟ್ಟುಕೊಂಡಿದ್ದ ಪೊಲೀಸರು ನಂತರ ಅವರನ್ನು 'ಎನ್‌ಕೌಂಟರ್' ಮಾಡಿ ಹಿಡಿಯುವ ಅಗತ್ಯವೇನಿತ್ತು? ಅಥವಾ 'ಎನ್‌ಕೌಂಟರ್' ಕಾರ್ಯಾಚರಣೆಯೇ ಒಂದು ನಾಟಕವೇ?




ಸಿಕ್ಕಿಬಿದ್ದಿರುವವರು ಪಾಕಿಸ್ತಾನಿ ಉಗ್ರರು ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಈ ವಿನಾಕಾರಣ ಸುಳ್ಳು ಎನ್‌ಕೌಂಟರ್‌ಗಳೇಕೆ? ಅಸಲಿಗೆ ಈ ಉಗ್ರಗಾಮಿಗಳ ಬಂಧನದ ಕ್ರೆಡಿಟ್ಟು ಕೇಂದ್ರ ಗುಪ್ತಚಾರ ಸಂಸ್ಥೆಗೆ ಸೇರಬೇಕು. ಮೈಸೂರಿಗೆ ಉಗ್ರಗಾಮಿಗಳು ನುಸುಳಿರುವ ಮಾಹಿತಿಯನ್ನು ನಗರ ಪೊಲೀಸರಿಗೆ ನೀಡಿ ಉಗ್ರರ ಚಟುವಟಿಕೆಯನ್ನು ಹಿಂಬಾಲಿಸಿದವರು ಕೂಡ ಕೇಂದ್ರ ಬೇಹುಗಾರಿಕೆ ಸಂಸ್ಥೆಯವರು.

ಅಕ್ಟೋಬರ್ 10ರಂದು ರಾಜೀವ್‌ನಗರದ ಮನೆಗೆ ನುಗ್ಗಿ ಫಹಾದ್ ಮತ್ತು ಹುಸೇನ್ ಆಲಿಯನ್ನು ವಶಕ್ಕೆ ತೆಗೆದುಕೊಂಡವರೂ ಕೇಂದ್ರ ಬೇಹುಗಾರಿಕೆ ಸಂಸ್ಥೆಯ ಗುಪ್ತಚಾರರು. ನಂತರ ಇಪ್ಪತ್ತು ದಿನಗಳ ಕಾಲ ಬಂಧಿತ ಉಗ್ರರನ್ನು ತೀವ್ರ ವಿಚಾರಣೆಗೆ ಗುರಿಪಡಿಸಿ ಅವರಿಂದ ಸಾಕಷ್ಟು ಮಾಹಿತಿ ಪಡೆದರು. ಆನಂತರ ಕಾನೂನಿನನ್ವಯ ನಡೆಯುವ ಮಹಜರ್, ಅಧಿಕೃತ ಬಂಧನ, ನ್ಯಾಯಾಲಯಕ್ಕೆ ಪ್ರಥಮ ಮಾಹಿತಿ ಸಲ್ಲಿಕೆ ಇವೆಲ್ಲವನ್ನು ನಡೆಸಬೇಕಾದವರು ಸ್ಥಳೀಯ ಪೊಲೀಸರು. ಈ ಪ್ರಕ್ರಿಯೆಗಾಗಿ ಕೇಂದ್ರ ಬೇಹುಗಾರಿಕೆ ಸಂಸ್ಥೆ ತನ್ನ ವಶದಲ್ಲಿದ್ದ ಇಬ್ಬರು ಉಗ್ರರನ್ನು ನಗರ ಪೊಲೀಸ್ ವಶಕ್ಕೆ ನೀಡಿದೆ.


ಅಲ್ಲಿಂದ ಆರಂಭವಾಯ್ತು ನೋಡಿ ಮೈಸೂರು ಪೊಲೀಸರ 'ಕಳ್ಳ-ಪೊಲೀಸ್ ಎನ್‌ಕೌಂಟರ್' ಡ್ರಾಮ. "ಅಕ್ಟೋಬರ್ 27ರಂದು ವಿಜಯನಗರದ ವರ್ತುಲ ರಸ್ತೆಯಲ್ಲಿ ಹೀರೋಪುಕ್ ಗಾಡಿಯಲ್ಲಿ ಬರುತ್ತಿದ್ದ ಇಬ್ಬರು ಯುವಕರನ್ನು ತಡೆದು ನಿಲ್ಲಿಸಲು ಯತ್ನಿಸಿದಾಗ, ಯುವಕರು ಪೊಲೀಸ್ ಪಾರ್ಟಿಯ ಮೇಲೆ ಎ.ಕೆ. 47 ಬಂದೂಕಿನಿಂದ ಗುಂಡು ಹಾರಿಸಿದರು. ನಾವು ಪ್ರತಿದಾಳಿ ಮಾಡಿ ಬೈಕ್‌ಗೆ ಜೀಪಿನಲ್ಲಿ ಡಿಕ್ಕಿ ಹೊಡೆಸಿ ಅವರನ್ನು ಚಾಕಚಕ್ಯತೆಯಿಂದ ಬಂಧಿಸಿದೆವು" ಎಂಬುದು ಪೊಲೀಸರು ಹಾಕುವ 'ಪ್ರೀ ರೆಕಾರ್ಡೆಡ್ ಕ್ಯಾಸೆಟ್.'

ಬಂಧಿಸಿರುವುದೇನೋ ಸಂತೋಷ, ಆದರೆ ಕಾರ್ಯಾಚರಣೆ ನಡೆಯುವ ಮೂರು ಗಂಟೆ ಮೊದಲೇ ರಿಂಗ್ ರಸ್ತೆ ಮತ್ತು ವಿಜಯನಗರ ಪ್ರವೇಶಿಸುವ ಹೊರಹೋಗುವ ರಸ್ತೆಗಳನ್ನು ಬಂದ್ ಮಾಡಿ ಬೇರ್‍ಯಾವುದೇ ವಾಹನ ಬಾರದಂತೆ ತಡೆದಿದ್ದಲ್ಲದೆ, ರಿಂಗ್ ರಸ್ತೆಯೂ ಸೇರಿದಂತೆ ಇಡೀ ಬಡಾವಣೆಯ ವಿದ್ಯುತ್ ಕಿತ್ತು ಗಾಢಾಂಧಕಾರದಲ್ಲಿ ಮುಳುಗಿಸಿದ್ದರ ಉದ್ದೇಶವೇನು? ಅಂದರೆ ಇದೇ ಜಾಗಕ್ಕೆ ಇದೇ ವಾಹನದಲ್ಲಿ ಉಗ್ರರು ಬರುತ್ತಾರೆ, ಮತ್ತೆ ನಾವು ಅದೇ ಸ್ಥಳದಲ್ಲಿ ಬಂಧಿಸುತ್ತೇವೆಂದು ಖಚಿತ ನಿರ್ಧಾರಕ್ಕೆ ಪೊಲೀಸರು ಮೊದಲೇ ಬಂದಂತಿದೆ.



ಅದಿರಲಿ ಹೀರೋಪುಕ್‌ನಲ್ಲಿ ಎಕೆ 47 ಬಂದ[...] ಹೊತ್ತು ಓಡಾಡುತ್ತಿದ್ದ ಉಗ್ರರ ಗಾಡಿಗೆ ಪೊಲಿ[...] ಜೀಪು ಡಿಕ್ಕಿ ಹೊಡೆದಾಗ, ಬೈಕ್ ಬಿಟ್ಟ ಉ[...] ಪೊದೆಯೊಳಗೆ ಅಡಗಿ ಪೊಲೀಸರತ್ತ ಗುಂ[...] ಮಳೆಗರೆದರಂತೆ. ಅಲ್ಲೆ ಮತ್ತೊಂದು ವ್ಯತಿರಿಕ್ತ ಹ[...] ನೀಡುವ ಪೊಲೀಸರು, "ಉಗ್ರರು ನಮ್ಮತ್ತ ಮ[...] ಸುತ್ತು ಗುಂಡು ಹಾರಿಸಿದರು, ಪ್ರತಿಯಾಗಿ ನಾವು ಎ[...] ಸುತ್ತು ಹಾರಿಸಿದೆವು. ಪೊಲೀಸರು ಮತ್ತು ಉಗ್ರರಿಬ್ಬ[...] ಸಣ್ಣಪುಟ್ಟ ಗಾಯಗಳಾಗಿವೆ" ಎಂದು ಹೇಳುತ್ತಾರೆ. ಉ[...] ಎಕೆ 47 ಬಂದೂಕಿನಿಂದ 'ನಿಜಕ್ಕೂ' ಉದ್ದೇಶಪೂರಿತ[...] 'ಫೈರ್' ಮಾಡಿದರೆ? ಪುರಾತನ 303 ಬಂದೂಕು [...] ಪಾಯಿಂಟ್ 38 ಪಿಸ್ತೂಲು ಹೊಂದಿದ್ದ [...] ಇನ್ಸ್‌ಪೆಕ್ಟರುಗಳಾದ ಉಪೇಂದ್ರ, ರಾಮಮೂರ್ತಿ ರ[...] ಎ.ಕೆ. ಸುರೇಶ್, ಕಾನ್ಸ್‌ಟೇಬಲ್‌ಗಳಾದ ಓಂಪ್ರ[...] ಮತ್ತು ಅನಿಲ್ ಈ ಹೊತ್ತಿಗೆ ಗೋಡೆಗೆ ನೇತು ಹಾ[...] ಫೋಟೋ ಫ್ರೇಂನಲ್ಲಿರುತ್ತಿದ್ದರು. ಏಕೆಂದರ ಎಕೆ [...] ಬಂದೂಕಿನ ಟ್ರಿಗರ್ ಒಮ್ಮೆ ಹಿಡಿದರೆ ಸಾಕು ಅದು[...] 60 ಬುಲೆಟ್‌ಗಳು ಸತತವಾಗಿ ಸಿಡಿಯುತ್ತವೆ. ಉ[...] ಆ ರೀತಿ ಏಕೆ ಮಾಡಲಿಲ್ಲ? ಅಥವಾ ಅವರಿಗೆ ಯಾ[...] ಸಾಯಿಸುವ ಉದ್ದೇಶವಿರಲಿಲ್ಲವೇ? ಅವರಲ್ಲಿದ್ದುದು ಕ[...]


ಬಹಳಷ್ಟು ಬಾರಿ ನಮಗೆ ಉಪಯುಕ್ತವಾದದ್ದನ್ನೇ ನಾವು ದ್ವೇಷಿಸುತ್ತೇವೆ



ಪೇದೆಗಳಾದ ಓಂಪ್ರಕಾಶ್ ಮತ್ತು ಅನಿಲ್

ಮೊದಲೇ ತಿಳಿದಿದ್ದನೆ? ಎಂಬುದು ಪತ್ತೆಯಾಗಿಲ್ಲ. ಆದರೆ ಉಗ್ರರೊಂದಿಗೆ ದಿನವೂ ಆಟವಾಡುತ್ತಿದ್ದ ಖಾದರನ ಮಕ್ಕಳು ಉಗ್ರರನ್ನು ಚಾಚಾ ಎಂದು ಕರೆಯುತ್ತಾ ಅನ್ಯೋನ್ಯವಾಗಿ ದ್ದುದು ನೋಡಿದರೆ ಖಾದರ್‌ಗೆ ಈ ಇಬ್ಬರು ಉಗ್ರರು ಚಿರಪರಿಚಿತರು ಎಂಬ ಭಾವನೆ ಬರುತ್ತದೆ.

ಆ ನಂತರ ನಡೆದು ಬೆಳವಣಿಗೆಯಲ್ಲಿ ಪೊಲೀಸರು ಮನೆಯಲಿದ್ದ ಉಗ್ರರನ್ನು ವಶಕ್ಕೆ ತೆಗೆದುಕೊಂಡ ನಂತರ, ಖಾದರ್ ತನ್ನ ಬಳಿಯಿದ್ದ ಮನೆಯ ಮತ್ತೊಂದು ಕೀಲಿ ಬಳಸಿ ಅಲ್ಲಿದ್ದ ಒಂದೊಂದೇ ವಸ್ತುವನ್ನು ಸಾಗಿಸುತ್ತಿದ್ದನಂತೆ. ಆ ಮನೆಯಲ್ಲಿದ್ದವರು ಎಲ್ಲಿ ಎಂದು ಕೇಳಿದರೆ "ಪಾಸ್



ಪ್ರವೀಣ್ ಸೂದ್ ಮತ್ತು ಬಾಲಕೃಷ್ಣ

ಪೋರ್ಟ್ ತಪಾಸಣೆಗಾಗಿ ಅವರನ್ನು ಪೊಲೀಸರು ಕರೆದೊಯ್ದಿದ್ದಾರೆ" ಎಂದು ಹೇಳುತ್ತಿದ್ದನಂತೆ. ಆದರೆ ಅಕ್ಟೋಬರ್ 27 ರ ಕಾರ್ಯಾಚರಣೆಯ ನಂತರ ಖಾದರ್ ನಾಪತ್ತೆಯಾಗಿದ್ದಾನೆ.

ಒಂದು ಮೂಲದ ಪ್ರಕಾರ ಖಾದರ್‌ನ ಚಲನವಲನಗಳ ಮೇಲೆ ಕಣ್ಣಿಟ್ಟು, ಆತ ಸಂಪರ್ಕಿಸಬಹುದಾದ ವ್ಯಕ್ತಿಗಳ ಮೇಲೆ ನಿಗಾ ಇಡಲೆಂದೇ ಅವನನ್ನು ಸ್ವತಂತ್ರವಾಗಿ ಬಿಡಲಾಗಿತ್ತು. ಆದರೆ ಈಗ ಆತ ಕೇಂದ್ರ ಬೇಹುಗಾರಿಕೆ ಸಂಸ್ಥೆಯ ವಶದಲ್ಲಿದ್ದು ವಿಚಾರಣೆ ಎದುರಿಸುತ್ತಿದ್ದಾನೆ ಎಂದು ತಿಳಿದುಬಂದಿದೆ. ಖಾದರ್, ಉಗ್ರಗಾಮಿಗಳಿಗೆ ನೆರವಾಗಿರುವ ಇತರೇ ಸ್ಥಳೀಯರ ಬಗ್ಗೆ ವಿವರಗಳನ್ನು ಬಹಿರಂಗ ಪಡಿಸಿದ್ದಾನೆಂದು ಮೂಲಗಳು ತಿಳಿಸಿವೆ. ಆದರೆ ಬಂಧಿತ ಉಗ್ರರಿಗಿರುವ ನೆಟ್‌ವರ್ಕ್ ಸಂಪೂರ್ಣವಾಗಿ ಪತ್ತೆಯಾಗುವವರೆಗೆ ಈ ಪ್ರಕರಣವನ್ನು ಮುಕ್ತಾಯಗೊಳಿಸುವಂತಿಲ್ಲ, ಸದಾ ಕಟ್ಟೆಚ್ಚರದಿಂದ ಇರಬೇಕಾದುದು ಅವಶ್ಯಕ ಎಂಬುದು ಪೊಲೀಸರ ಮಾತು. ●

3 ಗುಂಡೆ? ಅಥವಾ ಉಗ್ರರಿಗೆ ಹಾಗೆ 'ತರಬೇತಿ' ನೀಡಲಾಗಿತ್ತೆ.


ಈ ಪ್ರಶ್ನೆಗಳಿಗೆ ಪೊಲೀಸರ ಬಳಿ ಉತ್ತರವಿಲ್ಲ. ರಕ್ಷಣಾ ಇಲಾಖೆಯ ಕಾರ್ಯವೈಖರಿ ಬಲ್ಲವರಿಗೆಲ್ಲಾ ಗೊತ್ತು. ಕೇಂದ್ರ ಬೇಹುಗಾರಿಕೆ ಸಂಸ್ಥೆ (ಐಬಿ) ಮತ್ತು ರಾ (ರಿಸರ್ಚ್ ಅಂಡ್ ಅನಲಿಸಿಸ್ ವಿಂಗ್)ನಂತಹ ಸಂಸ್ಥೆಗಳು ತಮ್ಮ ಕಾರ್ಯಾಚರಣೆಯನ್ನು ಬಹಿರಂಗವಾಗಿ ನಡೆಸುವುದಿಲ್ಲ. ಅವರದೇನಿದ್ದರೂ 'ಅಂಡರ್ ಕವರ್ ಆಪರೇಷನ್'. ಕಾನೂನು ಜಾರಿಗೊಳಿಸುವ ಮತ್ತು ಪ್ರಕ್ರಿಯೆಯನ್ನು ಮುಂದುವರಿಸುವ ಅಧಿಕಾರ ವ್ಯಾಪ್ತಿ ಅವರಿಗಿಲ್ಲ. ಆ ಕಾರಣದಿಂದ ಅಧಿಕೃತ ಬಂಧನ, ಪಂಚನಾಮೆ, ಪ್ರಥಮ ಮಾಹಿತಿ ವರದಿ ಮತ್ತು ನ್ಯಾಯಾಲಯಕ್ಕೆ ಸಂಬಂಧಿಸಿದ ಜವಾಬ್ದಾರಿಯನ್ನು ಅವರು ಸಂಬಂಧಪಟ್ಟ ಪೊಲೀಸರಿಗೆ ವಹಿಸುತ್ತಾರೆ.

ಈ ವ್ಯವಸ್ಥೆಯನ್ನು ತಮ್ಮ ರೀತಿಗೆ ಬಳಸಿಕೊಳ್ಳುವ ಪೊಲೀಸರು ಎನ್‌ಕೌಂಟರ್‌ನಂತಹ ನಾಟಕವಾಡಿ ಹೀರೋಗಳಾಗುತ್ತಾರೆ, ಪ್ರಶಸ್ತಿಗಳನ್ನು ಪಡೆಯುತ್ತಾರೆ. ಎನ್‌ಕೌಂಟರ್‌ನಲ್ಲಿ ಉಗ್ರಗಾಮಿಗಳಿಂದ ಗುಂಡೇಟು [illegible] ಎಂದು ಹೇಳಲಾದ ಸಿ.ಸಿ.ಬಿ ಕಾನ್‌ಸ್ಟೇಬಲ್‌ಗಳಾದ ಓಂಪ್ರಕಾಶ್ ಮತ್ತು ಅನಿಲ್‌ಕುಮಾರ್ [illegible] ನಡೆದ ಕೆಲವು ಎರಡೇ ಗಂಟೆಯಲ್ಲಿ [illegible] ಗಳನ್ನು ಬಿಚ್ಚಿ [illegible] ನಾನಾ ಅನುಮಾನಗಳಿಗೆ ಕಾರಣವಾಗಿದೆ.

[illegible] ಈ ಘಟನೆಯಿಂದ ಮೈಸೂರು ನಗರ ಪೊಲೀಸ್ ಕಮೀಷನರ್ ಪ್ರವೀಣ್ ಸೂದ್, ಸಿ.ಸಿ.ಬಿ. [illegible] ಬಾಲಕೃಷ್ಣರವರಿಗೆ ಒಳ್ಳೆ ಪ್ರಚಾರ ಮತ್ತು [illegible] ಸಿಗುತ್ತದೆ. [illegible]

ಕೋಲಾರ: ಲಂಚಕ್ಕಾಗಿ ಪ್ರಾಣಬಿಟ್ಟ ಪೊಲೀಸರು!

ದೇಶಕ್ಕಾಗಿ ಪ್ರಾಣಬಿಟ್ಟವರಿದ್ದಾರೆ. ಸ್ನೇಹಕ್ಕೋಸ್ಕರ, ಪ್ರೇಮಕ್ಕೋಸ್ಕರ ಪ್ರಾಣಬಿಟ್ಟವರ ಕಥೆಗಳನ್ನು ಕೇಳಿದ್ದೀವಿ. ಆದರೆ, ಲಂಚಕ್ಕೋಸ್ಕರ ಪ್ರಾಣ ತೆತ್ತವರ ಬಗ್ಗೆ ನೀವು ಕೇಳಿದ್ದೀರ? ಇಲ್ಲವಾದರೆ ಕೋಲಾರ ಜಿಲ್ಲಾ ಪೊಲೀಸರ ಕಥೆಯನ್ನು ಕೇಳಿ. ಈ ಪ್ರಕರಣದಲ್ಲಿ ಮೃತಪಟ್ಟವರ, ಮತ್ತವರ ಕುಟುಂಬದವರ ಬಗ್ಗೆ ನಮಗೆ ಖಂಡಿತವಾಗಿಯೂ ವಿಷಾದವಿದೆ. ಆದರೆ, ಅವರು ಯಾವ ಪರಿಸ್ಥಿತಿಯಲ್ಲಿ ಮತ್ತು ಯಾವ ಕಾರಣಕ್ಕಾಗಿ ಸತ್ತರು ಎಂಬುದರ ಬಗ್ಗೆ ತಿರಸ್ಕಾರವಿದೆ.



ವೆಂಕಟೇಶ್

ಕಳೆದ ಸೆಪ್ಟೆಂಬರ್ 27ರ ರಾತ್ರಿ ಬೆಂಗಳೂರು -ಹೈದ್ರಾಬಾದ್ ರಸ್ತೆಯ ರಾಷ್ಟ್ರೀಯ ಹೆದ್ದಾರಿ 8ರಲ್ಲಿ ಗುಡಿಬಂಡೆ ಪೊಲೀಸ್ ಠಾಣೆಯ ಎ.ಎಸ್.ಐ. ವೆಂಕಟೇಶ್ ಎಂಬ ಅಧಿಕಾರಿಗೆ ಬೀಚಗಾನಹಳ್ಳಿ ಸಮೀಪ ಲಾರಿಯೊಂದು ಡಿಕ್ಕಿ ಹೊಡೆದು ಅವರು ಸ್ಥಳದಲ್ಲೇ ಮೃತಪಟ್ಟರು. ಲಾರಿ ಸ್ಥಳದಲ್ಲಿ ನಿಲ್ಲದೆ ವೇಗವಾಗಿ ಪರಾರಿಯಾಯ್ತು, ಆನಂತರ ಲಾರಿಯನ್ನು ಬಾಗೇಪಲ್ಲಿಯಲ್ಲಿ ತಡೆ ಹಿಡಿದು ಚಾಲಕನನ್ನು ವಶಕ್ಕೆ ತೆಗೆದುಕೊಳ್ಳಲಾಯಿತು. ವೆಂಕಟೇಶ್ ಪ್ರಕರಣವೂ ಸೇರಿದರೆ ಕೋಲಾರ ಜಿಲ್ಲೆಯಲ್ಲಿ ಕರ್ತವ್ಯನಿರತ ಪೊಲೀಸರು ನಡುರಾತ್ರಿಯಲ್ಲಿ, ಹೆದ್ದಾರಿಯಲ್ಲಿ ಅಪಘಾತಕ್ಕೊಳಗಾಗಿ ಮೃತಪಟ್ಟಿರುವ ಮೂರನೇ ಘಟನೆ ಇದು.

ಈ ಹಿಂದೆ ಬಾಗೇಪಲ್ಲಿ ಪೊಲೀಸ್ ಠಾಣೆಯ ಎ.ಎಸ್.ಪಿ. ನಾರಾಯಣರಾವ್ ಮತ್ತು ಅದೇ ಠಾಣೆಯ ಕಾನ್‌ಸ್ಟೇಬಲ್ ವೆಂಕಟೇಶ್ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಲಾರಿ ಅಪಘಾತದಲ್ಲಿ ಸಾವಿಗೀಡಾಗಿದ್ದರು. ಇವರಿಬ್ಬರ ಸಾವು ಸಹ ಸಂಭವಿಸಿದ್ದು ರಾಷ್ಟ್ರೀಯ ಹೆದ್ದಾರಿ 8ರ ಅದೇ ಪಲ್ಲಿ ಗ್ರಾಮದ ಸಮೀಪ. ಪೊಲೀಸ್ ದಾಖಲೆಗಳ ಪ್ರಕಾರ ಇವೆಲ್ಲಾ 'ಹಿಟ್ ಅಂಡ್ ರನ್ ಕೇಸ್'ಗಳು ಆದರೆ, ಈ ಹಿಟ್ ಅಂಡ್ ರನ್ ಕೇಸ್‌ಗಳೇಕೆ ನಡೆಯುತ್ತವೆಂದು ಕೆದಕುತ್ತಾ ಹೋದರೆ, ಈ ಅಪಘಾತಗಳಿಗೆ ಮೂಲಕಾರಣ ಲಂಚ ಮತ್ತು ಅದರ ಹಿಂದಿರುವ ಪೊಲೀಸ್ ಅಧಿಕಾರಿಗಳು ಎಂಬುದು ಅರಿವಾಗುತ್ತದೆ.

ಕೋಲಾರ ಜಿಲ್ಲೆಯಲ್ಲಿ ಮೂರು ರಾಷ್ಟ್ರೀಯ ಹೆದ್ದಾರಿಗಳು ಹಾದುಹೋಗುತ್ತವೆ. ಒಂದು ರಾಷ್ಟ್ರೀಯ ಹೆದ್ದಾರಿ 7 ಮತ್ತೊಂದು 8. ಇನ್ನೊಂದು 4. ರಾಷ್ಟ್ರೀಯ ಹೆದ್ದಾರಿ 7, ಚಿಕ್ಕಬಳ್ಳಾಪುರ, ಬಾಗೇಪಲ್ಲಿ ಮೂಲಕ ಹೈದರಾಬಾದಿಗೆ ಹೋದರೆ, ಹೆದ್ದಾರಿ 8 ಕೋಲಾರ-ಗುಡಿಬಂಡೆಯ ಮೂಲಕ ಹೆದ್ದಾರಿ 7ಕ್ಕೆ ಸೇರುತ್ತದೆ. ಹೆದ್ದಾರಿ 4, ಬೆಂಗಳೂರು-ಮದ್ರಾಸು ರಸ್ತೆ ಈ ಎಲ್ಲಾ ರಸ್ತೆಗಳು ಅತಿ ಹೆಚ್ಚಿನ ಲಾರಿಗಳು ಸಂಚರಿಸುವ ರಸ್ತೆಗಳು. ಅದೇ ರೀತಿ ಪೊಲೀಸರಿಗೆ ಅನುದಾನಿ ಇರುವ ಹಾದಿಗಳೂ ಹೌದು.

ಈ ಹೆದ್ದಾರಿಗಳನ್ನು ಹಾದು ಹೋಗುವ ಲಾರಿಗಳು ಅಧಿಕೃತವಾಗಿ ಕಟ್ಟುವ ಪರ್ಮಿಟ್ಟು, ರೋಡ್ ಟ್ಯಾಕ್ಸ್ ಇತ್ಯಾದಿಗಳನ್ನು ಹೊರತುಪಡಿಸಿ, ವಾಣಿಜ್ಯ ತೆರಿಗೆ, ಆರ್.ಟಿ.ಓ. ಸೆಂಟ್ರಲ್ ಎಕ್ಸೈಜ್ ಇಲಾಖೆಗಳಿಗೆ ತಿಂಗಳಿಗಿಷ್ಟೆಂದು ಮಾಮೂಲಿ ನಿಗದಿತವಾಗಿರುತ್ತದೆ. ಆದರೂ ಇವರು ಹಾದು ಹೋಗುವ ಊರುಗಳ ಪೊಲೀಸರಿಗೆಲ್ಲ ಇವರು ಪ್ರಸಾದ ತಿನ್ನಿಸದಿದ್ದರೆ ಯಾವುದಾದರೂ ನೆಪ ಒಡ್ಡಿ ಲಾರಿಗಳನ್ನು ತಡೆಹಿಡಿದುಬಿಡುತ್ತಾರೆ. ಇದಕ್ಕಾಗಿಯೇ ಒಬ್ಬೊಬ್ಬ ಲಾರಿ ಚಾಲಕನು ತನ್ನ ಬಳಿ ಹತ್ತರಿಂದ ಇಪ್ಪತ್ತು ಸಾವಿರ ಎಕ್ಸ್‌ಟ್ರಾ ಹಣ ಇಟ್ಟುಕೊಂಡಿರುತ್ತಾನೆ. ಆದರೆ ಒಮ್ಮೊಮ್ಮೆ ಅನಿರೀಕ್ಷಿತವಾಗಿ ಸಂಭವಿಸುವ ಅಪಘಾತ ಅಥವಾ ಮತ್ತಿನ್ಯಾವುದೋ ಕಾರಣದಿಂದ ಚಾಲಕನ ಕೈ ಕೂಡ ಬರಿದಾಗಿರುತ್ತದೆ.



ಕೋಲಾರ ಎಸ್ಪಿ



ಡಿವೈ.ಎಸ್ಪಿ ಮುನಿರೆಡ್ಡಿ

ಆದರೆ ಇದು ನಮ್ಮ ಪೊಲೀಸಪ್ಪಗಳಿಗೆ ಅರ್ಥವಾಗಬೇಕಲ್ಲ. ಇಲ್ಲಿ ಮತ್ತೊಂದು ವಿಷಯವಿದೆ. ಲಾರಿಯಲ್ಲಿ ಸಾಗಿಸುತ್ತಿರುವ ಗೂಡ್ಸು ಮದ್ರಾಸಿನಲ್ಲಿರುವ ರೈಲಿಗೋ, ವಿಮಾನಕ್ಕೋ, ಆಂಧ್ರದ ವಿಶಾಖಪಟ್ಟಣದ ಬಂದರಿನ ಹಡಗಿಗೋ ಲೋಡ್ ಮಾಡಬೇಕಿರಬಹುದು. ಸ್ವಲ್ಪ ತಡವಾದರೂ ಯಾರೂ ಈ ಲಾರಿಗೆ ಕಾಯುವವರಿಲ್ಲ. ಇಂತಹ ಸಮಯದಲ್ಲಿ ಪೊಲೀಸಪ್ಪಗಳು ವಿನಾಕಾರಣ ಅಡ್ಡಹಾಕಿಕೊಂಡು ಕಾಸು ಗಿಂಜಲು ಹೋದರೆ ಅವರೇನು ಮಾಡಬೇಕು. ಮೊದಲೇ ಸಾವಿರಾರು ಕಿಲೋಮೀಟರ್ ಡ್ರೈವ್ ಮಾಡಿಬಂದ ದಣಿವು, ತಿಂಗಳಾನುಗಟ್ಟಲೆ ಮನೆ ಬಿಟ್ಟು ಅಲೆಯುವ ಚಾಲಕನಿಗೆ ಅದೇನು ಟೆನ್ಷನ್ ಇರುತ್ತೋ, ಅದರ ಜೊತೆಗೆ ಸರಿಯಾದ ಸಮಯಕ್ಕೆ ಗೂಡ್ಸ್ ಡೆಲಿವರಿ ಮಾಡಬೇಕೆಂಬ ತವಕ.

ಹೀಗೆ ಸರಿರಾತ್ರಿಯಲ್ಲಿ ದುತ್ತೆಂದು ಅನಾಮತ್ತಾಗಿ ಲಾರಿಯೆದುರು ಪ್ರತ್ಯಕ್ಷನಾಗುವ ಪೊಲೀಸನಿಗೆ ಗುದ್ದಿ ಪರಾರಿಯಾಗಿರುತ್ತಾನೆ.

ಹಾಗೆಂದ ಮಾತ್ರಕ್ಕೆ ಮಧ್ಯರಾತ್ರಿ ಪೊಲೀಸರು ಲಾರಿಯನ್ನು ಹಿಡಿಯಬಾರದೆಂದಾಗಲಿ ಅಥವಾ ಡ್ರೈವರ್‌ಗಳು ಲಾರಿಯನ್ನು ಅವರ ಮೇಲೆ ಹತ್ತಿಸಿಕೊಂಡು ಹೋಗಬೇಕೆಂದಾಗಲಿ ಅಲ್ಲ, ಪೊಲೀಸರು ಲಾರಿಗಳನ್ನು ಹಿಡಿಯುವ ಉದ್ದೇಶದ ಬಗ್ಗೆ ಪ್ರಶ್ನೆ ಅಷ್ಟೆ. ಗುಡಿಬಂಡೆ ಪೊಲೀಸ್ ಠಾಣೆಯಲ್ಲಿ ಸಣ್ಣ ತಿಮ್ಮಯ್ಯ ಎಂಬ ಸರ್ಕಲ್ ಇನ್ಸ್‌ಪೆಕ್ಟರ್ ಇದ್ದಾನೆ. ಅವನ ಪರವಾಗಿ ರಾತ್ರಿ ವಸೂಲಿಗೆ ಹೋಗಿ ಸೆಪ್ಟೆಂಬರ್ 27ರಂದು ಮೃತಪಟ್ಟವರೇ ಎ.ಎಸ್.ಐ. ವೆಂಕಟೇಶ್. ಸದರಿ ಸಣ್ಣ ತಿಮ್ಮಯ್ಯನ ಜೀಪನ್ನು ಒಂದು ರಾತ್ರಿ ರೌಂಡ್‌ಗೆ ತೆಗೆದುಕೊಂಡು ಹೋದರೆ ಎ.ಎಸ್.ಐ. ವೆಂಕಟೇಶ್ 5 ಸಾವಿರ ರೂಪಾಯಿ ಕಪ್ಪ ಮಡಗಬೇಕಂತೆ. ಅವನಿಗೆ ಕೊಟ್ಟು ಉಳಿದದ್ದು ಟಾಂಗ್. ಸಬ್‌ಇನ್ಸ್‌ಪೆಕ್ಟರ್ ಜೀಪ್ ತೆಗೆದುಕೊಂಡು ಹೋದರೆ 3 ಸಾವಿರ ರೂಪಾಯಿ. ಹೀಗೆ ಫಿಕ್ಸ್ ಆಗಿದೆ ಲಂಚದ ಅಮೌಂಟು.

ರಾಷ್ಟ್ರೀಯ ಹೆದ್ದಾರಿ, 4,7 ಮತ್ತು ಆರ ವ್ಯಾಪ್ತಿಗೆ ಬರುವ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಇದೇ ಅವ್ಯವಹಾರ ಮತ್ತು ವ್ಯವಸ್ಥೆ. ಇದನ್ನು ಸಂಪೂರ್ಣವಾಗಿ ಚಿಕ್ಕಬಳ್ಳಾಪುರ ಡಿ.ಎಸ್ಪಿ. ಚಂದ್ರಮೋಹನ್ ಸಿಂಗ್ ಮತ್ತು ಕೋಲಾರ ಡಿ.ಎಸ್ಪಿ ಮುನಿರೆಡ್ಡಿ ನಿಯಂತ್ರಿಸುತ್ತಾರೆ. ಇತ್ತೀಚೆಗೆ ನಡುರಾತ್ರಿ ಲಾರಿ ನಿಲ್ಲಿಸುವ ವ್ಯವಹಾರಗಳು ಚಿಕ್ಕಬಳ್ಳಾಪುರ ನಂದಿಕ್ರಾಸ್, ರಾಮದೇವರ ಗುಡಿ ಮತ್ತು ಕೋಲಾರದ ನರಸಾಪುರ ವ್ಯಾಪ್ತಿಯಲ್ಲಿ ಹೆಚ್ಚಾಗಿದೆ. ಈ ಪೊಲೀಸರಿಗೆ ಒಂದು ವಿಚಿತ್ರವಾದ ವಿಶ್ವಾಸವಿದೆ. ಖಾಕಿಬಟ್ಟೆ, ಟೋಪಿ, ಲಾ. ಕಂಡರೆ ಸಾಕು ಎಂತಹ ಬುಲ್ಡೋಜರ್ ಆದರೂ ಹೆದರಿ ನಿಂತುಬಿಡುತ್ತದೆ ಎಂದು ಇವರು ನಂಬಿರುತ್ತಾರೆ.

ಆದರೆ ಗ್ರಹಚಾರ ಕೆಟ್ಟಿದ್ದರೆ ಯಾರೋ ತಲೆಕೆಟ್ಟ ಡ್ರೈವರು ಎ.ಎಸ್.ಐ. ವೆಂಕಟೇಶ್‌ಗೆ ಗುದ್ದಿದಂತೆ ಗುದ್ದಿ ಸಾಯಿಸಿ ಹೋಗಿರುತ್ತಾನೆ. ಇನ್ನಾದರೂ ಕೋಲಾರ ಎಸ್ಪಿ, ರವೀಂದ್ರನಾಥ್ ಈ ಬಗ್ಗೆ ಗಮನಹರಿಸಿ, ತಮ್ಮ ಪೊಲೀಸರು ವೇಗವಾಗಿ ಹೋಗುತ್ತಿರುವ ಲಾರಿಗಳ ಎದುರು ಧಮಕಿ 'ಆತ್ಮಹತ್ಯೆ' ಮಾಡಿಕೊಳ್ಳುವುದನ್ನು ನಿಲ್ಲಿಸಲಿ.

-ವರದಿಗಾರ

ದಲಿತ ರೈತರಿಗೆ 'ನೀರು' ಕುಡಿಸಿದ ಸರ್ಕಾರ!


ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ

ಗುಲ್ಬರ್ಗಾ

'ದಲಿತರ ಅಭಿವೃದ್ಧಿಗಾಗಿ' ಎಂಬ ಘೋಷಣೆಯೊಂದಿಗೆ ಬರುವ ಸರ್ಕಾರಿ ಯೋಜನೆಗಳು ಹೇಗೆ ನೆಪಮಾತ್ರಕ್ಕೆ ಮಾತ್ರ ಜಾರಿಗೆ ಬರುತ್ತವೆ; ಅವುಗಳಿಗೆ ಅದನ್ನು ಸರ್ಕಾರವೇ ಹೇಗೆ ಹಿಂಬಾಗಿಲಿನಿಂದ ತಡೆ ಒಡ್ಡುತ್ತದೆ ಎಂಬುದಕ್ಕೆ ನೈಜ ಉದಾಹರಣೆ, 2006-07ರ ಸಾಲಿಗೆ ಆರಂಭವಾದ "ಪರಿಶಿಷ್ಟ ಜಾತಿ ಮತ್ತು ಪಂಗಡಗಳ ರೈತರ ಜಮೀನುಗಳಿಗೆ ನೀರಾವರಿ ಸೌಲಭ್ಯ" ಎಂಬ ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ. ಯೋಜನೆಗಳು.

"ಒಟ್ಟು 250 ಕೋಟಿ ರೂಪಾಯಿ ವೆಚ್ಚದಲ್ಲಿ ಪರಿಶಿಷ್ಟ ವರ್ಗ ಮತ್ತು ಜಾತಿಗಳ ರೈತರ ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗುತ್ತದೆ" ಎಂದು ಜಾಹೀರಾತು ನೀಡಿದ ಕುಮಾರಸ್ವಾಮಿ ಸರ್ಕಾರ, ದಲಿತ ರೈತರ ಕಣ್ಣಲ್ಲಿ ಆಶಾಕಿರಣ ಮೂಡಿಸಿತ್ತು, ಈ ಯೋಜನೆಗೆ ಸಮಾಜ ಕಲ್ಯಾಣ ಇಲಾಖೆಯ ಮೂಲಕ ನೀರಾವರಿ ಇಲಾಖೆಗೆ 250.23 ಕೋಟಿ ರೂ. ಬಂದಿದ್ದು ನಿಜ. ಆದರೆ ಇಲಾಖೆಗೆ ಮಂಜೂರಾಗಿರುವ ವಾರ್ಷಿಕ ಸಾಮಾನ್ಯ ಅನುದಾನದಲ್ಲೆ ಈ ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ. ಯೋಜನೆಗಳನ್ನು ಜಾರಿಗೊಳಿಸಬೇಕೆಂದು ಒತ್ತಡ ಹೇರಲಾಗಿದೆ.

ಈ ಬಗ್ಗೆ ಕಳೆದ ಜುಲೈ 24ರಂದು ಯೋಜನಾ ಇಲಾಖೆಯ ಅಪರ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ನಿರ್ಧಾರ ಕೈಗೊಂಡಿರುವುದು ದಲಿತ ರೈತರಿಗೆ ತಡವಾಗಿ ತಿಳಿದುಬಂತು. ಆದರೆ ಇಲ್ಲಿನ ಸಮಸ್ಯೆ ಎಂದರೆ, ನೀರಾವರಿ ಇಲಾಖೆಯ ಮೂಲಕ



ಕೃಷ್ಣಾ ಭಾಗ್ಯ ಜಲ ನಿಗಮಕ್ಕೆ ಈಗಾಗಲೆ ವಾರ್ಷಿಕ ಅನುದಾನ ಬಿಡುಗಡೆಯಾಗಿದ್ದು, ಅದರ ಯೋಜನೆ ಮತ್ತು ಕಾಮಗಾರಿಗಳು ಆರಂಭವಾಗಿವೆ. ನೀರಾವರಿ ಇಲಾಖೆಯಲ್ಲಿರುವ ಈ ಅನುದಾನದಿಂದ ಇಂತಹ ಪೂರ್ವನಿಗದಿತ ಕಾಮಗಾರಿಗಳನ್ನಷ್ಟೇ ನಿಭಾಯಿಸಬಹುದು. ಇದೇ ಹಣದಲ್ಲಿ ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ. ಯೋಜನೆಯನ್ನು ಸಹ ನಿರ್ವಹಿಸಿರಿ ಎಂದರೆ ಇದು ನೆಪಮಾತ್ರಕ್ಕೆ ರೂಪಿಸಿರುವ ಯೋಜನೆ ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ನೀಡಿರುವ 250 ಕೋಟಿ ರೂಪಾಯಿಯನ್ನು ಬೇರೆಡೆಗೆ ತಿರುಗಿಸುವ ಹುನ್ನಾರ ಎಂಬುದು ದಲಿತ ರೈತರ ಅನುಮಾನ.

ಸಮಾಜ ಕಲ್ಯಾಣ ಇಲಾಖೆ ಸಿದ್ಧಪಡಿಸಿರುವ ಯೋಜನೆಯ ಪ್ರಕಾರ ಸದರಿ ಯೋಜನೆಯ ಮೂಲಕ ಕೃಷ್ಣಾ ನದಿ ಅಚ್ಚುಕಟ್ಟು ಮತ್ತು ಕೃಷ್ಣಾ ಜಲಭಾಗ್ಯ ನಿಗಮದ ವ್ಯಾಪ್ತಿಗೆ ಬರುವ ದಲಿತ ರೈತರಿಗೆ "ಗಂಗಾ ಕಲ್ಯಾಣ ಯೋಜನೆ" ಅನ್ವಯ ಬೋರ್‌ವೆಲ್ ಬಾವಿಗಳು [illegible] ಸೌಲಭ್ಯ ವಂಚಿತ ರೈತರಿಗೆ ಮತ್ತು ಕಾಲುವೆ ಕೊನೆ ಭಾಗದ ರೈತರಿಗೆ ಹೊಸ ಕಾಲುವೆ ನಿರ್ಮಾಣ; ಕೆರೆಯ ಹೂಳೆತ್ತುವಿಕೆ ಮತ್ತು ಕೃಷಿ ಹೊಂಡಗಳ ನಿರ್ಮಾಣ ಸೇರಿದಂತೆ ಅನೇಕ ಯೋಜನೆಗಳಿವೆ. ಆದರೆ ಯೋಜನಾ ಇಲಾಖೆ ಮತ್ತು ನೀರಾವರಿ ಇಲಾಖೆಯ ಜಂಟಿ ಅಡ್ಡಿಯ ಮೂಲಕ ದಲಿತ ರೈತರಿಗೆ ಈ ಯೋಜನೆ ನೀರಮೇಲಣ ಗುಳ್ಳೆಯಾಗಿದೆ.


ಈ ಹಿಂದೆ ಕೃಷ್ಣಾ ಭಾಗ್ಯ ಜಲ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಎ.ಪಿ. ಜೋಷಿಯವರು ಈ ಯೋಜನೆಯ ಹಣವನ್ನು ತಡೆ ಹಿಡಿಯಲು ಒಪ್ಪದ ಕಾರಣ ಅವರನ್ನು ವರ್ಗಾಯಿಸಿ ಆ ಜಾಗಕ್ಕೆ ಪಿ.ಟಿ. ಮಹಿಷಿ ಎಂಬುವವರನ್ನು ತಂದಿರುವುದು ಸಹ ರೈತರ ಅಸಮಾಧಾನಕ್ಕೆ ಕಾರಣವಾಗಿದೆ. ಭಾರೀ ಜಾಹೀರಾತು ನೀಡಿ ದಲಿತರನ್ನು ಮರುಳು ಮಾಡಿದ ಕುಮಾರಸ್ವಾಮಿ ಸರ್ಕಾರ ಮತ್ತು ಜಲಸಂಪನ್ಮೂಲ ಸಚಿವ [illegible] ಈ ಯೋಜನೆಗೆ ತಾವೇ ಅಡ್ಡಗಾಲು ಹಾಕಿದ್ದಾರೆ.

ಬಲಗೈನಿಂದ ಕೊಟ್ಟಿದ್ದಕ್ಕೆ ಭಾರೀ ಪ್ರಚಾರ ಪಡೆದು ಅದನ್ನು ಎಡಗೈ [illegible] ಯಾವ ಉದ್ದೇಶಕ್ಕಾಗಿ ಎಂದು ತಿಳಿಯದ ದಲಿತ ರೈತರು [illegible]. ಜಮೀನಿಗೆ ನೀರು ಕೊಡುತ್ತೇ [illegible]

-ವರದಿಗಾರ

ತುಮಕೂರು ಕಾಂಗ್ರೆಸ್


ಧರ್ಮಪಾಲನ ಅಧರ್ಮದ ಕೆಲಸಗಳು...



ಧರ್ಮಪಾಲ್ ಏನಿಲ್ಲವೆಂದರೂ ಅರವತ್ತು-ಎಪ್ಪತ್ತು ಕೋಟಿ ಆಸ್ತಿ-ಪಾಸ್ತಿಗಳ ಒಡೆಯ. ಧರ್ಮಪಾಲ್ ಹೀಗೆ 'ಸಿರಿವಂತ'ನಾಗಲು ಮಾಡಿದ ಚಾರ್ ಸೋ ಬೀಸ್ ಕೆಲಸಗಳು, ರಾಜಕೀಯದ ರಂಗಿನಾಟ ಗಳು ಒಂದೆರಡಲ್ಲ. ಇಲ್ಲಾ ಅಂದರೆ ಪಾವಗಡದಂತಹ ಬರದ ಸೀಮೆಯಲ್ಲಿ ಕೋಟಿಗಳ ಲೆಕ್ಕದಲ್ಲಿ ಬೆಳೆಯುವುದೆಂದರೆ ಸುಮ್ಮನೆ ಮಾತಾ? ಧರ್ಮಪಾಲ್ ಬೆಳವಣಿಗೆಯೆಂಬುದು ಪಕ್ಕಾ ತೆಲುಗು ಕಮರ್ಷಿಯಲ್ ಸಿನಿಮಾಗಳ ಶೈಲಿಯದು...

ಪಾವಗಡದ ಅಬ್ಕಾರಿ ಉದ್ಯಮಿ ಜಿ.ಎಸ್. ಧರ್ಮಪಾಲ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷನಾಗಿ ನೇಮಕವಾಗಿದ್ದಾನೆ. ಅಲ್ಲಿಗೆ ಮಾಜಿ ಶಾಸಕ ವೆಂಕಟರವಣಪ್ಪ ಮತ್ತು ಜಿ.ಎಸ್. ಧರ್ಮಪಾಲ್ ನಡುವೆ ನಡೆಯುತ್ತಿದ್ದ ಮುಸುಕಿನ ಗುದ್ದಾಟದಲ್ಲಿ ಧರ್ಮಪಾಲ್ ಗೆದ್ದಂತಾಗಿದೆ. ಆದರೆ ತಾಲ್ಲೂಕಿನ ಕಾಂಗ್ರೆಸ್ಸಿಗರ ಪಾಲಿಗೆ ಧರ್ಮಪಾಲ್ ನೇಮಕಾತಿಯೆಂಬುದು ಗಂಟಲಲ್ಲಿ ಕಡುಬು ತುರುಕಿದಂತಾಗಿದೆ. ಈ ಧರ್ಮಪಾಲ್ ತಾಲ್ಲೂಕಿನ ಪ್ರಮುಖ ಕಾಂಗ್ರೆಸ್ ಮುಖಂಡರಲ್ಲೊಬ್ಬನಾಗಿದ್ದರೂ ಈತ ಕಾಂಗ್ರೆಸ್‌ಗೆ ಕೊಟ್ಟಿದ್ದಕ್ಕಿಂತ ಕಾಂಗ್ರೆಸ್‌ನಿಂದ ಪಡೆದುಕೊಂಡದ್ದೇ ಹೆಚ್ಚು.

ಧರ್ಮಪಾಲ್ ತನ್ನ ಅಕ್ರಮ ದಂಧೆಗಳ ನೆಟ್‌ವರ್ಕನ್ನು ಮ್ಯಾನೇಜ್ ಮಾಡಲು ಕುಡುಕರು, ಲಂಪಟರು, ರೌಡಿಗಳನ್ನಿಟ್ಟುಕೊಂಡು ಆಟವಾಡುತ್ತಾನೆ. ಕಾವಲಕೇರಿ ಹನುಮಂತಪ್ಪನಂತಹ ಲೋಕಲ್ ರೌಡಿ ಗೆಟಪ್ಪಿನವರೂ, ಅಲ್ಲೂರಪ್ಪ, ಗುರಪ್ಪ, ಭಂಗಿ ಸೀನನಂತಾ ಎಡಬಿಡಂಗಿಗಳನ್ನು ಸಾಕಿಕೊಂಡಿದ್ದಾನೆ. ಅಂದಹಾಗೆ ಇದು ಲೋಕಲ್ ಸೀನಿಗೆ ಮಾತ್ರ. ಹಿಂದೆಲ್ಲಾ ತನ್ನ ಬಹುತೇಕ ದಂಧೆಗಳು, ವ್ಯವಹಾರ ಇತ್ಯರ್ಥಕ್ಕಾಗಿ ಪರಿಟಾಲ ರವಿಯ ಹೆಸರನ್ನೇ ಬಳಸುತ್ತಿದ್ದ. ಧರ್ಮಪಾಲ್‌ನನ್ನು ಎದುರು ಹಾಕಿಕೊಳ್ಳುವವರಿಗೆ 'ಪರಿಟಾಲ ರವಿ' ಎಂಬ ಹೆಸರೇ ದೊಡ್ಡ ಥ್ರೆಟ್ ಆಗಿತ್ತು.



ಗುರಪ್ಪ

2004 ರಲ್ಲಿ ನಕಲಿ ನಕ್ಸಲೀಯ ನರಸಿಂಹರೆಡ್ಡಿ ಅಲಿಯಾಸ್ ಶೇಖರ್ ಎಂಬಾತ ಧರ್ಮಪಾಲ್‌ನನ್ನು ಕಿಡ್ನಾಪ್ ಮಾಡಿ ಹೊಸಪಾಲಿ ಹತ್ತಿರ ಇಟ್ಟುಕೊಂಡು ಸರಿಸುಮಾರು 28 ಲಕ್ಷ ರೂ. ವಸೂಲು ಮಾಡಿದ್ದ. ಧರ್ಮಪಾಲ್ ಮನೆಯವರು ಕಂಪ್ಲೇಂಟ್ ಕೊಡದಿದ್ದರೂ ಪೊಲೀಸರೇ ಪ್ರಕರಣ ದಾಖಲಿಸಿಕೊಂಡಿದ್ದರು. ಇದಾದ ನಂತರ ಬಳ್ಳಾರಿ ಪೊಲೀಸರು ಈ ನರಸಿಂಹರೆಡ್ಡಿಯನ್ನು ಬಂಧಿಸಿದರು. ಪಾವಗಡ ಪೊಲೀಸರು ಯರ್ರಮ್ಮನಹಳ್ಳಿಯ ಬೆಟ್ಟದಲ್ಲಿ ವೆಪನ್ಸ್ ಡಂಪ್ ಮಾಡಿದ್ದಾನೆ ಅಂತ ಎನ್‌ಕೌಂಟರ್‌ನಲ್ಲಿ ಆತನನ್ನು ಮುಗಿಸಿದ್ದರು. ಆಗ ಧರ್ಮಪಾಲ್ ಪೊಲೀಸರಿಗೆ 15 ಲಕ್ಷ ಕೊಟ್ಟು ಈ ಕೆಲಸ ಮಾಡಿಸಿದ್ದಾನೆಂಬ ವದಂತಿ ತಾಲ್ಲೂಕಿನಾದ್ಯಂತ ಹರಡಿತ್ತು.

ಹುಸೇನ್‌ಪುರ ತಿಮ್ಮಾರೆಡ್ಡಿ ಹತ್ಯೆ ಪ್ರಕರಣದಲ್ಲಿ ಭಾಗಿಯಾಗಿದ್ದ ವೆಂಕಟೇಶ್ ನಾಯ್ಡು, ಕೂಡಾ ಧರ್ಮಪಾಲ್‌ಗೆ ಹಣ ಕೊಡುವಂತೆ ಬ್ಲ್ಯಾಕ್‌ಮೇಲ್ ಮಾಡಲಾರಂಭಿಸಿದಾಗ ಧರ್ಮಪಾಲ್ ಹುಸೇನ್‌ಪುರ ತಿಮ್ಮಾರೆಡ್ಡಿ ಪ್ರಕರಣದ ಕುರಿತು ಮಾತುಕತೆ ನಡೆಸುವ ನೆಪದಲ್ಲಿ ವೆಂಕಟೇಶ್ ನಾಯ್ಡುನನ್ನು ಕರೆಸಿಕೊಂಡು ಪಾವಗಡ ಪೊಲೀಸರ ಅತಿಥಿಯಾಗುವಂತೆ ನೋಡಿಕೊಂಡನೆಂದೂ; ಹಾಗೆ ಬಂಧಿತನಾದ ವೆಂಕಟೇಶ್ ನಾಯ್ಡುನನ್ನು ಆಂಧ್ರದಲ್ಲಿದ್ದ ಕೇಸುಗಳಿಗೆ ಹಾಜರುಪಡಿಸುವ ಸಂದರ್ಭದಲ್ಲಿ ಧರ್ಮಾವರಂ ಪೊಲೀಸರಿಂದ ಎನ್‌ಕೌಂಟರ್ ಮಾಡಿಸಿದನೆಂಬ ವದಂತಿಗಳೂ ಹರಡಿದ್ದವು. ಈ ಪ್ರಕರಣದಲ್ಲಿ ಮಾಜಿ ಶಾಸಕ ವೆಂಕಟರವಣಪ್ಪನ, ಹೆಸರೂ ಕೇಳಿ ಬಂದಿತ್ತಲ್ಲದೇ ಪರಿಟಾಲ ರವಿಯೇ ಇದರ ಸೂತ್ರಧಾರ ಎಂದೇ ಹೇಳಲಾಗುತ್ತಿತ್ತು.

ಈ ಕಾರಣಗಳಿಂದಾಗಿಯೇ ನರಸಿಂಹರೆಡ್ಡಿಯ ಸಹೋದರರ ಕಡೆಯಿಂದ ಹಾಗೂ ವೆಂಕಟೇಶ್ ನಾಯ್ಡುನ ಸಹಚರರ ಕಡೆಯಿಂದ ಈಗ ಧರ್ಮಪಾಲ್ ಪ್ರಾಣ ಬೆದರಿಕೆ ಎದುರಿಸುತ್ತಿದ್ದಾನೆ. ಜೊತೆಗೆ ಅನಂತಪುರ ಜಿಲ್ಲೆಯ ಭಾನುಕೋಟ ಕೃಷ್ಣ ಎಂಬ ಮತ್ತೊಬ್ಬ ನಕಲಿ ನಕ್ಸಲೀಯನೂ ಇತ್ತೀಚೆಗೆ ಬೆದರಿಕೆ ಹಾಕಿದ್ದನೆಂದು ಹೇಳಲಾಗುತ್ತಿದೆ. ಧರ್ಮಪಾಲ್ ಈ ಆತಂಕದ ಪರಿಸ್ಥಿತಿಯನ್ನೆದುರಿಸಲು ಎರಡು ತಿಂಗಳ ಕೆಳಗೆ ಮನೆಯಲ್ಲಿ 25 ಲಕ್ಷ ರೂ. ಕಳ್ಳತನವಾಗಿದೆಯೆಂದು ದೂರು ನೀಡಿದ್ದಲ್ಲದೇ ಅದೇ ನೆಪದಲ್ಲಿ ಸೆಕ್ಯೂರಿಟಿಯನ್ನು ಪಡೆದುಕೊಂಡಿದ್ದಾನೆ.

ಹಾಗೆ ನೋಡಿದರೆ ಇತ್ತೀಚೆಗೆ ಧರ್ಮಪಾಲ್‌ನ ರಾಜಕೀಯ ಪ್ರಭಾವ ಮಸುಕಾಗುತ್ತಿತ್ತು. ಒಂದು ಕಡೆ ಮಾಜಿ ಶಾಸಕ ವೆಂಕಟರವಣಪ್ಪ ಪ್ರತ್ಯೇಕವಾಗಿ ಕಾಂಗ್ರೆಸ್ ಲಿಂಕುಗಳನ್ನು ಮೆಯಿಂಟೇನ್ ಮಾಡುತ್ತಿದ್ದರೆ, ಇನ್ನೊಂದು ಕಡೆ ಧರ್ಮಪಾಲ್‌ಗೆ ಪಟ್ಟಣ ಪಂಚಾಯ್ತಿಯ ಮೇಲಿದ್ದ ಗ್ರಿಪ್ ಕೈತಪ್ಪಿ ಹೋಗಿತ್ತು. ಈ ಮಧ್ಯೆ ಶ್ರೀ ಶನಿ ಮಹಾತ್ಮ ಕಾರ್ಯ ನಿರ್ವಾಹಕ ಸಂಘದ ಅಧ್ಯಕ್ಷಗಿರಿಗೆ ಹಲವು ಅಡೆತಡೆಗಳು ಎದುರಾಗಿದ್ದವು. ಈ ಸಮಸ್ಯೆಗಳ ಜೊತೆ ಮುನ್ಸಿಪಲ್ ಚುನಾವಣೆಗಳೂ ಸಮೀಪಿಸಿ ಒತ್ತಡ ಹೆಚ್ಚಿಸಿದ್ದವು. ಇಂತಹ ಸಂಕೀರ್ಣ ಪರಿಸ್ಥಿತಿಯಲ್ಲಿ ಧರ್ಮಪಾಲ್ ಮಡಿಲಿಗೆ ಬ್ಲಾಕ್ ಕಾಂಗ್ರೆಸ್‌ನ ಅಧ್ಯಕ್ಷಗಿರಿ ಸಿಕ್ಕಿದೆ. ಆದರೆ ಇದರಿಂದ ತಾಲ್ಲೂಕು ಕಾಂಗ್ರೆಸ್ಸಿಗೆ ಆಗುವ ಪ್ರಯೋಜನವೇನು?

ತನ್ನ ಪ್ರಭಾವದಿಂದ ಏನಾದರೂ ಜಾದೂ ಮಾಡಲಿಕ್ಕೆ ಧರ್ಮಪಾಲ್ ಸತ್ಯಹರಿಶ್ಚಂದ್ರನೇನೂ ಅಲ್ಲ. ಈತ ಹೆಸರಿಗಷ್ಟೇ ಧರ್ಮಪಾಲ್. ಲಾಗಾಯ್ತಿನಿಂದಲೂ ಮಾಡಿದ್ದೆಲ್ಲಾ ಶುದ್ಧ ಅಧರ್ಮದ ಕೆಲಸಗಳನ್ನೇ. ಇಡೀ ಪಾವಗಡ ತಾಲ್ಲೂಕಿನಲ್ಲೇ ಏಕಮೇವಾದ್ವಿತೀಯ ಸಾಹುಕಾರನಾಗಿರುವ ಧರ್ಮಪಾಲ್ ಸರಿಸುಮಾರು 18 ವರ್ಷಗಳ ಕಾಲ ಪಟ್ಟಣ ಪಂಚಾಯ್ತಿಯ ಅಧ್ಯಕ್ಷಗಿರಿ ಅನುಭವಿಸಿರುವಾತ. ಕಳೆದ ಎಂಟು ವರ್ಷಗಳಿಂದ ಶ್ರೀ ಶನಿಮಹಾತ್ಮ ಕಾರ್ಯನಿರ್ವಾಹಕ ಸಂಘ (ಎಸ್.ಎಸ್.ಕೆ.)ದ ಅಧ್ಯಕ್ಷಗಿರಿಗೆ ಫೆವಿಕಾಲ್ ಅಂಟಿಸಿಕೊಂಡು ಕುಳಿತಿರುವಾತ. ಒಂದಷ್ಟು ವರ್ಷಗಳ ಕಾಲ ಜಿಲ್ಲಾ ಕಾಂಗ್ರೆಸ್ ಖಜಾಂಚಿಯಾಗಿ ಸೇವೆ ಸಲ್ಲಿಸಿರುವಾತ.

ಧರ್ಮಪಾಲ್ ಈ ಕ್ಷಣಕ್ಕೆ ಏನಿಲ್ಲವೆಂದರೂ ಅರವತ್ತು-ಎಪ್ಪತ್ತು ಕೋಟಿಗಳಷ್ಟು ಬೆಲೆ ಬಾಳುವ ಆಸ್ತಿ-ಪಾಸ್ತಿಗಳ, ವ್ಯಾಪಾರ-ವಹಿವಾಟಿನ ಒಡೆಯ. ಧರ್ಮಪಾಲ್ ಹೀಗೆ 'ಸಿರಿವಂತ'ನಾಗಲು ಅನುಸರಿಸಿದ ಕುತಂತ್ರಗಳು, ಮಾಡಿದ ಚಾರ್ ಸೋ ಬೀಸ್ ಕೆಲಸಗಳು, ರಾಜಕೀಯದ ರಂಗಿನಾಟಗಳು ಒಂದೆರಡಲ್ಲ. ಇಲ್ಲಾ ಅಂದರೆ ಪಾವಗಡದಂತಹ ಬರದ ಸೀಮೆಯಲ್ಲಿ ಕೋಟಿಗಳ ಲೆಕ್ಕದಲ್ಲಿ ಬೆಳೆಯುವುದೆಂದರೆ ಸುಮ್ಮನೆ ಮಾತಾ? ಧರ್ಮಪಾಲ್ ಬೆಳವಣಿಗೆಯೆಂಬುದು ಪಕ್ಕಾ ತೆಲುಗು ಕಮರ್ಷಿಯಲ್ ಸಿನಿಮಾಗಳ ಶೈಲಿಯದು.

ಅಲ್ಲಾವುದ್ದೀನನ ಜಾದೂ

ಗುಂಡಾರ್ಲಹಳ್ಳಿ ಶಂಕರಶೆಟ್ಟಿ ಸಂಭಾವಿತರು. ಪಾವಗಡದಲ್ಲೊಂದು ಕಡಲೆಕಾಯಿ ಸುಲಿಯುವ ಮಿಲ್ಲು ನಡೆಸುತ್ತಿದ್ದರು. ಸ್ವಲ್ಪ ದಿನಗಳ ನಂತರ ಅದನ್ನೇ ಆಯಿಲ್ ಮಿಲ್ಲಾಗಿ ಪರಿವರ್ತಿಸಿದರು. ಇದ್ದ ಮೂವರು ಮಕ್ಕಳಲ್ಲಿ ಹಿರಿಯನಾಗಿದ್ದ ಜಿ.ಎಸ್. ಧರ್ಮಪಾಲ್ ಮನೆಯ, ವ್ಯವಹಾರದ ಜವಾಬ್ದಾರಿ ವಹಿಸಿಕೊಂಡ ನಂತರ ಎಲ್ಲಾ ಅಲ್ಲಾವುದ್ದೀನನ ಅದ್ಭುತ ದ್ವೀಪದಂತೆ ಬದಲಾಗುತ್ತಾ ಹೋಯಿತು.

ಮೊದಮೊದಲಿಗೆ ತಾಲ್ಲೂಕಿನಾದ್ಯಂತ ಹೆಂಡ ಸರಬರಾಜು ಮಾಡಲಾರಂಭಿಸಿದ ಧರ್ಮಪಾಲ್, ಹೆಂಡ ನಿಷೇಧವಾದ ನಂತರ ಸಾರಾಯಿ ಕಾಂಟ್ರಾಕ್ಟ್‌ಗಿರಿ ದಕ್ಕಿಸಿಕೊಂಡ. ಇಡೀ ತಾಲ್ಲೂಕಿನ ಜನರಿಗೆ ಸಮೃದ್ಧವಾಗಿ ಸಾರಾಯಿ ಕುಡಿಸಿ ತನ್ನ ತಿಜೋರಿಯನ್ನು ತುಂಬಿಸಿಕೊಳ್ಳಲಾರಂಭಿಸಿದ. ಧರ್ಮಪಾಲ್ ಇವತ್ತು ಏನೆಲ್ಲಾ ಆಗಿರುವುದಕ್ಕೆ ಮೂಲ ಬಂಡವಾಳವೇ ಈ ಸಾರಾಯಿ ಕಾಂಟ್ರಾಕ್ಟ್‌ಗಿರಿ.

ಆರಂಭದಲ್ಲಿ ಜನತಾ ಪಕ್ಷದಲ್ಲಿದ್ದ ಧರ್ಮಪಾಲ್ ಅದು ಮೊದಲ ಬಾರಿಗೆ ವಿಭಜನೆ ಆದಾಗ ಕಾಂಗ್ರೆಸ್‌ನಲ್ಲಿ ಸಕ್ರಿಯವಾಗಿದ್ದ ಎಸ್.ವಿ.ಆರ್. ಜೊತೆ ತಿರುಗಾಡಲಾರಂಭಿಸಿದ. ಕಾಂಗ್ರೆಸ್‌ನಲ್ಲಿ ನಿಧಾನವಾಗಿ ನೆಲೆಯೂರಿ ಪಟ್ಟಣ ಪಂಚಾಯ್ತಿಯ ಸದಸ್ಯನಾಗಿ, ಅಧ್ಯಕ್ಷನಾಗಿ ಪ್ರತಿಷ್ಠಾಪಿಸಲ್ಪಟ್ಟ. ನಂತರ ಸತತ ಹದಿನೆಂಟು ವರ್ಷಗಳ ಕಾಲ ಅಂದರೆ 2001 ರವರೆಗೆ ಹಿಂತಿರುಗಿ ನೋಡಲೇ ಇಲ್ಲ. ಬಹುಶಃ ಇಡೀ ರಾಜ್ಯದಲ್ಲೇ ಸತತ 18 ವರ್ಷಗಳ ಕಾಲ ಪಟ್ಟಣ ಪಂಚಾಯ್ತಿಯೊಂದರ ಅಧ್ಯಕ್ಷ ಸ್ಥಾನದಲ್ಲಿ ಕುಳಿತ ಏಕೈಕ ವ್ಯಕ್ತಿ ಈತನೇ ಎಂದರೆ ಅಚ್ಚರಿಯೇನಿಲ್ಲ.



ಧರ್ಮಪಾಲ ಹೊಸದಾಗಿ ನಿರ್ಮಿಸುತ್ತಿರುವ ಕಾಂಪ್ಲೆಕ್ಸ್

ಈತ ಅಧಿಕಾರದಲ್ಲಿದ್ದ ಅಷ್ಟೂ ವರ್ಷಗಳ ಕಾಲ ಮಾಡಿದ ಕೆಲಸವೆಂದರೆ ಇಡೀ ಪಟ್ಟಣ ಪಂಚಾಯ್ತಿಯನ್ನು ಅಪೋಶನ ತೆಗೆದುಕೊಂಡದ್ದು. ಪಟ್ಟಣ ಪಂಚಾಯ್ತಿಗೆ ಬರುವ ಅನುದಾನಕ್ಕೆಲ್ಲಾ ನೆಪಮಾತ್ರದ ಸ್ಕೀಮುಗಳನ್ನು ರೂಪಿಸಿ ಭರ್ಜರಿ ಭೋಜನಕ್ಕೆ ಶುರುವಿಟ್ಟುಕೊಂಡ. ಜೊತೆಗೆ ವೆಂಕಟರಮಣ, ನರಸಿಂಹಮೂರ್ತಿ ಎಂಬಿಬ್ಬರು ಭಂಟರಿಗೆ ಬೇನಾಮಿ ಕಾಂಟ್ರಾಕ್ಟುಗಳ ಉಸ್ತುವಾರಿ ವಹಿಸಿದ. ಬಂಡವಾಳವನ್ನೆಲ್ಲಾ ಈತನೇ ಹಾಕಿ ಕಾಮಗಾರಿಗಳನ್ನು ಮಾಡಿಸುತ್ತಿದ್ದ. ಬಂದ ಹಣದಲ್ಲಿ ವೆಂಕಟರಮಣ ಮತ್ತು ನರಸಿಂಹಮೂರ್ತಿಗೆ ಟಿಪ್ಸ್ ರೂಪದ ಭಿಕ್ಷೆ ಹಾಕಿ ಉಳಿದದ್ದನ್ನೆಲ್ಲಾ ತನ್ನ ತಿಜೋರಿಗೆ ತುಂಬುತ್ತಾ ಬಂದ.

ಕೋಟಿಗಟ್ಟಲೇ ನುಂಗಿದ

ನಾಗಲಮಡಿಕೆಯ ಉತ್ತರ ಪಿನಾಕಿನಿ ನದಿಯಿಂದ ಪಾವಗಡ ಪಟ್ಟಣಕ್ಕೆ 13 ಕೋಟಿ ರೂ. ವೆಚ್ಚದ ಕುಡಿಯುವ ನೀರು ಪೂರೈಕೆ ಯೋಜನೆ ರೂಪಿಸಿದ್ದಲ್ಲದೇ ಅದರ ಕಾಂಟ್ರಾಕ್ಟು ವರ್ಕುಗಳನ್ನು ಧರ್ಮಪಾಲ್, ಶಾಸಕ ವೆಂಕಟರವಣಪ್ಪ ಹಾಗೂ ಪರಿಟಾಲ ರವಿ ಕಡೆಯವರು ಮಾಡಿ ಮೂರ್‍ನಾಲ್ಕು ಕೋಟಿಗಳಿಗೆ ನಾಮವಿಟ್ಟರು. ಇಡೀ ಯೋಜನೆಯೀಗ ನಿಷ್ಪ್ರಯೋಜಕವಾಗಿದೆ. ಇದರಿಂದ ಪಾವಗಡಕ್ಕೆ ಹನಿ ನೀರು ಹರಿದು ಬರುತ್ತಿಲ್ಲ. ಅಂತಹ ಉಸಾಬರಿಗಳೊಂದಿಗೆ ಧರ್ಮಪಾಲ್‌ಗೂ ಕೆಲಸವಿಲ್ಲ. ತನಗೆ ಸಿಕ್ಕಿದಷ್ಟು ದೋಚಿಕೊಂಡದ್ದೇ ಲಾಭ. 2002-04 ರಲ್ಲಿ ಈತನ ಭಂಟ ರಾಮಾಂಜಿನಪ್ಪ ಪಟ್ಟಣ ಪಂಚಾಯ್ತಿಯ ಅಧ್ಯಕ್ಷನಾಗಿದ್ದಾಗ ನೀರು ಪೂರೈಕೆ ಹಾಗೂ ಚರಂಡಿ ಕಾಮಗಾರಿಗಳನ್ನು ಮಾಡಿಸಿದ ಹಳೇ ಬಿಲ್ಲುಗಳ ನೆಪದಲ್ಲಿ ಅನಾಮತ್ತು 90 ಲಕ್ಷ ಬಿಡುಗಡೆ ಮಾಡಿಸಿಕೊಂಡ.



ಧರ್ಮಪಾಲನ ಒಡೆತನದಲ್ಲಿರುವ ಮಾರುತಿ ಚಿತ್ರಮಂದಿ

ಅದಕ್ಕೂ ಮೊದಲು ಹೊಸ ಬಸ್ ಸ್ಟಾಂಡ್ ನಿರ್ಮಾಣ ಕಾಮಗಾರಿಯಲ್ಲೂ ಲಕ್ಷಾಂತರ ರೂ. ಬಾಚಿಕೊಂಡ. ಅಂದಾಜು ಒಂದು ಕೋಟಿ ರೂ. ವೆಚ್ಚದ ಈ ಕಾಮಗಾರಿ ಕೈಗೆತ್ತಿಕೊಳ್ಳುವಾಗ ಸರ್ಕಾರಿ ಅನುದಾನ ಇದ್ದದ್ದು 3 ಲಕ್ಷ, ಎಂ.ಪಿ. ಫಂಡು 10 ಲಕ್ಷ ಮಾತ್ರ. ಧರ್ಮಪಾಲ್ ವ್ಯಾಪಾರಿಗಳಿಂದ ಇಲ್ಲಿ ನಿರ್ಮಿಸಲಾಗಿರುವ ಮಳಿಗೆಯೊಂದಕ್ಕೆ ತಲಾ 3 ರಿಂದ 5 ಲಕ್ಷ ದವರೆಗೆ ಅಡ್ವಾನ್ಸ್ ಪಡೆದು ಬಸ್‌ಸ್ಟಾಂಡ್ ಕಾಮಗಾರಿ ಕೈಗೆತ್ತಿಕೊಂಡ. 300 ರೂ. ಇದ್ದ ಗ್ರಾವೆಲ್‌ಗೆ 700 ರೂ., 90 ರೂ. ಇದ್ದ ಸಿಮೆಂಟಿಗೆ 130 ರೂ... ಹೀಗೆ ಒಂದಕ್ಕೆ ಎರಡು ಪಟ್ಟು ರೇಟು ಹಾಕಿ ಏನಿಲ್ಲವೆಂದರೂ 30-40 ಲಕ್ಷದಷ ಗಿಂಜಿಕೊಂಡ.

ಬಸ್‌ಸ್ಟಾಂಡನ್ನು ಟೌನ್ ಪ್ಲ್ಯಾನಿಂಗ್‌ನ ಪ್ರಕಾ ನಿರ್ಮಿಸದೆ ಈಗ ಬಸ್‌ಸ್ಟಾಂಡ್‌ಗೆ ಹೊಂದಿಕೊಂಡಿ ರುವ ತನ್ನ ನಿವೇಶನಗಳಿಗೆ ವ್ಯಾವಹಾರಿಕವಾ ಲಾಭದಾಯಕವಾಗುವಂತೆ ನಿರ್ಮಿಸಿದ. ಇದಕ ಸಾಕ್ಷಿಯೆಂಬಂತೆ ಆಗ ಕೋಟ್ಯಂತರ ರೂಪಾಯಿ ಬಂಡವಾಳ ಹಾಕಿ ವಾಣಿಜ್ಯ ಸಂಕೀರ್ಣವೊಂದನ್ನು ಕಟ್ಟಿಸ ತ್ತಿದ್ದಾನೆ. ತನ್ನ ದಂಧೆಗಳಿಗೆ ಬೆಂಬಲವಾಗಿ ನಿಲ್ಲು ಗುರಪ್ಪ ಎಂಬಾತನಿಗೆ ಹೊಸ ಬಸ್‌ಸ್ಟಾಂಡ್ ಮುಂಭಾ ಗದ 48 ಅಡಿ ಅಗಲದ ಹಳ್ಳವನ್ನು ಒತ್ತುವರಿ ಮಾಡಿ ಕೊಳ್ಳಲು ಸಹಕರಿಸಿದ್ದಲ್ಲದೇ ಅಕ್ರಮವಾಗಿ ಕೋಟ್ಯಂತ ಬೆಲೆ ಬಾಳುವ ವಾಣಿಜ್ಯ ಮಳಿಗೆಗಳ ನಿರ್ಮಾಣ ಗ್ರೀನ್ ಸಿಗ್ನಲ್ ತೋರಿಸಿದ್ದ. 48 ಅಡಿ ಅಗಲ ಹಳ್ಳವೀಗ ಗುರಪ್ಪನ ವಾಣಿಜ್ಯ ಸಂಕೀರ್ಣದಲ್ಲಿ ಲೀನವಾ 8 ಅಡಿ ಚರಂಡಿ ಮಾತ್ರ ಉಳಿದಿದೆ.

ಸ್ವಹಿತಾಸಕ್ತಿಗಳನ್ನು ಪ್ರಧಾನವಾಗಿರಿಸಿಕೊಂಡ ಬಸ್‌ಸ್ಟಾಂಡ್ ನಿರ್ಮಿಸುತ್ತಿದ್ದ. ಧರ್ಮಪಾಲ್ ತ ಅಧಿಕಾರಾವಧಿ ಮುಗಿಯುವ ಸಮಯ ಬಂದಾ ಇನ್ನೂ ಅರೆಬರೆ ಕಾಮಗಾರಿ ಕೆಲಸ ಉಳಿದಿ ಬಸ್‌ಸ್ಟಾಂಡ್‌ನ್ನು ತರಾತುರಿಯಲ್ಲಿ ಉದ್ಘಾಟಿಸಲು ಮುಂದಾದ. ಆಗ ಜೆಡಿಎಸ್‌ನ ಸೊಗಡು ವೆಂಕಟೇಶ ಕೆ.ವಿ. ಶ್ರೀನಿವಾಸ್ ಮುಂತಾದವರು ತೀವ್ರವಾಗಿ ಆಕ್ಷೇಪಿ ದ್ದರಿಂದ ಕೈಬಿಟ್ಟ. ಹೊಸ ಬಸ್‌ಸ್ಟಾಂಡ್ ಉದ್ಘಾಟಿ ತನ್ನ ಹೆಸರನ್ನು ಶಿಲಾಶಾಸನದಲ್ಲಿ ಕೆತ್ತಿಸಿಕೊಳ್ಳಬೇಕೆಂ ಧರ್ಮಪಾಲ್ ಬಯಕೆ ಈಡೇರಲಿಲ್ಲ ವಿಪರ್ಯಾಸವೆಂದರೆ ಹೊಸ ಬಸ್‌ಸ್ಟಾಂಡ್ ಮೂರ್‍ನಾಲ ವರ್ಷದಿಂದ ಸಾರ್ವಜನಿಕ ಉಪಯೋಗಕ್ಕೆ ತೆರವಾಗಿದ್ದರು ಅದಿನ್ನೂ ಅಧಿಕೃತವಾಗಿ ಉದ್ಘಾಟನೆಯ ಭಾಗ್ಯ ಕಂಡಿ

ಇದಾದ ನಂತರ ಕ್ರಮವಾಗಿ ಪೆದ್ದೀರಪ್ಪ, ರಾಮಾಂಜಿನ ಈಗ ಅನಿತಾ ಬಸ್ ಮಾಲೀಕ ಅಂಜನ್‌ಕುಮಾ ಅಲಿಯಾಸ್ ಬುಚ್ಚಿ ಅಧ್ಯಕ್ಷಗಾದಿಗೇರಿದರೂ ಬ ಸ್ಟಾಂಡನ್ನು ಉದ್ಘಾಟಿಸಲು ಧರ್ಮಪಾಲ್ ಬಿಟ್ಟ ಮುಂದಿನ ಅವಧಿಯಲ್ಲಿ ಮತ್ತೆ ಪುರಸಭೆಯ ಅಧ್ಯಕ್ಷನಾ ಶಿಲಾಶಾಸನದಲ್ಲಿ ತನ್ನ ಹೆಸರನ್ನು ಕೆತ್ತಿಸಿಯೆ ತೀರಿಸಬೇಕೆಂದು ಧರ್ಮಪಾಲ್ ಹಠ ತೊಟ್ಟಂತಿದ

ಒಟ್ಟಾರೆ ಇಡೀ ಬಸ್‌ಸ್ಟಾಂಡ್ ಕಾಮಗಾರಿಯ ಕುರಿತು ನೆಪಮಾತ್ರಕ್ಕಾದರೂ ಟೆಂಡರು ಕರೆಯದ ವ್ಯಾಪಾರಿಗಳಿಂದ ವಸೂಲು ಮಾಡಿದ್ದ ಹಣವ ಗುಳುಂ ಮಾಡಿರುವುದರಿಂದ ಈ ಬಗ್ಗೆ ಸಮಗ್ರವಾ ತನಿಖೆ ನಡೆಸುವಂತೆ ಎಸಿ, ಡಿಸಿ, ಲೋಕಾಯುಕ್ತ ಹೀಗೆ ಯಾರಿಗೆ ಮನವಿ ಮಾಡಿಕೊಂಡರೂ ಪ್ರಯೋ ನವಾಗಿಲ್ಲ.

ಪಟ್ಟಣ ಪಂಚಾಯ್ತಿಯಲ್ಲಿ ಇಷ್ಟೆಲ್ಲಾ ಬೆಳವ ಗಳಾಗಿದ್ದರೂ ಶಾಸಕ ಕೆ.ಎಂ. ತಿಮ್ಮರಾಯಪ್ಪ ಶಾಸಕಗಿರಿಗೂ, ಪಟ್ಟಣ ಪಂಚಾಯ್ತಿಗೂ ಸಂಬ ಇಲ್ಲ ಎಂದು ಭಾವಿಸಿದಂತಿದೆ.

(17ನೇ ಪುಟ

ದಾವಣಗೆರೆ ಐಟಿಐ: ಹೆಣ್ಣುಬಾಕ ಗುರುಸಿದ್ದನಿಗೆ ಧರ್ಮದೇಟು

ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾರೋಹಳ್ಳಿಯ ಶಿಕ್ಷಕ ತನ್ನ ವಿದ್ಯಾರ್ಥಿನಿಯನ್ನೇ ಕೆಣಕಲು ಹೋಗಿ ಸಾರ್ವಜನಿಕರು ಹುಚ್ಚುನಾಯಿಗೆ ಬಡಿದ ಹಾಗೆ ಬಡಿದ ಪ್ರಕರಣ ಇನ್ನೂ ಹಸಿಯಾಗಿರುವಾಗಲೇ, ದಾವಣಗೆರೆ ಸರ್ಕಾರಿ ಐಟಿಐ ತರಬೇತಿ ಸಂಸ್ಥೆಯ ಲ್ಯಾಬ್ ಟೆಕ್ನಿಷಿಯನ್ ಗುರುಸಿದ್ದೇಶ್ವರ ಪಾಟೀಲ ಎಂಬ ಹೆಣ್ಣುಬಾಕ ಇಂಥದೇ ಪ್ರಕರಣದಲ್ಲಿ ಸಿಕ್ಕಿಹಾಕಿಕೊಂಡು ಸಾರ್ವಜನಿಕರಿಂದ ಒದೆ ತಿಂದು ಜೈಲು ಪಾಲಾಗಿದ್ದಾನೆ.

ಅಕ್ಟೋಬರ್ 19ರಂದು ನಡು ಮಧ್ಯಾಹ್ನ ಈ ಗುರುಸಿದ್ದೇಶ್ವರನಿಗೆ ಸಾರ್ವಜನಿಕ ಧರ್ಮದೇಟು ದೀಳುತ್ತಾ, ಈತನ ಬಟ್ಟೆ ಹರಿದು, ಮೂಗು ತುಟಿಗಳು ಒಡೆದು ಮುಖ ಲೈಲ್ಯಾಂಡ್ ಶೇಪಿಗೆ ತಿರುಗಿದ್ದರೂ, ಇವನ ಬಗ್ಗೆ ಕರುಣೆ ತೋರಿ ಬಿಡಿಸಿಕೊಳ್ಳುವವರ್‍ಯಾರೂ ಇರಲಿಲ್ಲ. ಯಾಕೆಂದರೆ ಗುರುಸಿದ್ದೇಶ್ವರನ ಇಂಥ ಚೇಷ್ಟೆ ಇಲ್ಲಿನ ಜನರಿಗೆ ಹೊಸದಲ್ಲ ಮತ್ತು ಗುರುಸಿದ್ದನಿಗೆ ಒದೆ ಕೂಡ ಇದೇ ಮೊದಲ ಬಾರಿಯಲ್ಲ. ಈತ ಎರಡರಲ್ಲೂ ಪಳಗಿದ ಕೈ.

ಅಕ್ಟೋಬರ್ 17ರಂದು ಸಂಜೆ ತರಗತಿಗಳು ಮುಗಿದ ನಂತರ, ಗುರುಸಿದ್ದ ತನ್ನ ಬೈಕ್‌ನಲ್ಲಿ ಮನೆ ಕಡೆ ಸವಾರಿ ಹೊರಟಿದ್ದಾನೆ. ಇವನ ಅದೃಷ್ಟಕ್ಕೆ ಅದೇ ಐಟಿಐನ ವಿದ್ಯಾರ್ಥಿನಿ ಶ್ರೀಕಲಾ ತನ್ನ ಹಳ್ಳಿಗೆ ಹೋಗಲು ಬಸ್ಸಿಗಾಗಿ ಕಾಯುತ್ತಾ ಒಂಟಿಯಾಗಿ ನಿಂತಿದ್ದಾಳೆ. ತಕ್ಷಣವೆ ಗುರುಸಿದ್ದನ ಚೇಷ್ಟಾ ಪ್ರವೃತ್ತಿ ಜಾಗೃತಗೊಂಡಿದೆ. ಶ್ರೀಕಲಾಳ ಹತ್ತಿರ ಬಂದು ಬೈಕ್ ನಿಲ್ಲಿಸಿ ಅವಳನ್ನು ಮಾತನಾಡಿಸಿದ ಗುರುಸಿದ್ದ "ಬಸ್ ಬರಕ್ಕೆ ಇನ್ನೂ ಟೈಂ ಇದೆ. ಬಾ ನಮ್ಮ ಮನೆಗೆ ಹೋಗಿಬರೋಣ" ಎಂದು ಒಂದು ಬಾಣ ಬಿಟ್ಟಿದ್ದಾನೆ.

ಶ್ರೀಕಲಾ ಹೋಗುತ್ತಿದ್ದಳೋ, ಬಿಡುತ್ತಿದ್ದಳೋ. ಆದರೆ ನೆನಪಿಡಿ ಗುರುಸಿದ್ದನಂತಹ ಕಿರಾತಕರು ವಿದ್ಯಾರ್ಥಿನಿಯರಿಗೆ ಹೆದರಿಸುವುದೇ "ಇಂಟರ್‌ನಲ್ ಅಸೆಸ್‌ಮೆಂಟ್ ಮಾರ್ಕ್ಸ್" ಎಂಬ ಹೆಸರಿನಲ್ಲಿ. ಲ್ಯಾಬ್ ಟೆಕ್ನಿಷಿಯನ್ ಆಗಿದ್ದ ಗುರುಸಿದ್ದ ಇದೇ ಬಾಣವನ್ನು ಶ್ರೀಕಲಾ ಮೇಲೆ ಪ್ರಯೋಗಿಸಿದ್ದಾನೆ. ಇವನ ಮಾತಿಗೆ ಹೆದರಿದ ಶ್ರೀಕಲಾ ಮಾತನಾಡದೆ ಬೈಕ್ ಏರಿದ್ದಾಳೆ. ಆದರೆ ಗುರುಸಿದ್ದನ ಬೈಕು ಅವನ ಮನೆ ಹಾದಿ ಹಿಡಿಯುವುದರ ಬದಲು ಅಲ್ಲಿಗೆ ಸಮೀಪದ ಲೋಕಿ ಕೆರೆಯ ಗದ್ದೆಯ ಸಮೀಪಕ್ಕೆ ಬಂದು ತಲುಪಿದೆ.



ಗೂಸಾ ತಿಂದ ಗುರುಸಿದ್ದ

ಅಲ್ಲಿಗೆ ಗುರುಸಿದ್ದನ "ಇಷ್ಟಾರ್ಥ"ವನ್ನು ಅರ್ಥ ಮಾಡಿಕೊಂಡ ಶ್ರೀಕಲಾ, ಅವನನ್ನು ಬೈಕ್ ಸಮೇತ ತಳ್ಳಿ ತಪ್ಪಿಸಿಕೊಂಡು ಓಡಿದ್ದಾಳೆ. ವಿಷಯ ಬಹಿರಂಗವಾದರೆ ಅದಿನ್ಯಾವ ರಂಪವಾಗುತ್ತದೋ ಎಂದು ಆರಂಭದಲ್ಲಿ ಹೆದರಿದ ಶ್ರೀಕಲಾ ನಂತರ ನಡೆದ ವಿಷಯವನ್ನು ಸಂಸ್ಥೆಯ ಉಪನ್ಯಾಸಕಿ ರೇಣುಕಾ ಬೂದಿಹಾಳ್ ಎಂಬುವರಿಗೆ ಹೇಳಿದ್ದಾಳೆ. ಗುರುಸಿದ್ದನ ಮೇಲೆ ಪ್ರಿನ್ಸಿಪಾಲರಿಗೆ ದೂರು ನೀಡುವಂತೆ ಅವರು ಸಲಹೆ ನೀಡಿದ್ದಾರೆ. ಆದರೆ ಪ್ರಿನ್ಸಿಪಾಲರು ರಜೆ ಇದ್ದ ಕಾರಣ ಅಂದು ದೂರು ನೀಡಲಾಗಲಿಲ್ಲ.

ಈ ವಿಷಯ ಅದೇ ಸಂಸ್ಥೆಯಲ್ಲಿ ಅಧ್ಯಾಪಕರಾಗಿದ್ದ ಶ್ರೀಕಲಾಳ ಸಂಬಂಧಿ ರವಿನಾಯ್ಕ ಎಂಬುವರ ಕಿವಿಗೆ ಬಿದ್ದಿದೆ. ರವಿನಾಯ್ಕ ಗುರುಸಿದ್ದನ ಹತ್ತಿರ ಈ ವಿಷಯದ ಬಗ್ಗೆ ಮಾತನಾಡಲು ಹೋದರೆ, ಉಲ್ಟಾ ತಿರುಗಿದ ಗುರುಸಿದ್ದ ಸಂಸ್ಥೆಯ ಆವರಣದಲ್ಲೇ ತನ್ನ ಸಹೋದ್ಯೋಗಿ ರವಿನಾಯ್ಕರ ಮೇಲೆ ಹಲ್ಲೆ ಮಾಡಿದ್ದಾನೆ. ಕೊನೆಗೆ ಈ ವಿಷಯ ಯಾವಾಗ ಬೀದಿರಂಪವಾಯ್ತೊ, ಸಾರ್ವಜನಿಕರು ಪ್ರವೇಶಿಸಿದ್ದಾರೆ. ಅಕ್ಟೋಬರ್ 19ರಂದು ಗುರುಸಿದ್ದನಿಗೆ ಮುಹೂರ್ತವಿಟ್ಟ ಜನರು, ಸಂಸ್ಥೆಯಿಂದ ಗುರುಸಿದ್ದನನ್ನು ಹಿಡಿದೆಳೆದು ತಂದು ಶರ್ಟು ಬಿಚ್ಚಿಸಿ ಹಿಗ್ಗಾ-ಮುಗ್ಗಾ ಒದ್ದು ಪೊಲೀಸರ ವಶಕ್ಕೆ ಒಪ್ಪಿಸಿದ್ದಾರೆ.


ಚನ್ನಗಿರಿ ತಾಲ್ಲೂಕಿನ ಐಟಿಐನಲ್ಲಿ ಪ್ರಿನ್ಸಿಪಾಲ್ ಆಗಿದ್ದ ಗುರುಸಿದ್ದನ ತಂದೆ ಕರ್ತವ್ಯದಲ್ಲಿದ್ದಾಗಲೇ ಮೃತರಾದುದರಿಂದ ಇವನಿಗೆ ಅನುಕಂಪದ ಆಧಾರದ ಮೇಲೆ ಲ್ಯಾಬ್ ಟೆಕ್ನಿಷಿಯನ್ ಉದ್ಯೋಗ ಸಿಕ್ಕಿತು. ಚನ್ನಗಿರಿಯಲ್ಲಿ ಪೋಲಿಪುಂಡರೊಂದಿಗೆ ಉಡಾಳನಂತೆ ಅಲೆಯುತ್ತಿದ್ದ ಗುರುಸಿದ್ದ ಅಂದಿನಿಂದಲೂ ತನ್ನ ಕಲ್ಯಾಣಗುಣಗಳಿಂದ ಕುಖ್ಯಾತನೆ, ಕಳೆದ ಮೂರು ವರ್ಷದ ಹಿಂದೆ ಉದ್ಯೋಗಿಗಳು ಈವರೆಗೆ 20 ದೂರುಗಳಷ್ಟು ಪ್ರಿನ್ಸಿಪಾಲರಿಗೆ ನೀಡಿದ್ದಾರೆ. ಕೆಲವು ಉದ್ಯೋಗಿಗಳು ಇವನ ಕಿರುಕುಳ ತಾಳದೆ ವರ್ಗ ಮಾಡಿಸಿಕೊಂಡು ಹೋಗಿದ್ದಾರೆ. ಇವನಿಗೆ ಈ ಸಂದರ್ಭದಲ್ಲೆಲ್ಲಾ ಲಿಖಿತ ಎಚ್ಚರಿಕೆ ನೀಡಲಾಗಿದೆ.

ಆನಂತರ ಮಹಿಳಾ ಉದ್ಯೋಗಿಗಳ ಬೆನ್ನುಬಿಟ್ಟ ಗುರುಸಿದ್ದ ವಿದ್ಯಾರ್ಥಿನಿಯರಿಗೆ ಅಮರಿಕೊಂಡ. ಇದಲ್ಲದೆ ಐಟಿಐ ಸಮೀಪದಲ್ಲಿ ನಿರ್ಮಿಸುತ್ತಿದ್ದ ಕಟ್ಟಡ ಕಾರ್ಮಿಕ ಮಹಿಳೆಯೊಬ್ಬಳ ಮೇಲೆ ಗುರುಸಿದ್ದ ಅತ್ಯಾಚಾರಕ್ಕೆ ಯತ್ನಿಸಿದ್ದನೆಂದರೆ, ಇವನ ವಿಕೃತಿ ಎಷ್ಟರ ಮಟ್ಟಕ್ಕಿರಬಹುದು? ಪ್ರಕರಣದಲ್ಲೂ ಸಂಸ್ಥೆಯ ಮರ್ಯಾದೆಗಂಜಿದ ಪ್ರಿನ್ಸಿಪಾಲರು, ಮಹಿಳೆಗೆ ಸಮಾಧಾನ ಹೇಳಿ ಗುರುಸಿದ್ದನಿಂದ ಕ್ಷಮಾಪಣೆ ಕೇಳಿಸಿ ಇತಿಶ್ರೀ ಹಾಡಿದ್ದರು. ಆದರೆ 'ನಾಯಿ ಬಾಲ ಡೊಂಕು' ಎಂಬ ಗಾದೆಯನ್ನು ಗುರುಸಿದ್ದ ಪದೇಪದೇ ಸಾಬೀತುಪಡಿಸುತ್ತಲೇ ಬಂದ.

ಸದ್ಯಕ್ಕೆ ಗುರುಸಿದ್ದ ತನ್ನ ಮುಖ-ಮುಸುಡಿಗಾದ ಗಾಯಗಳನ್ನು ನೆಕ್ಕಿಕೊಂಡು ಜೈಲಿನಲ್ಲಿ ಕೂತಿದ್ದಾನೆ. ಇವನನ್ನು ಸಂಸ್ಥೆಯಿಂದಲೇ ವಜಾ ಮಾಡಬೇಕೆಂದು ಒತ್ತಾಯಿಸಿ ಅಕ್ಟೋಬರ್ 26ರಿಂದ ದಾವಣಗೆರೆಯ ಉಷಾ ಕೈಲಾಸದ್, ಕೈದಾಳ ಕೃಷ್ಣಮೂರ್ತಿ, ಹರೀಶ್ ನಾಯ್ಕ, ಪ್ರಕಾಶ್ ಮತ್ತು ತಾಜ್ ಎಂಬುವವರು 'ಲೈಂಗಿಕ ಕಿರುಕುಳ ವಿರೋಧಿ ಸಮಿತಿ' ಎಂಬ ಸಂಘಟನೆಯನ್ನು ರಚಿಸಿಕೊಂಡು ಹೋರಾಟಕ್ಕೆ ಇಳಿದಿದ್ದಾರೆ. ಗುರುಸಿದ್ದೇಶ್ವರ ಪಾಟೀಲನಂತಹ ಹೆಣ್ಣುಬಾಕ ಅಧ್ಯಾಪಕರು ಇನ್ನಾದರೂ ಮರ್ಯಾದೆಯಿಂದ ಬದುಕುವರೇ?



ಕಾಲೇಜು ವಿದ್ಯಾರ್ಥಿಗಳಿಂದ ಧರ್ಮದೇಟು ತಿನ್ನುತ್ತಿರುವ ಗುರುಸಿದ್ದ



ಗುರುಸಿದ್ದನನ್ನು ಕಾಲೇಜಿನಿಂದ ಹೊರಹಾಕುವಂತೆ ಒತ್ತಾಯಿಸಿ ಲೈಂಗಿಕ ಕಿರುಕುಳ ವಿರೋಧಿ ಸಮಿತಿಯವರ ಬೃಹತ್ ಪ್ರತಿಭಟನೆ

–ಚಂದ್ರಶೇಖರ ತೋರಣಘಟ್ಟ

ಅನವಟ್ಟಿ ಪಂಚಾಯ್ತಿಗೊಬ್ಬ ಯಡವಟ್ಟು ಕಾರ್ಯದರ್ಶಿ!

ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪನವರ ಅಧಿಕಾರ ಅವಧಿಯಲ್ಲಿ ನುಸುಳಿ ಈಗ ಪಳೆಯುಳಿಕೆಗಳಂತಾಗಿರುವ ಅವರ ಸರ್ಕಾರಿ ಶಿಷ್ಯರ ನುಂಗಾಟವೇ ಈ ಮಟ್ಟಕ್ಕಿದೆ. ಇನ್ನು ಅಪ್ಪಿತಪ್ಪಿ ಅಧಿಕಾರಕ್ಕೆ ಬಂದರೆ ಇನ್ಯಾವ ಪರಿ ನುಂಗಬಹುದೆಂದು ಕಲ್ಪಿಸಿಕೊಂಡೇ ಶಿವಮೊಗ್ಗ ಜಿಲ್ಲೆಯ ಅನವಟ್ಟಿ ಗ್ರಾಮದ ಜನರು ಬೆಚ್ಚಿಬಿದ್ದಿದ್ದಾರೆ.


ಇಡೀ ಶಿವಮೊಗ್ಗ ಜಿಲ್ಲೆಯಲ್ಲಿ ಅನವಟ್ಟಿ ಅಧಿಕ ಆದಾಯ ತರುವ ಗ್ರಾಮಪಂಚಾಯ್ತಿ ಎಂಬ ಹೆಗ್ಗಳಿಕೆ ಇದೆ. ಆದರೆ ಕಳೆದ 2 ವರ್ಷಗಳಿಂದ ಈ ಗ್ರಾಮಪಂಚಾಯ್ತಿಗೆ ಬಿಲ ತೋಡುತ್ತಿದ್ದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗೋಪಾಲ್ ಮತ್ತು ಹಿಂದಿನ ಎಂ. ವೀರೇಶಪ್ಪ ಎಂಬ ಹೆಗ್ಗಣಗಳು ಅನಾಮತ್ 1 ಕೋಟಿ [illegible]0 ಲಕ್ಷಗಳನ್ನು ನುಂಗಿಬಿಟ್ಟಿದ್ದಾರೆ. ಈ ಮೊತ್ತ ಗ್ರಾಮಪಂಚಾಯ್ತಿ ವಹಿವಾಟಿನ ಲೆಕ್ಕದಲ್ಲಿ ಅತಿ ಹೆಚ್ಚು.

ಆದರೆ ಈ ಹಗರಣ ಬೆಳಕಿಗೆ ಬಂದು, ಇದಕ್ಕೆ ಕಾರಣ ಹಿಂದಿನ ಕಾರ್ಯದರ್ಶಿ ವೀರೇಶಪ್ಪ ಎಂದು ಶಿವಮೊಗ್ಗ ಜಿಲ್ಲಾ ಪಂಚಾಯತ್ ಸಹಾಯಕ ಯೋಜನಾಧಿಕಾರಿ ನರ್ಮದಾ ಆನಂದ್ ವರದಿ ನೀಡಿದ್ದರೂ, ಜಿಲ್ಲಾಡಳಿತ ಈತನ ವಿರುದ್ಧ ಯಾವ ಕ್ರಮ ಜರುಗಿಸದಿರುವುದು ಅನುಮಾನಗಳಿಗೆ ಕಾರಣವಾಗಿದೆ. ಕಳೆದ ಆರು ವರ್ಷಗಳಿಂದ ಇದೇ ಗ್ರಾಮಪಂಚಾಯ್ತಿಯಲ್ಲಿ ತಳವೂರಿರುವ ವೀರೇಶಪ್ಪ ಈ ಹಿಂದೆ [illegible] ಬಾರಿ ಅಮಾನತ್ತಾಗಿದ್ದಾನೆ. ಆದರೇನು ರಾಜಕೀಯ [illegible]ಯಿಂದ ಅದೇ ಪಂಚಾಯ್ತಿಗೆ ಬಂದು ಒಕ್ಕರಿಸುತ್ತಾನೆ.

ವೀರೇಶಪ್ಪ ನುಂಗುವ ರೀತಿ ನೋಡಿದರೆ, ಇಲ್ಲಿನ ಜಿಲ್ಲಾಡಳಿತ ಕಣ್ಣುಮುಚ್ಚಿ ಕೂತಿದೆಯೆಂಬುದು [illegible]ಗುತ್ತದೆ. ಕಳೆದ ಐದು ವರ್ಷಗಳಿಂದ ಪಂಚಾಯ್ತಿ [illegible] ಬಿಲ್ 20 ಲಕ್ಷ ರೂಪಾಯಿಗಳು [illegible]ಗೆ ಸಂದಾಯವಾಗಿಲ್ಲ, ಆದರೆ ಸಂದಾಯವಾ[illegible]ದಾಗಿ ಆಡಿಟ್ ವರದಿಯಲ್ಲಿ ಸುಳ್ಳು ಬರೆಯ[illegible]ದೆ. ಇಲ್ಲಿ ಪ್ರತಿವರ್ಷ ನಡೆಯುವ ಸಂತೆ ಹರಾಜು [illegible]ದ 2.40 ಲಕ್ಷದವರೆಗೆ ಆಗುತ್ತದೆ. ಇದರ ಒಟ್ಟು ಆರು ವರ್ಷದ ಆದಾಯ ಅಂದಾಜು 14 ಲಕ್ಷ ರೂ. ಬಗ್ಗೆ ದಾಖಲೆ, ಪುಸ್ತಕ ಯಾವುದೂ ಇಲ್ಲ. ಗ್ರಾಮದ ಮಧ್ಯ ಪ್ರದೇಶದಲ್ಲಿ ಒಟ್ಟು 15 ನಿವೇಶನಗಳು ಹಂಚಿಕೆ ಆಗಿದೆ. ಇದರ ಬೆಲೆ ನಿವೇಶನಕ್ಕೆ 1 ಲಕ್ಷ. ಇದರ ಒಟ್ಟು ಮೊತ್ತ 15 ಲಕ್ಷ ರೂಪಾಯಿ ಎಲ್ಲಿಗೆ ಹೋಯಿತೆಂದು ಲೆಕ್ಕವೂ ಇಲ್ಲ. ಯಾರಿಗೂ ತಿಳಿದಿಲ್ಲ. ಬಸ್ ಸ್ಟ್ಯಾಂಡ್‌ನಲ್ಲಿರುವ ಒಂದು ಮಳಿಗೆಗೆ ತಿಂಗಳಿಗೆ 3500 ರೂಪಾಯಿ ಯಂತೆ 9 ಮಳಿಗೆಗಳಿಂದ 28,500 ರೂಪಾಯಿ ಆದಾಯ ಪಂಚಾಯ್ತಿಗಿದೆ. ಆದರೆ ಕಳೆದ ಆರು ವರ್ಷಗಳ ಬಾಡಿಗೆ ಮೊತ್ತ 20 ಲಕ್ಷದ 52 ಸಾವಿರ ರೂಪಾಯಿಗೆ ಲೆಕ್ಕವೇ ಇಲ್ಲ.

ಹಳೆಯ ಬೋರ್‌ವೆಲ್ ಬಿಡಿ ಭಾಗಗಳ ಮಾರಾಟದಿಂದ 4 ಲಕ್ಷ ರೂಪಾಯಿ ಬಂದಿದೆ. ಆದರೆ ಆ ಹಣ ಜಮೆಯೂ ಆಗಿಲ್ಲ. ಅದಕ್ಕೂ ಲೆಕ್ಕವಿಲ್ಲ. ಕಳೆದ ಆರು ವರ್ಷದಲ್ಲಿ ಸರ್ಕಾರ ಇಲ್ಲಿನ ಬಡವರಿಗೆ 200 ಮನೆಗಳನ್ನು ಮಂಜೂರು ಮಾಡಿದೆ. ತಲಾ ಮನೆಗೆ 20 ಸಾವಿರ ಬೆಲೆಯನ್ನು ನಿಗದಿ ಪಡಿಸಿದೆ. ಆದರೆ ಇದರಲ್ಲಿ ಕೇವಲ 50 ರಿಂದ 60 ಫಲಾನುಭವಿಗಳಿಗೆ ಹಣ ಸಹಾಯ ದೊರಕಿದ್ದು ಉಳಿದ 140 ಮನೆಗಳನ್ನು ನಿರ್ಮಿಸಿರುವುದಾಗಿ ವೀರೇಶಪ್ಪನೇ ಬೋಗಸ್ ದಾಖಲೆ ನೀಡಿ ಸರ್ಕಾರಕ್ಕೆ ವಂಚಿಸಿದ್ದಾನೆ. ಇದರ ಮೊತ್ತವೇ ಒಟ್ಟು 28 ಲಕ್ಷ ರೂಪಾಯಿ ಆಗುತ್ತದೆ.

ಇದಲ್ಲದೆ ಗ್ರಾಮದ 25 ಎಕರೆ ವಿಸ್ತೀರ್ಣದಲ್ಲಿ ಸರ್ಕಾರ 900 ನಿವೇಶನಗಳನ್ನು ರಚಿಸಿದೆ. ಫಲಾನುಭವಿಗಳು ಈ ನಿವೇಶನ ಸ್ವಾಧೀನಕ್ಕೆ 6 ಲಕ್ಷ ರೂಪಾಯಿ ಅಭಿವೃದ್ಧಿ ಶುಲ್ಕವನ್ನು ಪಾವತಿಸಿದ್ದಾರೆ. ಆದರೆ ಇದಕ್ಕೆ ನಕಲಿ ಬಿಲ್ ನೀಡಿರುವ ವೀರೇಶಪ್ಪ, ಫಲಾನುಭವಿಗಳು ಸಂದಾಯಿಸಿದ ಹಣವನ್ನು ನುಂಗಿ ಸರ್ಕಾರದ ಬೊಕ್ಕಸಕ್ಕೆ ನಾಮ ಹಾಕಿದ್ದಾನೆ. ಈತ ನಕಲಿ ಬಿಲ್ ಸೃಷ್ಟಿಸಿರುವುದು ಇದೊಂದೇ ಪ್ರಕರಣದಲ್ಲಲ್ಲ, ನೀರಿನ ಬಿಲ್‌ನಿಂದ ಹಿಡಿದು ಆಸ್ತಿ ತೆರಿಗೆಯವರೆಗೆ ಈತ ಗ್ರಾಮಸ್ಥರಿಗೆ ನೀಡಿರುವುದು ಬೋಗಸ್ ಬಿಲ್ಲೆ.



ಮಾಹಿತಿ ನೀಡಲು ನಿರಾಕರಿಸಿದ ಪಂಚಾಯ್ತಿ ತೀರ್ಮಾನ

ಬಸ್ ನಿಲ್ದಾಣದಲ್ಲಿರುವ ಜಾಕಿರ್‌ಸಾಬ್ ಎಂಬುವರ ಅಂಗಡಿಯ ಬಾಡಿಗೆ ಹಣವನ್ನು ಕಳೆದ 70 ವರ್ಷಗಳಿಂದ ವೀರೇಶಪ್ಪನೇ ಗುಳುಂ ಮಾಡಿದ್ದಾನೆ. ಈ ವಿಚಾರಗಳ ಬಗ್ಗೆ ವಿವರ ನೀಡುವಂತೆ ಸ್ಥಳೀಯ ಜೆಡಿಎಸ್ ಮುಖಂಡ ಎನ್. ಶ್ರೀಧರ್ ಮಾಹಿತಿ ಹಕ್ಕುಕಾಯ್ದೆ ಅನ್ವಯ ಅರ್ಜಿ ಸಲ್ಲಿಸಿದ್ದರು. ಆದರೆ ಈ ಬಗ್ಗೆ ಪಂಚಾಯ್ತಿ ಅಧ್ಯಕ್ಷೆ ನೀಲಮ್ಮ ಗೌಳಿ ಸಭೆ ನಡೆಸಿ ಈ ವಿಷಯಕ್ಕೆ ಸಂಬಂಧಿಸಿದಂತೆ ಅರ್ಜಿದಾರ ಎನ್. ಶ್ರೀಧರ್‌ಗೆ ವೈಯಕ್ತಿಕ ಹಿತಾಸಕ್ತಿ ಇದ್ದು, ಆ ಕಾರಣದಿಂದಾಗಿ ಮಾಹಿತಿ ನೀಡಬಾರದೆಂದು ನಿರ್ಣಯವನ್ನೇ ಕೈಗೊಂಡಿದ್ದಾರೆ. ಅಂದಮೇಲೆ ವೀರೇಶನ ನುಂಗಾಟದಲ್ಲಿ ಪಂಚಾಯ್ತಿ ಅಧ್ಯಕ್ಷೆ ನೀಲಮ್ಮ ಗೌಳಿ ಮತ್ತು ಇತರೇ ಪದಾಧಿಕಾರಿಗಳ ಪಾಲೆಷ್ಟಿದೆ? ಎಂಬ ಅನುಮಾನ ಜನರನ್ನು ಕಾಡುತ್ತಿದೆ.


ಕಳೆದ ಆರು ವರ್ಷಗಳಿಂದ ಇಲ್ಲಿ ಬಂಗಾರಪ್ಪ ನೇತೃತ್ವದ ಸಮಾಜವಾದಿ ಪಕ್ಷವೇ ಆಡಳಿತ ನಡೆಸುತ್ತಿದೆ. ಅಂದರೆ ಬಂಗಾರಪ್ಪ ಬಿಜೆಪಿ, ಕಾಂಗ್ರೆಸ್ ಒಟ್ಟಿಗಿದ್ದಾಗ, ಒಟ್ಟಿನಲ್ಲಿ ಅವರು ಯಾವುದೇ ಪಕ್ಷದಲ್ಲಿರಲಿ ಪಂಚಾಯ್ತಿ ಅಧಿಕಾರ ಆ ಪಕ್ಷಗಳ ಹಣೆಪಟ್ಟಿಯಲ್ಲಿ ನಡೆದಿರುತ್ತದೆ. ಆದರೆ ವೀರೇಶಪ್ಪ ಮಾತ್ರ ನಿಂತ ನೀರಿನಂತೆ ಇಲ್ಲೆ ಗೂಟ ಹೊಡೆದುಕೊಂಡು ಭೂರಿ ಭೋಜನ ನಡೆಸುತ್ತಿದ್ದಾನೆ.

ಈ ಅವ್ಯವಹಾರದ ಬಗ್ಗೆ ತನಿಖೆ ನಡೆಸಿ, ವೀರೇಶಪ್ಪನ ವಿರುದ್ಧ ಕ್ರಮ ಜರುಗಿಸುವಂತೆ ಇಲ್ಲಿನ ಗ್ರಾಮಸ್ಥರು, ಜೆಡಿಎಸ್ ಮುಖಂಡ ಎನ್. ಶ್ರೀಧರ್ ನೇತೃತ್ವದಲ್ಲಿ ಧರಣಿ, ಉಪವಾಸ ನಡೆಸುತ್ತಿದ್ದಾರೆ. ಲೋಕಾಯುಕ್ತಕ್ಕೂ ಸಹ ದೂರು [illegible]. ಆದರೆ ಜಿಲ್ಲೆಯಿಂದ ಆಯ್ಕೆಯಾಗಿ ಸಚಿವರಾಗಿರುವ ಯಡಿಯೂರಪ್ಪ ಮತ್ತು ಶಂಕರಮೂರ್ತಿಗೆ ಇದರ ಬಗ್ಗೆ ತಲೆ ಕೆಡಿಸಿಕೊಳ್ಳಲು ಸಮಯವಿದ್ದಂತಿಲ್ಲ. ಬಂಗಾರಪ್ಪನವರಂತೂ ತಮ್ಮ 74 ನೇ ಹುಟ್ಟುಹಬ್ಬದ ಸಂಭ[illegible]

–[illegible]

ಅತ್ಯುತ್ತಮ ರೋಲ್ ಮಾಡಲ್

ನಾಗಲೋಟಿಮಠ



ಮೊನ್ನೆ ನಿಧನರಾದ ಶಿ.ಜ. ನಾಗಲೋಟಿಮಠ ನಮ್ಮ ರಾಜ್ಯ ರೂಪಿಸಿದ ಅತ್ಯುತ್ತಮ ರೋಗಶಾಸ್ತ್ರಜ್ಞ ಪ್ರಾಣಿದೇವಿಶಾಸ್ತ್ರಜ್ಞರಲ್ಲೊಬ್ಬರು. ಅರವತ್ತಾರರ ವಯಸ್ಸಿನಲ್ಲಿ ತೀರಿಕೊಂಡ ಇವರ ಸಾವು ನಿಜವಾಗಲೂ ನಮ್ಮ ವೈದ್ಯ ಸಮುದಾಯಕ್ಕೆ, ಸಾರ್ವಜನಿಕರಿಗೆ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿರುವ ವಿಜ್ಞಾನ ಆಸಕ್ತರಿಗೆ ತುಂಬಲಾರದ ನಷ್ಟ.


ನಾನು ಮೊದಲು ನಾಗಲೋಟಿಮಠರ ಹೆಸರು ಕೇಳಿದ್ದು ಡಾ. ಕೃಷ್ಣ ಭಾರ್ಗವರವರ ಕೈಕೆಳಗೆ ರೋಗಶಾಸ್ತ್ರ ಕಲಿಯಲು ಪ್ರಾರಂಭಿಸಿದಾಗ. ಭಾರ್ಗವ ಆಗಾಗ ನಾಗಲೋಟಿಮಠರ ಹೆಸರು ಹೇಳುತ್ತಿದ್ದರು. ಅವರ ಮೊಟ್ಟಮೊದಲ ಸ್ನಾತಕೋತ್ತರ ವಿದ್ಯಾರ್ಥಿಗಳಲ್ಲೊಬ್ಬರಾದ ನಾಗಲೋಟಿಮಠರನ್ನು ಯಾವಾಗಲೂ ಹೊಗಳುತ್ತಿದ್ದರು. 'ತುಂಬ ಕಷ್ಟಪಟ್ಟು ಕೆಲಸ ಮಾಡುತ್ತಿದ್ದ ಚೆನ್ನಾಗಿ ಓದುತ್ತಿದ್ದ ಹೀಗಾಗಿ ಅವನಿಗೆ ಎಂ.ಡಿ. ಪರೀಕ್ಷೆ ಕೊಂಚವೂ ಕಷ್ಟವಾಗಲಿಲ್ಲ. **He simply walked through the examination'** ಎನ್ನುತ್ತಿದ್ದರು. ಆಗ ನಮಗೆಲ್ಲ ಅವರ ಬಗ್ಗೆ ಸಂತಸ, ಕುತೂಹಲ, ಆಸಕ್ತಿ ಎಲ್ಲವೂ ಹೆಚ್ಚುತ್ತಿದ್ದರೂ ಸಹ, ಭಾರ್ಗವ ಮತ್ತೆ ಮತ್ತೆ ನಮ್ಮ ಕಣ್ಣಲ್ಲಿ ಕಣ್ಣಿಟ್ಟು ಈ ಮಾತುಗಳನ್ನು ಹೇಳುತ್ತಿದ್ದರೆ ಇದೇನಾದರೂ ನಮ್ಮ ಬಗ್ಗೆ ಭಾರ್ಗವರವರು ಸೂಕ್ಷ್ಮವಾಗಿ ಮಾಡುತ್ತಿದ್ದ ಟೀಕೆಯೋ ಏನೋ ಎನ್ನಿಸುತ್ತಿತ್ತು!

ನಂತರ ನಮಗೆ ನಾಗಲೋಟಿಮಠರನ್ನು ಭೇಟಿ ಮಾಡಲು ಅವಕಾಶ ಸಿಕ್ಕಿದ್ದು ಭಾರ್ಗವ ನಮ್ಮೆಲ್ಲರನ್ನು ಅಖಿಲ ಭಾರತ ರೋಗಶಾಸ್ತ್ರಜ್ಞರ ಸಮ್ಮೇಳನಕ್ಕೆ ಮುಂಬೈಗೆ ಕರೆದುಕೊಂಡು ಹೋದಾಗ. ಭಾರ್ಗವ ನಮ್ಮೆಲ್ಲರನ್ನು ನಾಗಲೋಟಿಮಠರ ಸುಪರ್ದಿಗೆ ವಹಿಸಿಬಿಟ್ಟರು. ಅಲ್ಲಿಗೆ ನಮ್ಮ ಕಥೆ ಮುಗಿಯಿತು. ಯಾವಾಗ ನೋಡಿದರೂ ಬರೀ ರೋಗಶಾಸ್ತ್ರದ ಬಗ್ಗೆ ಚರ್ಚೆ. ಸಮ್ಮೇಳನದಲ್ಲಿ ಕೊಂಚ ಸಮಯ ಸಿಕ್ಕಿದಾಗ ಎಲ್ಲಾದರೂ ಹೋಗೋಣ ಎಂದು ಯೋಚಿಸುತ್ತಿದ್ದಾಗ, "ಹಾಫ್‌ಕೀನ್ ಇನ್‌ಸ್ಟಿಟ್ಯೂಟ್‌ಗೆ ಹೋಗೋಣ, ಭಾರ್ಗವ ಹೇಳಿದ್ದಾರೆ" ಎಂದುಬಿಟ್ಟರು. ಆಗ ನನಗೆ ಗೊತ್ತಾಯಿತು, ಡಾ. ನಾಗಲೋಟಿಮಠ ತಮ್ಮ ದೈನಂದಿನ ಜೀವನದ ಎಲ್ಲ ಕ್ಷಣಗಳನ್ನು ರೋಗಶಾಸ್ತ್ರದ ಚಿಂತೆಯಲ್ಲೇ ಕಳೆಯುತ್ತಾರೆ ಎಂದು.

ಡಾ. ನಾಗಲೋಟಿಮಠ ಮೊದಲು ಖ್ಯಾತಿ ಪಡೆದಿದ್ದು ಬೆಳಗಾಂ ಮೆಡಿಕಲ್ ಕಾಲೇಜಿನ ಪೆಥಾಲಜಿ ಮ್ಯೂಸಿಯಂ ಸ್ಥಾಪಿಸಿ ಅದನ್ನು ಒಂದು ಅತ್ಯುತ್ತಮ, ಸುಂದರ, ಉಪಯುಕ್ತ ಮ್ಯೂಸಿಯಂ ಆಗಿ ಮಾಡಿದಾಗ. ಈ ಕೆಲಸದಲ್ಲಿ ವಿಶೇಷ ತರಬೇತಿ ಪಡೆದಿದ್ದ ನಾಗಲೋಟಿಮಠ ಬೆಳಗಾಂ ಕಾಲೇಜಿನ ರೋಗಶಾಸ್ತ್ರ ವಿಭಾಗವನ್ನು ಇಡೀ ಏಷ್ಯಾ ಖಂಡದಲ್ಲೇ ಒಂದು ಉತ್ತಮ ವಿಭಾಗ ಎಂಬ ಖ್ಯಾತಿ ಪಡೆಯುವಂತೆ ಮಾಡಿದ್ದರು.

ಈಗ ಯೋಚನೆ ಮಾಡಿದಾಗ ಕೆಎಲ್‌ಇ ವಿದ್ಯಾಸಂಸ್ಥೆ ಅವರನ್ನು ಆ ಕಾಲೇಜಿನ ಪ್ರಾಂಶುಪಾಲರಾಗಿ ಮಾಡದೇ ಹೋದದ್ದು ಅವರಿಗೆ ಬೇಜಾರು ಮಾಡಿದಂತೆ ಕಾಣುತ್ತದೆ. ಬೇರೆಯವರು ಪ್ರಾಂಶುಪಾಲರಾಗಿ ನೇಮಕವಾದ ಮೇಲೆ ಕೊಂಚ ದಿನ ಅದೇ ಕಾಲೇಜಿನಲ್ಲಿ ಮುಂದುವರೆದ ನಾಗಲೋಟಿಮಠ ಜೆ.ಎನ್. ಮೆಡಿಕಲ್ ಕಾಲೇಜಿಗೆ ರಾಜೀನಾಮೆ ಕೊಟ್ಟು ಹೊರಬಿದ್ದರು.

ಇದಕ್ಕೆ ಸ್ವಲ್ಪ ಮುಂಚೆ ನಾನು ಬೆಳಗಾವಿಗೆ ಪರೀಕ್ಷಕನಾಗಿ ಹೋಗಿದ್ದಾಗ ಡಾ. ನಾಗಲೋಟಿಮಠ ನನ್ನನ್ನು ಕರೆದುಕೊಂಡು ಹೋಗಿ ಅವರದೇ ಇನ್ನೊಂದು ಕೂಸಾದ ಬೆಳಗಾವಿ ವಿಜ್ಞಾನ ಕೇಂದ್ರವನ್ನು ತೋರಿಸಿದರು. ಇದನ್ನು ನೋಡಿದ ನನಗೆ ಅವರು ಎಳೆಯ ಹೃದಯ, ಮೆದುಳುಗಳನ್ನು ವಿಜ್ಞಾನದತ್ತ ಎಳೆಯುವ ಆದರ್ಶವನ್ನು ಇಟ್ಟುಕೊಂಡು ಮಾಡಿದ್ದ ಈ ಕೆಲಸ ಅವರು ರೋಗ ಶಾಸ್ತ್ರದಲ್ಲಿ ಮಾಡಿದ ಕೆಲಸಕ್ಕಿಂತ ಮುಖ್ಯವಾದದ್ದು ಎನ್ನಿಸಿತು.



1989ರಲ್ಲಿ ರಾಷ್ಟ್ರಪತಿ ಶಂಕರ್ ದಯಾಳ್ ಶರ್ಮಾರಿಂದ 'ಬಿ.ಸಿ.ರಾಯ್ ರಾಷ್ಟ್ರೀಯ ಪ್ರಶಸ್ತಿ'ಯನ್ನು ಸ್ವೀಕರಿಸುತ್ತಿರುವ ನಾಗಲೋಟಿಮಠ

ಅವರು ರೋಗಶಾಸ್ತ್ರದಲ್ಲಿ ಡಯಾಬಿಟಿಸ್ ಬಗ್ಗೆ ಲಾಡಿ ಹುಳ (Guinea worm) ಮತ್ತಿತರ ಅನೇಕ ವಿಷಯಗಳ ಬಗ್ಗೆ ಸಂಶೋಧನೆ ನಡೆಸಿ ಪ್ರಖ್ಯಾತ ರಾಷ್ಟ್ರೀಯ, ಅಂತಾರಾಷ್ಟ್ರೀಯ ನಿಯತಕಾಲಿಕಗಳಲ್ಲಿ ಪ್ರಕಟಿಸಿದ್ದರು. ವೈದ್ಯಕೀಯ ಸಾಹಿತ್ಯ (ಕನ್ನಡದಲ್ಲಿ) ಅವರ ಇನ್ನೊಂದು ಪ್ರಿಯವಾದ ವಿಷಯ. ಕನ್ನಡದಲ್ಲಿ 50 ಪುಸ್ತಕಗಳನ್ನೂ, ಇಂಗ್ಲಿಷ್‌ನಲ್ಲಿ 14 ಪುಸ್ತಕಗಳನ್ನು ಬರೆದಿದ್ದಾರೆ. "ಬಿಚ್ಚಿದ ಜೋಳಿಗೆ" ಎಂಬ ಹೆಸರಿನಲ್ಲಿ ಅವರ ಆತ್ಮಕಥನವನ್ನು ಬರೆದಿದ್ದಾರೆ.

ಅವರಿಗೆ ರಾಜ್ಯಮಟ್ಟದಲ್ಲಿ 22 ಪ್ರಶಸ್ತಿಗಳು, ರಾಷ್ಟ್ರಮಟ್ಟದಲ್ಲಿ 12 ಪ್ರಶಸ್ತಿಗಳು ಬಂದಿದ್ದವು. ವೈದ್ಯ ಬಿ.ಸಿ. ರಾಯ್ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಇವೆಲ್ಲ ಬಂದಿದ್ದವು. ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್‌ನ ಅಧ್ಯಕ್ಷರಾಗಿ ಕೆಲಸ ಮಾಡಿದ ನಾಗಲೋಟಿಮಠ ಅವರ ಆಡಳಿತದ ಕಾಲದಲ್ಲೇ ಈ ಪರಿಷತ್‌ಗೆ 5 ಕೋಟಿ ರೂಪಾಯಿಗಳ ಸ್ವಂತ ಕಟ್ಟಡ ಕಟ್ಟಿಸಲು ಶ್ರಮಿಸಿದ್ದರು. ಎಲ್ಲ ಜಿಲ್ಲೆಗಳಲ್ಲೂ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಲು ಕಾರಣಕರ್ತರಾಗಿದ್ದರು.

ಅವರು ಬೆಳಗಾಂ ಮೆಡಿಕಲ್ ಕಾಲೇಜ್ ಬಿಟ್ಟಮೇಲೆ ಯಾವಾಗಲೂ ಕೊಂಚ ಅತೃಪ್ತರಂತೆ ಕಾಣುತ್ತಿದ್ದರು. ಅದನ್ನು ತೋರಿಸಿಕೊಳ್ಳದಿದ್ದರೂ, ಏನೋ ಒಂದು ಚಿಂತೆ ಅವರನ್ನು ಕಾಡುತ್ತಿದ್ದಂತೆ ಕಾಣುತ್ತಿತ್ತು. **He appeared to be a restless soul.** ಏಕೆಂದರೆ ಬೆಳಗಾಂ ನಂತರ, ಬಿಜಾಪುರದ ಬಿ.ಎಲ್.ಡಿ.ಇ.ಎ. ಸಂಸ್ಥೆಯ ಮೆಡಿಕಲ್ ಕಾಲೇಜು, ಮೈಸೂರಿನ ಜೆ.ಎಸ್.ಎಸ್. ಮೆಡಿಕಲ್ ಕಾಲೇಜು, ಹುಬ್ಬಳ್ಳಿಯ ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್, ಬಾಗಲಕೋಟೆಯ ಶ್ರೀ ಎಸ್. ನಿಜಲಿಂಗಪ್ಪ ಮೆಡಿಕಲ್ ಕಾಲೇಜು- ಹೀಗೆ ಅನೇಕ ಕಡೆ ಕೆಲಸ ಮಾಡಿದರು. ಏಕೋ, ಏನೋ ಎಲ್ಲೂ ಒಂದು ಕಡೆ ಹೆಚ್ಚು ದಿನ ಇರುತ್ತಿರಲಿಲ್ಲ. ಯಾವಾಗಲೂ ಅತ್ಯಂತ ವಿನಯಪೂರ್ವಕವಾಗಿ ನಡೆದುಕೊಳ್ಳುತ್ತಿದ್ದ ಈ ಮಿತಭಾಷಿ, ಮೃದು ಸ್ವಭಾವದ ಮನುಷ್ಯ ತಮ್ಮ ಎಲ್ಲ ಕಾಗದಗಳನ್ನೂ "ಪ್ರಣಾಮಗಳು" ಎಂದೇ ಪ್ರಾರಂಭಿಸುತ್ತಿದ್ದರು. ಹಾಗೇ ಮುಗಿಸುತ್ತಿದ್ದರು.

ವೈಯಕ್ತಿಕವಾಗಿ ಅವರ ಜೊತೆ ಕೊಂಚ ಸಂಪರ್ಕವನ್ನು ಯಾವಾಗಲೂ ಇಟ್ಟುಕೊಂಡಿದ್ದ ನನಗೆ ಒಂದು ಸಂಶಯ ಕಾಡುತ್ತಿತ್ತು. ಅದೇನೆಂದರೆ ಡಾ. ನಾಗಲೋಟಿಮಠ ಕೂಡ ಎಲ್ಲೋ ಒಂದು ಕಡೆ ಉತ್ತರ ಕರ್ನಾಟಕದ ಜನತೆಯನ್ನು ಕಡೆಗಣಿಸುತ್ತಿದ್ದಾರೆ ಎಂದುಕೊಂಡಿದ್ದರು ಎಂದು. ಇದನ್ನು ಒಂದೊಂದು ಬಾರಿ ಕೊಂಚ ಅತಿರೇಕಕ್ಕೆ ತೆಗೆದುಕೊಂಡು ಹೋಗಿದ್ದೂ ಉಂಟು. ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಯಾಗಿದ್ದಾಗ ನಿಮಗೆ ನೆನಪಿರಬಹುದು - ವೈದ್ಯ ಎಚ್. ಸುದರ್ಶನ್‌ರ ನೇತೃತ್ವದಲ್ಲಿ ಒಂದು "ಹೆಲ್ತ್ ಟಾಸ್ಕ್ ಫೋರ್ಸ್" ರಚಿಸಿದ್ದರು- ಕರ್ನಾಟಕದ ಆರೋ... ವೈದ್ಯಕೀಯ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾ... ನರ್ಸಿಂಗ್ ಇಲಾಖೆ ಮುಂತಾದವೆಲ್ಲ ಹೇಗೆ ಕೆ... ಮಾಡುತ್ತಿವೆ, ಹೀಗೆ ಇವೆಲ್ಲವನ್ನೂ ಉತ್ತಮಗೊಳಿಸಬಹು... ಎಂಬುದನ್ನೆಲ್ಲ ಅಧ್ಯಯನ ಮಾಡಿ ಒಂದು ವರದಿ ತಯಾ... ಮಾಡಲಿಕ್ಕಾಗಿ. ಇದರ ಸದಸ್ಯರಾಗಿದ್ದ ಡಾ. ನಾಗಲೋಟಿಮ... ಯಾವುದೋ ವಿಷಯದಲ್ಲಿ ಉತ್ತರ ಕರ್ನಾಟಕಕ್ಕೆ ನ್ಯಾ... ಸಿಗುತ್ತಿಲ್ಲ ಎಂದು ವಾದಿಸಿ ರಾಜೀನಾಮೆ ಕೊ... ಹೊರಬಿದ್ದಿದ್ದರು. ನಾನು ರಾಜೀವ್ ಗಾಂಧಿ ಆರೋ... ವಿಶ್ವವಿದ್ಯಾಲಯದ ಕುಲಸಚಿವನಾಗಿದ್ದಾಗ ಒಂದು ಬಾ... ಮತ್ತೆ ಇದೇ ವಾದ ಮಾಡಿ ಉತ್ತರ ಕರ್ನಾಟಕದಲ್ಲಿರು... ಆರೋಗ್ಯ ವಿಜ್ಞಾನಗಳ ಕಾಲೇಜುಗಳನ್ನೆಲ್ಲ ಸೇರಿಸಿ, ಪ್ರತ್ಯೇ... ಮಾಡಿ ಮತ್ತೊಂದು ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲ... ಮಾಡಬೇಕು ಎಂದು ವಾದಿಸಿದ್ದರು. ಆದರೆ ನಾ... ಅದಕ್ಕೆ ಒಪ್ಪದೆ ನನ್ನ ವಾದಗಳನ್ನು ಮಂಡಿಸಿ ಕಾಗ... ಬರೆದಾಗ ತುಂಬ ವಿಶ್ವಾಸದಿಂದಲೇ ಉತ್ತರ ಕೊಟ್ಟಿದ್ದ... ಆಮೇಲೆ ನಮ್ಮ ವಿಶ್ವವಿದ್ಯಾಲಯದ ಸಮಿತಿಗಳ... ಆಹ್ವಾನಿಸಿದಾಗಲೆಲ್ಲ ಬಂದು ನಮಗೆ ಸಹಾಯ ಮಾಡಿದ್ದ... ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲ... ಕನ್ನಡದಲ್ಲಿ ಪುಸ್ತಕಗಳನ್ನು ಪ್ರಕಟಿಸಲು ಅವರ ಸಹಾ... ನಮಗೆ ತುಂಬಾ ಉಪಯುಕ್ತವಾಯಿತು ಎಂದು ಹೇಳ... ನಾನು ಹಿಂಜರಿಯುವುದಿಲ್ಲ.

ಶಿವಶರಣ ಡಾ. ನಾಗಲೋಟಿಮಠ ಅತ್ಯಂತ ದೈವಭ... ರಾಗಿದ್ದರೆಂದು ಕಾಣುತ್ತದೆ. ಇತ್ತೀಚಿನ ವರ್ಷಗಳಲ್ಲಿ ಆಗಾ... ಅವರನ್ನು ಭೇಟಿ ಮಾಡುತ್ತಿದ್ದ ನನಗೆ ಡಾ. ನಾಗಲೋಟಿಮ... ಬರಬರುತ್ತಾ ಹೆಚ್ಚು ಹೆಚ್ಚು ಆಧ್ಯಾತ್ಮಿಕ ಚಿಂತನೆಯ ... ಗಮನ ಕೊಡುವಂತೆ ಕಾಣುತ್ತಿತ್ತು.

ಹಣೆಯ ಮೇಲೆ ಎದ್ದು ಕಾಣುವ ವಿಭೂತಿ ಪ... ಹಾಕಿರುತ್ತಿದ್ದ ಡಾ. ನಾಗಲೋಟಿಮಠ ವಿಜ್ಞಾನದ ಬ... ಭಾವುಕರಾಗಿ ವಾದಿಸುತ್ತಿದ್ದಾಗ ಅದನ್ನು ಕೇಳುತ್ತಿದ್ದ ನಮ್ಮ... ಕೆಲವರಿಗೆ "ಇದೇನು ದ್ವಂದ್ವ?" ಎನ್ನಿಸದಿರಲಿಲ್ಲ. ಆ... ಹತ್ತಾರು ಸಾವಿರ ವಿದ್ಯಾರ್ಥಿಗಳಿಗೆ ರೋಗಶಾಸ್ತ್ರ... ಮನಸ್ಸಿಗೆ ನಾಟುವಂತೆ ಪಾಠ ಹೇಳಿಕೊಟ್ಟ, ಸ... ಬಡಜನರಿಗೆ ಕೈಲಾದ ಸಹಾಯವನ್ನು ಮಾಡುತ್ತಿ... ಕರ್ನಾಟಕದಾದ್ಯಂತ ಚಿಕ್ಕ ಹುಡುಗ, ಹುಡುಗಿಯರನ್ನ... ವಿಜ್ಞಾನದತ್ತ ಆಕರ್ಷಿಸಲು ಬಹಳ ಕಷ್ಟಪಟ್ಟ, ತಾ... ಹೋದ ಕಡೆಯಲ್ಲೆಲ್ಲ ಏನಾದರೂ ಒಂದು ಹೊಸದ... ಅತ್ಯಂತ ಚೊಕ್ಕವಾಗಿ, ಚೆನ್ನಾಗಿ ಮಾಡಿದ (ಬೆಳಗಾಂ... ಪೆಥಾಲಜಿ ಮ್ಯೂಸಿಯಂ ಮತ್ತು ಐ.ಸಿ.ಎಂ.ಆರ್. ರೀಜನ... ಸೆಂಟರ್, ಬಿಜಾಪುರದಲ್ಲಿ ಕಲ್ಲಿನ ಹರಳುಗಳ ಮ್ಯೂಸಿಯ... ತಮ್ಮ ಜೀವನದ ಪ್ರತಿ ಕ್ಷಣವನ್ನು ರೋಗಶಾಸ್ತ್ರ ಅಧ್ಯ... ವಿಜ್ಞಾನದ ಪ್ರಸಾರ ಅಥವಾ ಕನ್ನಡದಲ್ಲಿ ವೈದ್ಯಕೀ... ಸಾಹಿತ್ಯ ಇವೆಲ್ಲಕ್ಕೂ ಸೇವೆ ಸಲ್ಲಿಸಲು ಸಮಯ ವ್ಯಯಿ... ಎಂದೂ ಪ್ರಚಾರಪ್ರಿಯರಾಗದಿದ್ದ, ಎಷ್ಟೇ ಕೆಲಸ, ಎಂಥ... ಒತ್ತಡವಿದ್ದರೂ ವಿದ್ಯಾರ್ಥಿಗಳು ಹೋದರೆ ಎಲ್ಲವ... ಮರೆತು ಅವರ ಸಮಸ್ಯೆಗಳನ್ನು ಪರಿಹರಿಸ... ಮನಃಪೂರ್ವಕವಾಗಿ ಶ್ರಮಿಸುತ್ತಿದ್ದ ಡಾ. ನಾಗಲೋಟಿಮ... ಸಕಲ ವಿಧಗಳಲ್ಲೂ ಒಬ್ಬ ಅತ್ಯುತ್ತಮ ರೋಲ್ ಮಾಡ...

ಅವರ ಸಾವು, ಅದೂ 66 ಅಂಥ ವಯಸ್ಸಿನ... ನಿಜವಾಗಿಯೂ ತುಂಬಲಾರದ ನಷ್ಟ.

-ಡಾ.ಕೆ.ಎಂ. ಶ್ರೀನಿವಾಸ ಗ...

ಒಂದು ಪತ್ರ

ಮನಸು ಮನಸುಗಳ ನಡುವೆ ಸೇತುವೆ... ಸಾಧ್ಯವೇ?

ಇತ್ತೀಚಿನ ದಿನಗಳಲ್ಲಿ ರಾಜ್ಯದ ನಗರಗಳಲ್ಲಿ ಹೆಚ್ಚುತ್ತಿರುವ ಕೋಮು ಹಿಂಸೆ, ಈಗ ಚಿಕ್ಕಚಿಕ್ಕ ಹಳ್ಳಿಗಳಿಗೂ ಹರಡಿ ಅಲ್ಲಿನ ಮೇಲ್ವರ್ಗದ, ಕೆಳವರ್ಗದ, ಎಲ್ಲಾ ಧರ್ಮಿಯರನ್ನು ತನ್ನ ತೆಕ್ಕೆಯಲ್ಲಿ ತೆಗೆದುಕೊಳ್ಳುತ್ತಿದೆ.

ಮಲೆನಾಡಿನ ಹಳ್ಳಿಗಳಲ್ಲಿ ಮೊದಲಿಂದಲೂ ವಾಣಿಜ್ಯ ಬೆಳೆಗಳು ಬೆಳೆಯುವುದರಿಂದ ಅಡಿಕೆಯೊಂದನ್ನು ಬಿಟ್ಟರೆ ಉಳಿದೆಲ್ಲ ಬೆಳೆಗಳನ್ನು – ಅಂದರೆ ಏಲಕ್ಕಿ, ಮೆಣಸು ಇತ್ಯಾದಿಗಳು – ಸಣ್ಣ ರೈತರು ಸ್ಥಳೀಯ ಸಣ್ಣಪುಟ್ಟ ವ್ಯಾಪಾರಿಗಳಿಗೆ ಮಾರುತ್ತಿದ್ದರು. ಅವರಲ್ಲಿ ಹೆಚ್ಚಿನವರು ಮುಸ್ಲಿಮರೇ ಆಗಿರುತ್ತಿದ್ದರು. ಜನವರಿಯಿಂದ ಮಾರ್ಚ್ ತಿಂಗಳವರೆಗೂ ಮನೆ ಮನೆಗೂ ಈ ಮುಸ್ಲಿಮ್ ವ್ಯಾಪಾರಿಗಳು ಬಂದು ವ್ಯಾಪಾರ ಮಾಡುತ್ತಿದ್ದರು. ದಿನವಿಡೀ ಕೂತು ಚೌಕಾಸಿ ಮಾಡಿ, ಸಂಸಾರದ ಸುಖ ದುಃಖ ಹಂಚಿಕೊಂಡು, ಸಂಜೆ ವೇಳೆಗೆ ಒಂದು ಬೆಲೆ ನಿಗದಿಪಡಿಸಿ ತಲೆಯ ಮೇಲೆ ಹೊತ್ತೊಯ್ಯುತ್ತಿದ್ದರು.

ಮನೆಯ ಹೆಂಗಸರಿಗೆ ಈ ರೀತಿ ಸಾಬರ ವ್ಯಾಪಾರ ಖುಷಿ ಕೊಡುತ್ತಿತ್ತು, ಯಾಕೆ ಅಂದರೆ ಇದು ಮನೆಯವರ ಅಧಿಕೃತ ವ್ಯಾಪಾರವಾಗಿಲ್ಲದೆ, ತಮ್ಮದೇ ಆದ ಕದರಡಿಕೆ, ಕೊಳೆಕಾಯಿ, ಇತ್ಯಾದಿ ಸಂಗ್ರಹಗಳಿಗೆ ಆತ ಒಂದಿಷ್ಟು ಬೆಲೆ ಕಟ್ಟಿ ವ್ಯಾಪಾರ ಮಾಡುತ್ತಿದ್ದ. ಇದೆಲ್ಲವೂ ಹೆಂಗಸರ ಇಚ್ಛೆಯಂತೆ ನಡೆದು ಆ ಕಾಲದಲ್ಲಿ ಎಲ್ಲರೂ ಆಶಿಸುತ್ತಿದ್ದ ಸ್ಟೀಲ್ ಪಾತ್ರೆಯೊ, ಮತ್ತೊಂದೊ ತಂದು ಕೊಡುತ್ತಿದ್ದ. ಇದರಿಂದ ಹೆಂಗಸರ ಪಾಕೆಟ್ಟಿನಲ್ಲೊಂದಿಷ್ಟು ಸ್ವಂತ ಹಣ ಕೂಡ ಇರುತ್ತಿತ್ತು. ಆ ಹಣದಿಂದ ಮನೆಗೆ ಬಂದವರಿಗೆ ಮಿಠಾಯಿ, ಕುಪ್ಪಸದ ಬಟ್ಟೆ- ಹೀಗೆ ಪುಟ್ಟ ಉಡುಗೊರೆಗಳನ್ನು ಕೊಡುತ್ತಿದ್ದರು.

ಇತ್ತೀಚಿನ ಕೆಲ ವರ್ಷಗಳಲ್ಲಿ ಹಳ್ಳಿಹಳ್ಳಿಗಳಲ್ಲಿ ಹಿಂದೂತ್ವದ ಕೋಮುವಾದ ಹರಡಿ, ಈ ಸಣ್ಣ ಮುಸ್ಲಿಂ ವ್ಯಾಪಾರಿಗಳು ತೊಂದರೆಗೊಳಗಾಗುತ್ತಿದ್ದಾರೆ. ಇವರನ್ನು ಮಟ್ಟ ಹಾಕಬೇಕೆಂದೇ ಹಿಂದೂವಾದಿಗಳು ಮುಸ್ಲಿಂ ವ್ಯಾಪಾರಿಗಳು ಎಲ್ಲೆಲ್ಲಿ ವ್ಯಾಪಾರ ಮಾಡುತ್ತಾರೋ ಅಲ್ಲೆಲ್ಲಾ ಅವರಿಗಿಂತ ಮುಂಚೆ ಹೋಗಿ ವ್ಯಾಪಾರ ಮಾಡೋದು, ಸಾಬರಿಗಿಂತ ಐದು ರೂಪಾಯಿ ಜಾಸ್ತಿ ಕೊಡುತ್ತೇವೆ ಅನ್ನೋದು ನಡೆದಿದೆ. ಅಕಸ್ಮಾತ್ ಆ ಮನೆಯವರೂ ಮುಸ್ಲಿಂ ವಿರೋಧಿಗಳಾಗಿದ್ದರೆ "ಸಾಬರನ್ನೆಲ್ಲಾ ಪಾಕಿಸ್ತಾನಕ್ಕೆ ಓಡಿಸಬೇಕು," ಹಾಗೆ, ಹೀಗೆ ಅಂತೆಲ್ಲ ಮಾತಾಡುತ್ತಾ ಒಂದು ಕೆ.ಜಿ. ಹೆಚ್ಚುಕಮ್ಮಿ ತೂಗಿ ಐದು ರೂಪಾಯಿ ಹೆಚ್ಚಿಗೆ ಕೊಟ್ಟದ್ದನ್ನ ದಕ್ಕಿಸಿಕೊಳ್ಳೋದೂ ನಡೆಯುತ್ತಾ ಇದೆ.

ನಮ್ಮಲ್ಲಿಗೆ ಒಮ್ಮೆ ಎರಡೂ ಜನಾಂಗದ ವ್ಯಾಪಾರಿಗಳು ಬಂದಿದ್ದರು. ಮುಸ್ಲಿಂ ವ್ಯಾಪಾರಿ ಒಂದು ರೇಟು ಮಾತಾಡಿ ಹೋದರು. ಅವರ ಬೆನ್ನಲ್ಲೇ ಬಂದ ಹಿಂದೂತ್ವವಾದಿ ವ್ಯಾಪಾರಿ "ಅವನಿಗೆ ಕೊಡಬೇಡಿ, ನಮಗೆ ಕೊಡಿ. ಅವನಿಗಿಂತ ಐದು ರೂಪಾಯಿ ಜಾಸ್ತಿ ಕೊಡ್ತೀವಿ" ಅಂದ್ರು. ಆಗ ಒಂದು ಘಟನೆಯ ಬಗ್ಗೆ ಹೇಳಿದರು: ಒಂದೆಡೆ ಅವರು ವ್ಯಾಪಾರಕ್ಕೆ ಹೋಗಿದ್ದರಂತೆ, ಅಲ್ಲಿಗೆ ಆ ಮುಸ್ಲಿಂ ವ್ಯಾಪಾರಿನೂ ಬಂದಿದ್ದನಂತೆ. ಆ ಮನೆಯವರು ಅವನ ಹತ್ತಿರ ರೇಟು ಮಾತಾಡಿ ನಂತರ ಇವರನ್ನು ಒಳಗೆ ಕರೆದು "ನೀವು ಐದು ರೂಪಾಯಿ ಕಡಿಮೆ ಕೊಟ್ಟರೂ ಪರವಾ ಇಲ್ಲ, ನಿಮಗೇ ಕೊಡ್ತೀವಿ. ಅಲ್ಲದೆ ಹಳ್ಳಿಗಳಲ್ಲಿ ಇವರಿಗೆ ವ್ಯಾಪಾರ ಮಾಡಕ್ಕೆ ಬಿಡಬಾರದು. ನೀವೇ ವ್ಯಾಪಾರ ಮಾಡಿ, ಹಣ ಸಹಾಯ ಮಾಡ್ತೀವಿ" ಅಂದರಂತೆ. ಬಹುಶಃ ಆತ ಇವನಿಗಿಂತಲೂ ಕೊಳೆತ ಕೋಮುವಾದಿ ಮನಸ್ಸಿನವನಾಗಿರಬೇಕು.

ಇದನ್ನೆಲ್ಲಾ ಆತ ತನ್ನ ಕೋಮುವಾದಿ ಮನಸ್ಸಿನಿಂದ ಹೇಳುತ್ತಿದ್ದ. ಇದನ್ನು ಕೇಳುತ್ತಿದ್ದ ನನಗೆ ಒಳಗೊಳಗೆ ಕುದಿಯುತ್ತಿತ್ತು. ಈ ಕೋಮುವಾದಿ ರಾಜಕಾರಣ ಮಲೆನಾಡಿನ ಮೂಲೆಮೂಲೆಗೆ ಹರಡುತ್ತಿರುವುದನ್ನು ಕಂಡು ಬೆಚ್ಚಿಬೀಳುವಂತಾಯಿತು. ಅಲ್ಪಸಂಖ್ಯಾತರ ಸಾಮಾಜಿಕ, ಆರ್ಥಿಕ ಬದುಕಿನ ಮೇಲಾಗುತ್ತಿರುವ ದಾಳಿ ಆತಂಕವನ್ನುಂಟು ಮಾಡಿತು.

ಕಂಡಕಂಡಲ್ಲಿ ಅಲ್ಪಸಂಖ್ಯಾತರನ್ನು ಉದ್ರೇಕಿಸುತ್ತಾ, ಪ್ರಚೋದಿಸುತ್ತಾ ಇದ್ದರೆ ಅವರು ತಾನೆ ಎಷ್ಟು ದಿನ ಸುಮ್ಮನಿರುತ್ತಾರೆ? ಎಂತಹ ಹಸು ಕೂಡ ತನ್ನ ಮೇಲಾಗುವ ಆಕ್ರಮಣವನ್ನು ಸಹಿಸೋದಿಲ್ಲ. ಇನ್ನು ಉಪ್ಪುಹು... ತಿಂದ ಜನ ತಿರುಗಿ ಬಿದ್ದೇ ಬೀಳುತ್ತಾರೆ. ಇದನ್ನೇ... ಯೋಚನೆ ಮಾಡುತ್ತಿದ್ದ ನಾನು "ಆತ ಐದು ರೂಪಾ... ಕಡಿಮೆ ಕೊಟ್ಟರೂ ಪರವಾಗಿಲ್ಲಾ, ನಾವು ಅವರಿಗ... ಕೊಡ್ತೀವಿ" ಅಂತ ಶಾಂತವಾಗಿ ಆದರೆ ಅಷ್ಟೇ ದೃಢವಾ... ಹೇಳಿದೆ. ಆತ "ಯಾಕೆ?" ಅಂದ. ನಾನು "ನಾ... ವ್ಯಾಪಾರ ಮಾಡೋದು ಮನುಷ್ಯರ ಹತ್ರವೇ ಹೊರತ... ಕೊಳೆತ ಮನಸ್ಸಿನವರೊಂದಿಗಲ್ಲ" ಅಂದೆ. ಅಂದು ಬ... ದಾರಿಗೆ ಸುಂಕವಿಲ್ಲ ಎಂದು ಅರಿತ ಆತ ಹೊರಟು... ಹೋದ; ಮತ್ತೆಂದೂ ನಮ್ಮಲ್ಲಿಗೆ ಬರಲಿಲ್ಲ.

ಹೀಗೆ ಹಳ್ಳಿಹಳ್ಳಿಗಳಲ್ಲಿ ಸೌಹಾರ್ದವಾಗಿ ಬದುಕ... ಎಲ್ಲಾ ಜನಾಂಗದ ಜನರ ಮನಸ್ಸನ್ನು ಕೋಮುವಾದಿಗ... ಕೆಡಿಸುತ್ತಿದ್ದಾರೆ. ಮನಸ್ಸು ಮನಸ್ಸುಗಳ ನಡುವೆ ಕಂದ... ಹೆಚ್ಚಿಸುತ್ತಿದ್ದಾರೆ. ಇವರ ಕುತಂತ್ರದಿಂದ ನಂಬಿಕೆ, ವಿಶ್ವಾ... ಕಳೆದುಕೊಂಡ ಜನ ಮತ್ತೊಮ್ಮೆ ಅದನ್ನು ಪಡೆಯು... ಪ್ರಯತ್ನ ಮಾಡಬೇಕಿದೆ. ಮತ್ತೊಮ್ಮೆ ಮನಸ್ಸು ಮನಸ್ಸುಗ... ಸೇತುವೆ ಕಟ್ಟಬೇಕಿದೆ. ಮಂಗಳೂರಿನಲ್ಲಾದದ್ದನ್ನು ನೋ... ಇದು ಸಾಧ್ಯವೇ ಎಂಬ ಆತಂಕ ನನ್ನನ್ನು ಕಾಡುತ್ತಿ...

-ಭಾಗ್ಯ ಹಾಗಲಗಂಚಿ, ಶೃಂಗ...


ಧರ್ಮಪಾಲನ ಅಧರ್ಮ ಕೆಲಸಗಳು...

(14ನೇ ಪುಟದಿಂದ)

ಆತ ಯಾವ ರಿಸ್ಕನ್ನೂ ತೆಗೆದುಕೊಳ್ಳಲು ತಯಾರಿದ್ದಂತಿಲ್ಲ. ಪಟ್ಟಣ ಪಂಚಾಯ್ತಿ ಅಧ್ಯಕ್ಷ ಅಂಜನ್‌ಕುಮಾರ್ ಆರಂಭದಲ್ಲಿ ಧರ್ಮಪಾಲ್ ಹೇಳಿದಂತೆ ಕೇಳಿದರೂ ಕ್ರಮೇಣ ಧರ್ಮಪಾಲ್ ಅಸಲಿ ರೂಪ ಅರ್ಥ ಮಾಡಿಕೊಂಡು ದೂರ ಸರಿದಂತಿದೆ. ಈ ಹಿನ್ನೆಲೆಯಲ್ಲೇ ಸ್ಥಾಯಿ ಸಮಿತಿ ಅಧ್ಯಕ್ಷನಾಗಿದ್ದ ಧರ್ಮಪಾಲ್‌ಗೆ ಟಾಂಗ್ ಕೊಟ್ಟು ಆ ಸ್ಥಾನದಲ್ಲಿ ಅನ್ವರ್ ಸಾಬ್ ಎಂಬಾತನನ್ನು ಕುಳ್ಳಿರಿಸಲಾಗಿದೆ.

ಅಕ್ರಮ ದಂಧೆಗಳು

ಎರಡು ವರ್ಷದ ಕೆಳಗೆ 'ರಾಜಾ' ಎಂಬ ಥರ್ಡ್‌ರೇಟ್ ಲಿಕ್ಕರೊಂದಕ್ಕೆ ಬಳಸಿಕೊಳ್ಳಲು ಪ್ರಿಂಟಿಸಲಾಗಿದ್ದ ಐದಾರು ಲಕ್ಷ ರೂ. ಮೌಲ್ಯದ ಅಬಕಾರಿ ಇಲಾಖೆಯ ಲೇಬಲುಗಳ ಪಾರ್ಸಲ್ ಒಂದು ಸುದರ್ಶನ್ ಟ್ರಾವೆಲ್ಸ್‌ಗೆ ಬಂದಿಳಿದಿತ್ತು. ಸುದರ್ಶನ್ ಟ್ರಾವೆಲ್ಸ್‌ನವರು ಅದು ಧರ್ಮಪಾಲ್ ಮಾಲೀಕತ್ವದ ಸುದರ್ಶನ್ ಲಿಕ್ಕರ್ಸ್‌ಗೆ ಸೇರಿದ್ದೆಂದು ಸಾಗ ಹಾಕಿದ್ದರು. ಆದರೆ ಧರ್ಮಪಾಲ್ ಕೂಡಾ ತಮ್ಮವಲ್ಲವೆಂದು ಕೈತೊಳೆದುಕೊಂಡರು. ಅದು ಯಾರದ್ದೆಂಬ ಸತ್ಯ ಎಲ್ಲರಿಗೂ ಗೊತ್ತಿತ್ತು. ಆದರೂ ಪ್ರಕರಣ ಮುಚ್ಚಿಹೋಯಿತು.


ವೆಂಕಟರವಣಪ್ಪ

ಒಂದೂವರೆ ವರ್ಷದ ಕೆಳಗೆ ಆಂಧ್ರದ ಗಡಿಭಾಗದ ಹಳ್ಳಿಗಳಿಗೆ ಅಕ್ರಮವಾಗಿ ಸಾರಾಯಿ ಪೂರೈಕೆ ಮಾಡುವ ಆರೋಪದ ಮೇಲೆ ಧರ್ಮಪಾಲ್‌ನನ್ನು ಮಡಕಶಿರಾ ಪೊಲೀಸರು ಬಂಧಿಸಿದ್ದರು. ಲಕ್ಷಾಂತರ ಕೈಬಿಟ್ಟರೂ ಧರ್ಮಪಾಲ್‌ಗೆ ಈ ಕೇಸಿನಿಂದ ಬಚಾವಾಗಲು ಆಗಿಲ್ಲ. ಒಂದೊಮ್ಮೆ ಇನ್‌ಕಮ್ ಟ್ಯಾಕ್ಸ್‌ನವರು ಈತನ ಮನೆಯ ಮೇಲೆ ರೈಡ್ ಮಾಡಿದಾಗ ಸಿಕ್ಕಿದ್ದು ಕೇವಲ 22 ಕೋಟಿ ರೂ. ಮಾತ್ರ. ಎದ್ದೆನೋ ಬಿದ್ದೆನೊ ಎಂಬಂತೆ 18-19 ಕೋಟಿ ಲೆಕ್ಕ ತೋರಿಸಿ, 2.30 ಲಕ್ಷ ತೆರಿಗೆ ಪಾವತಿಸಿ ಬಚಾವಾಗಿದ್ದ.

ಈ ಏಳುಬೀಳುಗಳ ನಡುವೆಯೂ ತನ್ನ ಮಗ ಸುರೇಶ್ ಬಾಬುಗೆ ಆನ್‌ಲೈನ್ ಷೇರು ಬಿಸಿನೆಸ್ ಹಚ್ಚಿಕೊಟ್ಟು ಪಾವಗಡದಲ್ಲಿ ಹಲವಾರು ವ್ಯಾಪಾರಿಗಳ ದಿವಾಳಿಗೆ ದಾರಿ ಮಾಡಿದ. ಕೆಲವರು ಊರುಬಿಟ್ಟರೆ, ಒಂದಿಬ್ಬರು ಆತ್ಮಹತ್ಯೆ ಮಾಡಿಕೊಂಡರು. ಇದೇ ಷೇರು ವ್ಯವಹಾರದಲ್ಲಿ ಧರ್ಮಪಾಲ್ ಅನುಚರ ಆರ್ವೇಟಿ ರಮೇಶ್ ಅರ್ಧ ಕೋಟಿಗೂ ಮಿಕ್ಕಿ ಹಣ ಕಳೆದುಕೊಂಡರು.

ಎರಡು ವರ್ಷದ ಕೆಳಗೆ ಹಿಂದೂಪುರದಲ್ಲಿ ತನ್ನ ಅಳಿಯ ಮುನ್ಸಿಪಲ್ ಚುನಾವಣೆಗೆ ನಿಂತಾಗ ಪಾವಗಡದಿಂದ ತನ್ನ ಹಿಂಬಾಲಕರ ಪಡೆಯನ್ನು ಕರೆದುಕೊಂಡು ಹೋಗಿ ಅಲ್ಲಿ ತನ್ನ ಶೌರ್ಯ ಪ್ರದರ್ಶಿಸುವ ಪ್ರಯತ್ನ ಮಾಡಿ ವಿಫಲನಾಗಿದ್ದ. ಧರ್ಮಪಾಲ್ ಪೊಲೀಸರ ಅತಿಥಿಯಾಗಿ ಒಂದೆರಡು ದಿನ ಕಳೆಯಬೇಕಾಯಿತು. ಅದೇ ಸಮಯದಲ್ಲಿ ಅಳಿಯನ ಚುನಾವಣಾ ವೆಚ್ಚಕ್ಕೆಂದು ಇಪ್ಪತ್ತೈದರಿಂದ ಮೂವತ್ತು ಲಕ್ಷ ಸುರಿದ. ವಿಪರ್ಯಾಸ ಹೇಗಿದೆ ನೋಡಿ. ಪಾವಗಡದಲ್ಲೀತ ಆಲ್ ಇಂಡಿಯಾ ಕಾಂಗ್ರೆಸ್ಸು. ಪಕ್ಕದ ಹಿಂದೂಪುರದಲ್ಲಿ ಮಾತ್ರ ಅಳೀಮಯ್ಯನಿಗಾಗಿ ಟಿಡಿಪಿ ಪಕ್ಷ. ಇದು ಧರ್ಮಪಾಲ್‌ನ ಅಕ್ರಮ-ಸ್ವಾರ್ಥಪರ ರಾಜಕೀಯದ ವರಸೆಗೊಂದು ಸ್ಯಾಂಪಲ್.

ದೂರವಾದ ವೆಂಕಟರವಣಪ್ಪ

ಧರ್ಮಪಾಲ್ ಭರ್ಜರಿ ಲೂಟಿ ಕಾರ್ಯಕ್ರಮ ಹಾಕಿಕೊಂಡದ್ದೇ ಮಾಜಿ ಶಾಸಕ ವೆಂಕಟರವಣಪ್ಪ ಎರಡು ಅವಧಿಯಲ್ಲಿ ಶಾಸಕನಾಗಿದ್ದಾಗ. ಭಲೇ ಜೋಡಿ ಎಂದೇ ಜನಪ್ರಿಯವಾಗಿದ್ದ ಈರ್ವರ ಸಂಬಂಧಗಳು ಗಳಸ್ಯ-ಕಂಠಸ್ಯ ಎಂಬಂತಿದ್ದವು. ಕಾಂಗ್ರೆಸ್‌ನ ಹಿರಿತಲೆಗಳು ಧರ್ಮಪಾಲ್ ಬೆನ್ನಿಗೆ ನಿಂತಿದ್ದು ಆತನಿಗೆ ವರದಾನವಾಗಿತ್ತು. ಈಗ ಧರ್ಮಪಾಲ್ ಮತ್ತು ವೆಂಕಟರವಣಪ್ಪ ಸಂಬಂಧ ಪಾಚಿ ಕಟ್ಟಿದೆ. ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ಪಾರ್ಟಿ ಫಂಡು ಹಂಚಿಕೆಯ ವಿಚಾರದಲ್ಲಿ ಧರ್ಮಪಾಲ್ ನಡೆದುಕೊಂಡ ರೀತಿ ಇದಕ್ಕೆ ಕಾರಣ. ನಂತರ ಇಬ್ಬರೂ ತಾಲ್ಲೂಕಿನಾದ್ಯಂತ ಪ್ರತ್ಯೇಕ ಲಿಂಕುಗಳನ್ನಿಟ್ಟುಕೊಂಡು ಅವರವರ ಲೀಡರ್‌ಶಿಪ್ ಎಸ್ಟಾಬ್ಲಿಶ್ ಮಾಡಿಕೊಳ್ಳುವ ಕಸರತ್ತು ನಡೆಸುತ್ತಿದ್ದಾರೆ. ಅಂದಹಾಗೆ ಧರ್ಮಪಾಲ್ ಈಗ ರಾಜಕೀಯವಾಗಿ ಆಶ್ರಯಿಸಿರುವುದು ವಿಧಾನ ಪರಿಷತ್ ಸದಸ್ಯ ಉಗ್ರಪ್ಪನನ್ನು. ಇದೇ ಕಾರಣಕ್ಕೆ ಉಗ್ರಪ್ಪ ಮತ್ತು ಮಾಜಿ ಶಾಸಕ ವೆಂಕಟರವಣಪ್ಪನ ನಡುವೆ ಸಾಮರಸ್ಯ ಮೂಡದಷ್ಟು ವಾತಾವರಣ ಹದಗೆಡಿಸುವಲ್ಲಿ ಧರ್ಮಪಾಲ್ ಯಶಸ್ವಿಯಾಗಿದ್ದಾನೆ.

ಈಗ ಧರ್ಮಪಾಲ್ ಬ್ಲಾಕ್ ಕಾಂಗ್ರೆಸ್‌ನ ಅಧ್ಯಕ್ಷನಾಗಿ ನೇಮಕಗೊಂಡಿದ್ದಾನೆ. ಪಾವಗಡಕ್ಕೆ ಇನ್ನೆಷ್ಟು ಅನಾಹುತಗಳು ಕಾದಿವೆಯೋ?

-ವರದಿಗಾರ

ಹಳದಿ ಕಣ್ಣಿನ ಶಿವನಗೌಡನಿಗೊಂದು ಚಾಳೀಸು ಕೊಡಿಸಿರಿ!

ಕೊಪ್ಪಳದ ಎಪಿಎಂಸಿ ಅಧ್ಯಕ್ಷ ಶಿವನಗೌಡನಿಗೆ ನಿತ್ಯ ಒಂದೇ ಕೆಲಸ. ಲೀಡರ್‌ಗಳ ಮನೆ ಮುಂದೆ 'ಯಾವನಾರ ಪೇಪರ್‌ನವ ನಿಮ್ಮ ಬಗ್ಗೆ ಬರೆದ್ರೆ ಹುಡುಕಿ ಹೊಡೆಯಿರಿ, ಸಿಗಲಿಲ್ಲಂದ್ರೆ, ಬೇರೆ ಪೇಪರ್‌ನ್ಯಾಗ ಬರೆದವನ ಬಗ್ಗೆ ಬರೆಸ್ರಿ' ಅಂತ ಡಂಗುರ ಸಾರುವುದಾಗಿದೆ.



ಈತ ಹೀಗೆ ಎರಡೂ ಕೈ ಸಾಲುತ್ತಿಲ್ಲ ಎಂಬಂತೆ ಬಾಯಿ ಬಡಿದುಕೊಳ್ಳಲು ಕಾರಣ ಅಕ್ಟೋಬರ್ 18ರ 'ಲಂಕೇಶ್'ನಲ್ಲಿ ಪ್ರಕಟವಾದ ವರದಿಯ ಫಲ! ಈ ಮುಂಚೆ ಜೂನ್‌ನಲ್ಲಿ ಅಧ್ಯಕ್ಷ ಶಿವನಗೌಡನ ಕಣಗಳ ಕಳಪೆ ಕಾಮಗಾರಿ ಬಗ್ಗೆ ಮತ್ತು ಮೊನ್ನೆ ಅದರ ಬಗ್ಗೆ ಅಧಿಕಾರಿಗಳು ನೀಡಿದ್ದ ವರದಿ ಬಗ್ಗೆ ಬರೆಯಲಾಗಿತ್ತು. ನಿಂತುಹೋಗಿದ್ದ ಬಿಲ್‌ಗಳನ್ನು ಪಾಸ್ ಮಾಡಿಸಲು ಅಧಿಕಾರಿಗಳನ್ನು ಕರೆಸಿದ್ದು ಅಕ್ಟೋಬರ್ 10ರಂದು. ಕಾಕತಾಳೀಯ ಅಂದ್ರೆ, ಅವತ್ತೇ 'ಲಂಕೇಶ್'ನಲ್ಲಿ ವರದಿ ಪ್ರಕಟವಾಗಿ, ಅಧಿಕಾರಿಗಳು ಬಿಲ್ ಬರೆಯದೇ ಹೊರಟುಹೋಗಿದ್ದು ನೋಡಿ ಉರಿದುಬಿದ್ದರು ಅಧ್ಯಕ್ಷ ಮತ್ತು ಆತನ ಕುಮಾರ ಕಂಠೀರವ ಪ್ರಶಾಂತಗೌಡ. ಅಷ್ಟೇ ಅಲ್ಲ ಬಾಡಿಗೆ ಬಾಡಾಸುವೋ ತೆಗೆದುಕೊಂಡು ವರದಿಗಾರನನ್ನು ಹುಡುಕಲು ಊರೆಲ್ಲಾ ಜಾಲಾಡಿದ್ದಾರೆ ಮೂರು ದಿನ. ಸಿಟ್ಟಿನಿಂದ ಬಿಪಿ ಏರಿಸಿಕೊಂಡು ಹುಡುಕಿದ್ದೇ ಬಂತು ಜೊರತು ನಮ್ಮ ವರದಿಗಾರ ಸಿಕ್ಕಿಲ್ಲ.

ಬೆಂಗಳೂರಿಗೆ ಹೋದ ಪ್ರಶಾಂತಗೌಡ ಓರ್ವ ಪತ್ರಕರ್ತನನ್ನು ಎಳಕೊಂಡು ಬಂದಿದ್ದಾನೆ. ಆತನನ್ನು ಕೊಪ್ಪಳದ ಲಾಡ್ಜ್‌ನಲ್ಲಿ ಇಟ್ಟು ಎಲ್ಲ ವ್ಯವಸ್ಥೆ ಮಾಡಿ ಪಾಪಾನ ಬಗ್ಗೆ ಬರೆಯಲು ಎಷ್ಟು? ಎಂದಿದ್ದಾನೆ ಅಧ್ಯಕ್ಷ. 'ಲಂಕೇಶ್' ಅಕ್ಟೋಬರ್ 18ರ ವರದಿ ಓದಿದ ಅವನು ಒಂದು ಲಕ್ಷ ಡಿಮ್ಯಾಂಡ್ ಮಾಡಿದ್ದಾನೆ. 'ಅಯ್ಯಯ್ಯೋ ಒಂದು ಕಣ ಕಾಮಗಾರಿಯ ಅಮೌಂಟ್ ಕೇಳ್ತಿಯಲ್ಲ ಏನಿದು?' ಅಂತ ಗಾಬರಿ ಬಿದ್ದಿದ್ದಾರೆ ತಂದೆ ಮಗ. ಜಗ್ಗಾಡಿ ಕಡೆಗೆ ಐದು ಸಾವಿರಕ್ಕೆ ಡೀಲು ಪಡೆದು ಹೋಗಿದ್ದಾನೆ ಆ ಪತ್ರಕರ್ತ! ಇದಿಷ್ಟು ಎಪಿಎಂಸಿ ಚೇಂಬರ್‌ನಿಂದಲೇ ಬಂದಿರುವ ವರದಿ.

ಕೊಪ್ಪಳ

'ಲಂಕೇಶ್'ನಲ್ಲಿ ಬಂದ ವರದಿಗಾರನ ಹೆಸರು ನೋಡಿಯೇ ಉರಿದುಹೋದ ಅಧ್ಯಕ್ಷ 'ಈ ಜಿಲ್ಲಾದಾಗ ಸಾಬರದೇ ಎಲ್ಲ ದರ್ಬಾರ್ ಆಗ್ಯೆತೆ. ಮಿನಿಸ್ಟರ್ ಅವನಾ, ಡಿಡಿಪಿಐ, ಎಸಿ, ಹೆಚ್.ಕ್ಯೂ.ಎ., ಪೊಲೀಸ್, ಪ್ರೆಸ್ಸು ಎಲ್ಲ ಇವರದ್ದೇ ಆದರೆ ಹೇಗೆ' ಅಂತ ಎಲ್ಲವನ್ನೂ ಜಾತಿಯ ಕಣ್ಣಿಂದಲೇ ನೋಡುವ ಶಿವನಗೌಡನಿಗೆ ಎಲ್ಲವೂ ಹಳದಿಯಾಗಿಯೇ ಕಾಣುತ್ತವೆ.

ನಮ್ಮ ವರದಿಗಾರರಿಗೆ ತೊಂದರೆ ಕೊಡಲು ಓಡಾಡುತ್ತಿರುವ ಶಿವನಗೌಡನ ಪಟಾಲಂಗೆ ಎಸ್.ಪಿ. ಬುದ್ಧಿ ಹೇಳಬೇಕಿದೆ.

-ಸಂ





ಸಿನಿಮಾ ಚಲೋ ಐತಿ ನೋಡ್ರಿ

ಈ ಚಿತ್ರದಲ್ಲಿ ನನ್ನದು ವಿಭಿನ್ನ ಪಾತ್ರ. ಇಂತಹ ಪಾತ್ರ ಸಿಗುವುದು ಅಪರೂಪ. ನನ್ನ ಕೆರಿಯರ್‌ನಲ್ಲಿ ಇದು ಖಂಡಿತ ಮೈಲಿಗಲ್ಲಾಗಲಿದೆ.

ಈ ಚಿತ್ರಕ್ಕೆ ನಾನು ಆಯ್ಕೆಯಾಗಿದ್ದು ಹೇಗೆ? ಒಪ್ಪಿಕೊಂಡಿದ್ದು ಹೇಗೆ? ಎಲ್ಲವನ್ನೂ ಹೇಳ್ತೀನಿ ಕೇಳಿ.

ಕವಿತಾ 'ತನನಂ ತನನಂ' ಪ್ರಾಜೆಕ್ಟ್ ಆರಂಭಿಸುತ್ತಿದ್ದುದು, ರಮ್ಯಳನ್ನು ನಾಯಕಿ ಪಾತ್ರಕ್ಕೆ ಆಯ್ಕೆ ಮಾಡಿಕೊಂಡಿದ್ದು ನನಗೆ ಗೊತ್ತಿತ್ತು. ಆದರೆ ಕವಿತಾ ನನ್ನನ್ನು ಭೇಟಿ ಆಗಬೇಕೆಂದಾಗ ಆಶ್ಚರ್ಯವಾಯ್ತು. ಈಗಾಗಲೇ ರಮ್ಯ ಅಲ್ಲಿದ್ದಾಳೆ, ನನಗೇನು ಪಾತ್ರ ಇರುತ್ತಲ್ಲಿ ಅಂದುಕೊಂಡೆ. ಕವಿತಾ ಈ ಚಿತ್ರದಲ್ಲಿ ನಟಿಸಲು ನನಗೆ ಆಹ್ವಾನವಿತ್ತಾಗ 'ಏನು, ಸೆಕೆಂಡ್ ಹೀರೋಯಿನ್ ಪಾರ್ಟ್ ಮಾಡ್ಬೇಕಾ?' ಎಂದೆ. 'ಅದೆಲ್ಲಾ ಏನಿಲ್ಲ... ಎರಡು ರೋಲ್‌ಗಳಿಗೂ ಸಮಪ್ರಮಾಣದ ಪ್ರಾಮುಖ್ಯತೆ ಇದೆ' ಎಂದು ಹೇಳಿ ಕತೆಯ ಸ್ಕ್ರಿಪ್ಟ್ ಕೊಟ್ಟರು. ಸ್ಕ್ರಿಪ್ಟ್ ನನಗೆ ತುಂಬಾ ಇಷ್ಟವಾಗಿತ್ತು. ಆದರೆ, ನನ್ನ ಪಾರ್ಟ್ ಕುರಿತು ನನಗೆ ಪೂರ್ತಿ ಕನ್ವಿನ್ಸ್ ಆಗಿರಲಿಲ್ಲ. ನನ್ನ ಮಮ್ಮಿ ಕೂಡ ಸ್ಕ್ರಿಪ್ಟ್ ಓದಿ, 'ನಿನ್ನ ಪಾತ್ರಕ್ಕೆ ಇನ್ನೂ ಸ್ವಲ್ಪ ಹೆಚ್ಚಿಗೆ ಕವರೇಜ್ ಬೇಕು' ಎಂದರು. ಅಷ್ಟೊತ್ತಿಗೆ ಕವಿತಾ ಚಿತ್ರದಲ್ಲಿ ಪಾತ್ರ ಮಾಡಲೇಬೇಕೆಂದು ನಾನು ನಿರ್ಧರಿಸಿಬಿಟ್ಟಿದ್ದೆ. ನನ್ನ ಆಸೆಯಂತೆ ಕವಿತಾ ನನ್ನ ಪಾತ್ರವನ್ನು ಇನ್ನಷ್ಟು ಗಟ್ಟಿಗೊಳಿಸಿದರು. ಈ ಪಾತ್ರ ಚಾಲೆಂಜಿಂಗ್ ಎನಿಸಿದ್ದರಿಂದ ಮಾನಸಿಕವಾಗಿ ಸಿದ್ಧಗೊಂಡೆ. ಕವಿತಾ ನನ್ನಲ್ಲಿ ಕಾನ್ಫಿಡೆನ್ಸ್ ತುಂಬಿದರು.

ಹುಬ್ಬಳ್ಳಿ ಕಡೆಯಿಂದ ಬರುವ ನಾಟಕ ತಂಡದ ರಂಗನಾಯಕಿಯ ಪಾತ್ರ ನನ್ನದು. ನನ್ನ ಸೌಂದರ್ಯ ಕಲೆಗೆ ಇಡೀ ಊರಿಗೇ ಊರೇ ಹುಚ್ಚೆದ್ದು ಕುಣಿಯುತ್ತದೆ. ಈ ಚಿತ್ರದಲ್ಲಿ ನಾನು ಹುಬ್ಬಳ್ಳಿ ಧಾಟಿಯಲ್ಲೇ ಮಾತಾಡಿದ್ದೀನಿ. 'ಇವತ್ ನಾಟಕಕ್ಕ ಎಷ್ಟ್ ರೊಕ್ಕಾ ಬಂದೈತಿ......' ಅಂತ ಮಾತಾಡ್ತ ಚಲೊ ಆ್ಯಕ್ಟಿಂಗ್ ಮಾಡೇನಿ ನೋಡ್ರಿ, ಓದುಗರಾ.... ನಿಮ್ಮನ್ನೆಲ್ಲಾ ಕೊರವಂಜಿಯಾಗಿ ಕಾಡ್ತೀನಿ... ಚಂದ್ರಶೇಖರ ಕಂಬಾರರ 'ಸಾಂಬಶಿವ ಪ್ರಹಸನ'ದ ಗಜನಿಂಬೆಯಾಗಿ ನಿಮಗೆಲ್ಲಾ ಗುಂಗು ಹಿಡಿಸ್ತೀನಿ. 'ಕಲಿತ ಹುಡುಗಿ ಕುದುರಿ ನಡಿಗೆ'ಯಲ್ಲಿ ಚೆಲ್ಲು ಚೆಲ್ಲಾಗಿ ಡ್ಯಾನ್ಸ್ ಮಾಡಿ ನಿಮ್ಮನ್ನು ರೋಮಾಂಚನ ಗೊಳಿಸ್ತೀನಿ.

ಈ ಹಿಂದೆ ನಾನು ಕೆಲವು ಚಿತ್ರಗಳಲ್ಲಿ ಫುಲ್ ಮಾಡ್ ಡ್ರೆಸ್‌ಗಳಲ್ಲಿ, ಕೆಲವದರಲ್ಲಿ ಸೀರೆಯುಟ್ಟ ಗೌರಮ್ಮನಾಗಿ ನಟಿಸಿದ್ದೇನೆ. ಆದರೆ, ಈ ಚಿತ್ರದಲ್ಲಿ ಹಲವಾರು ಬಗೆಯ ವೇಷಭೂಷಣಗಳಲ್ಲಿ ಮಿಂಚಿದ್ದೇನೆ.

ಆರಂಭದಲ್ಲಿ ಒಂದೆರಡು ದಿನ ಅಭಿನಯ ಕಷ್ಟವಾಗಿತ್ತು. ಆದರೆ ನಾನು ಪಾತ್ರದೊಳಗೆ ಪ್ರವೇಶ ಮಾಡಿದ ನಂತರ ಮುಂದೆಲ್ಲಾ ಸಲೀಸಾಗಿ ಅಭಿನಯಿಸಿದೆ. ಪಾತ್ರವೇ ಅಷ್ಟೊಂದು ಚೇತೋಹಾರಿಯಾಗಿದೆ. ಎಮೋಷನ್, ಭಾವತೀವ್ರತೆ, ಮೋಹಕತೆ, ಮಾದಕತೆಗಳೆಲ್ಲಾ ಬೆರೆತಿರುವ ಪರಿಪೂರ್ಣ ಪಾತ್ರದಲ್ಲಿ ನಟಿಸಿದ್ದು ನನಗೆ ಖುಷಿ ತಂದಿದೆ. ಸಿನಿಮಾ ಬ್ಯೂಟಿಫುಲ್ಲಾಗಿ ಬಂದಿದೆ. ಎಲ್ಲಾ ಹಾಡುಗಳೂ ಸೂಪರ್ಬ್... 'ಕೂಗಳತೆ ದೂರದಲ್ಲಿ...' ಹಾಡಂತೂ ನನಗೆ ತುಂಬಾ ಇಷ್ಟ. ಸಂಗೀತದ ಜೊತೆ ಆ ಹಾಡಿನ ಸಾಹಿತ್ಯವೂ ಮಾಧುರ್ಯದಿಂದ ತುಂಬಿದೆ. ಬೆಂಗಳೂರಿನ ಹುಡುಗನೇ ಆದ ಶ್ಯಾಂ ಒಳ್ಳೆ ಆ್ಯಕ್ಟರು. ಕಷ್ಟಪಟ್ಟು ಕನ್ನಡದಲ್ಲಿ ಮಾತಾಡಿದ್ದಾನೆ.

ಇನ್ನು ನನ್ನ 'ಫ್ರೆಂಡು' ರಮ್ಯ ಜೊತೆ ನಟಿಸಿದ್ದು ಒಂದು ಡಿಫರೆಂಟ್ ಅನುಭವ. ರಮ್ಯ ಇದ್ದಾಳೆಂದು ಆರಂಭದಲ್ಲಿ ಸ್ವಲ್ಪ ಹಿಂದೇಟು ಹಾಕಿದ್ದೆ. ಇಬ್ಬರು ಹೀರೋಯಿನ್‌ಗಳಿದ್ದಾಗ ಇಬ್ಬರಿಗೂ ತಮ್ಮ ಪಾತ್ರಕ್ಕೆ ಆದ್ಯತೆ ಇದೆಯೋ ಇಲ್ಲವೋ ಎಂಬ ಅಳುಕು ಇರುವುದು ಸಹಜ. ಆದರೆ, ಕವಿತಾ ನಮ್ಮಿಬ್ಬರಿಗೂ ಸಮಾನವಾಗಿ ಮತ್ತು ನಮ್ಮ ಟ್ಯಾಲೆಂಟಿಗೆ ಸೆಟ್ ಆಗುವಂತಹ ಪಾತ್ರಗಳನ್ನು ಕೊಟ್ಟು, ನಮ್ಮಿಬ್ಬರಿಂದಲೂ ಉತ್ತಮ ಅಭಿನಯವನ್ನು ಹೊರಹೊಮ್ಮಿಸಿದ್ದಾರೆ.

ಕವಿತಾ 'ತನನಂ ತನನಂ' ಎಂಬ ಸುಂದರವಾದ, ನಳನಳಿಸುವ ಹೂವನ್ನು ಕೊಟ್ಟಿದ್ದಾರೆ. ಆಡಿಯೋ ಮೂಲಕ ಅದರ ಸುವಾಸನೆ ಪಸರಿಸತೊಡಗಿದೆ. ಚಿತ್ರ ಇನ್ನೇನು ಥಿಯೇಟರ್‌ನಲ್ಲಿ ಬಂದೇ ಬಿಡುತ್ತೆ. ಮೂರು ಜಡೆಗಳ ಮಿಲನವನ್ನು ನೀವು ನೋಡಿ ಖಂಡಿತ ಎಂಜಾಯ್ ಮಾಡ್ತೀರಿ. ಸಿನಿಮಾ ಚಲೋ ಐತಿ... ನೀವು ತಪ್ಪದೆ ನೋಡ್ಬೇಕು. ನೋಡ್ತೀರಲ್ಲಾ....

See you... bye bye...

-ರಕ್ಷಿತಾ

(ನಿರೂಪಣೆ: ಪಿ.ಕೆ. ಮಲ್ಲನಗೌಡರ)

ಆತ್ತೂ ಕರೆದು ಔತಣ ಪಡೆದ ಅಂಬಿ

ಆ ಕಾಲ ಒಂದು ಇತ್ತು
ಅದು ನೆಹರು ಕಾಲ
ನೆಹರು ನಂತರ ಯಾರು?
ಭಾರತೀಯರನ್ನು ಕಾಡಿದ್ದ ಪ್ರಶ್ನೆ.

ಯಾಕೆ ಸರ್ಕಾರವನ್ನು ಯಶಸ್ವಿಯಾಗಿ ಮುನ್ನಡೆಸುವ ಧೀಮಂತ ನಾಯಕರು ಯಾರೂ ಇರಲಿಲ್ಲವೆ?

ಹಲವು ಜನ ಇದ್ದರು. ನೆಹರು ಅವರಿಗಿಂತ ಮೇಧಾವಿಗಳು; ಜನಪರ ಕಾಳಜಿ ಇದ್ದವರು ಇದ್ದರು. ಹಾಗಿದ್ದರೂ ಯಾಕೆ ಬಂತು ಈ ಚಿಂತನೆ?

ಇಂತಹ ಭ್ರಮೆ ಮೂಡಿಸಲು ಪೂರ್ವಭಾವಿ ಸಿದ್ಧತೆಯೇ ಹಾಗಿತ್ತು!

ದೇಶಕ್ಕೆ ಸ್ವಾತಂತ್ರ್ಯ ಬಂದಾಗ ನಾನು ಮಾಧ್ಯಮಿಕ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದೆ. ನಮ್ಮ ಉಪಾಧ್ಯಾಯರು ನೆಹರು ಅವರ ಹಿರಿಮೆಯನ್ನು, ಅವರ ತ್ಯಾಗ ಮನೋಭಾವವನ್ನ ಚಿತ್ರಿಸಿದ್ದು ಹಲವು ವರ್ಷಗಳ ಕಾಲ ಮಾಸಿಹೋಗಲೇ ಇಲ್ಲ. ಅವರು ಹೇಳಿದ್ದು ಏನು? ನೆಹರು ಬಹಳ ಶ್ರೀಮಂತ ಕುಟುಂಬದಿಂದ ಬಂದವರು. ಅವರು ಇಂಗ್ಲೆಂಡಿನಲ್ಲಿ ಓದುತ್ತಿದ್ದಾಗ ಹೇಗಿದ್ದರು ಗೊತ್ತೆ? ಅವರ ಶಾಲೆಗೆ ನಾಲ್ಕು ಬಾಗಿಲುಗಳು. ಆ ನಾಲ್ಕೂ ಬಾಗಿಲುಗಳ ಎದುರು ನಾಲ್ಕು ಕಾರುಗಳು ನೆಹರು ಅವರಿಗಾಗಿ ಕಾಯುತ್ತಾ ನಿಂತಿರುತ್ತಿದ್ದವು! ಅವರು ಯಾವ ಬಾಗಿಲಿನಿಂದ ಹೊರ ಬಂದರೂ ಒಂದು ಕಾರು ಸಿದ್ಧವಾಗಿರುತ್ತಿತ್ತು! ದೇಶಕ್ಕಾಗಿ ಇಂತಹ ಸೌಕರ್ಯವನ್ನು ತ್ಯಜಿಸಿದ ಮಹಾನ್ ವ್ಯಕ್ತಿ ನೆಹರು!

ಇಂತಹ ವಿಷಯವನ್ನು ಅಂತರ್ಗತ ಮಾಡಿಕೊಂಡ ನನ್ನಂತಹವರು, ಇಂತಹ ವಿವೇಕವನ್ನು ಬೋಧಿಸುತ್ತಿದ್ದ ಗುರುಗಳೇ ತುಂಬಿದ್ದ ಈ ದೇಶ; ಜೊತೆಗೆ ಇಂತಹ ವಿಷಯಗಳನ್ನೇ ಪ್ರಧಾನವಾಗಿ ಮೆರೆಸುತ್ತಿದ್ದ ಮಾಧ್ಯಮಗಳು ಈ ಪ್ರಶ್ನೆಯನ್ನು ಸಹಜವಾಗಿಯೇ ಹುಟ್ಟುಹಾಕಿದ್ದವು. ನೆಹರು ವಿರುದ್ಧವಾಗಿ ಯಾರು ಮಾತನಾಡಿದರೂ ನಮಗೆ ಶತ್ರುಗಳಂತೆ ಗೋಚರಿಸುತ್ತಿದ್ದರು!

ಇಂತಹ ಕಾಲದಲ್ಲಿ ನೆಹರು ಅವರು 'ನಾನು ನಿವೃತ್ತನಾಗುತ್ತೇನೆ' ಎಂದು ಹೇಳಿಯೋ, 'ನೆಹರು ನಿವೃತ್ತರಾಗಲು ಬಯಸುತ್ತಿದ್ದಾರೆ' ಎಂದು ಹೇಳಿಸುವುದರ ಮುಖಾಂತರವೋ ಜನರಲ್ಲಿ ತಲ್ಲಣ ಉಂಟು ಮಾಡುತ್ತಿದ್ದರು. ಜನರು 'ನೆಹರು ನಿವೃತ್ತರಾಗಬಾರದು' ಎಂದು ಗುಂಪು ಸೇರಿ ಒತ್ತಾಯಿಸಿದಾಗ ತಮ್ಮ ಅಧಿಕಾರ ನಿರ್ಬಾಧಿತ ಅಂತ ಖಚಿತಪಡಿಸಿಕೊಂಡು 'ನಾನು ನಿವೃತ್ತನಾಗುವುದಿಲ್ಲ' ಎಂಬಂತಹ ಹೇಳಿಕೆ ನೀಡುತ್ತಿದ್ದರು!

ಈ ನಾಟಕ ನೋಡಿ ಬೇಸತ್ತ ಕವಿ ಗೋಪಾಲಕೃಷ್ಣ ಅಡಿಗರು ಒಂದು ಕವನ ಬರೆದರು:

ಇನ್ನು ಭಯವಿಲ್ಲ
ನೆಹರು ನಿವೃತ್ತರಾಗುವುದಿಲ್ಲ!

ಈಗ ಯಾಕೆ ಇಷ್ಟೆಲ್ಲ ಪುರಾಣ ಅಂದರೆ ಚಲನಚಿತ್ರ ನಟ ಕಂ ಸಂಸದ ಅಂಬರೀಷ್ ಮಂತ್ರಿಯಾಗಿದ್ದಾರೆ.


ಮಂತ್ರಿ ಯಾಕೆ ಆದರು?
ಒಕ್ಕಲಿಗರಿಗೆ ನ್ಯಾಯ ದೊರಕಿಸಲು!

ರಾಜ್ಯಸಭೆ ಚುನಾವಣೆಯಲ್ಲೂ ಒಕ್ಕಲಿಗರನ್ನು ಕಡೆಗಣಿಸಲಾಗಿತ್ತು. ಅದನ್ನು ಸರಿದೂಗಿಸಲು ಈಗ ಒಕ್ಕಲಿಗ ಮಂತ್ರಿಸ್ಥಾನ!

ಇನ್ನು ರಾಜ್ಯದ ಒಕ್ಕಲಿಗ ಸಮುದಾಯ ನಿಶ್ಚಿಂತೆಯಿಂದ ಇರಬಹುದು! ಬೆಳೆ ಹಾಳಾಗಿರಬಹುದು. ವೈಜ್ಞಾನಿಕ ಬೆಲೆ ಸಿಗದೆ ರೈತ ನೇಣು ಹಾಕಿಕೊಂಡಿರಬಹುದು. ಸಕ್ಕರೆ ಕಾರ್ಖಾನೆಗಳು ಕಣ್ಣುಮುಚ್ಚುತ್ತಿರಬಹುದು. ಇಂತಹವು ಏನೇ ಇದ್ದರೂ ಜನ ನಿಶ್ಚಿಂತೆಯಿಂದ ಇರಬಹುದು. ಅಡಿಗರ ಧಾಟಿಯಲ್ಲೇ ಹೇಳುವುದಾದರೆ

ಇನ್ನು ಭಯವಿಲ್ಲ
ಅಂಬರೀಷ್ ಮಂತ್ರಿ ಆದರಲ್ಲ!

ಅಲ್ಲ ಅಂಬರೀಷ್ ಅವರನ್ನು ಒಕ್ಕಲಿಗರ ನಾಯಕ ಎಂದರೆ ಹೇಗಿರುತ್ತೆ ಅಂತ ಹಾಗೆ ಯೋಚಿಸಿದೆ. ಒಕ್ಕಲಿಗರೆಲ್ಲ ಐಶಾರಾಮಿ ಜೀವನ ಮಾಡ್ತ ಸೂಟು ಬೂಟು ಹಾಕಿಕೊಂಡು ಮೆರೆಯೋದು ಬಲು ಮಜವಾಗಿರುತ್ತೆ ಅಲ್ವಾ! ಹೊಲಗದ್ದೆ, ಮನೆಮಠದ ಗತಿ? ಮನೆ ಅರಮನೆಯಾಗುತ್ತೆ; ಹೊಲ-ಗದ್ದೇಲಿ ಪೈರು



ಹಸನಾಗಿ ಬೆಳೆಯುತ್ತೆ, ಅಂಬರೀಷಗಾರು ಅವರ ನಾಯಕರಲ್ವ!

ಕೆಲವರ ಪ್ರಕಾರ ಚಾಮುಂಡೇಶ್ವರಿ ಕ್ಷೇತ್ರವೇ ಅಂಬಿಯ ಮಂತ್ರಿಗಿರಿಗೆ ರಹದಾರಿ ಆಯಿತು ಎಂಬುದಾಗಿದೆ. ಅಂದರೆ ಚುನಾವಣೆಯ ಭೂತ ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳಿಗೆ ಪ್ರತಿಷ್ಠೆಯ ಪ್ರಶ್ನೆಯಾಗಿ ಕಾಡದಿದ್ದರೆ ಅದು ದೊರಕುತ್ತಿರಲಿಲ್ಲ ಎಂದ ಹಾಗಾಯಿತು. ಪರೋಕ್ಷವಾಗಿ ಇದು ಸಿದ್ಧರಾಮಯ್ಯ ವೀಕು, ಸ್ಟ್ರಾಂಗ್ ಮಾಡಲು ಬೇಕು ಅಂಬರೀಷ್ ಟಾನಿಕ್ಕು ಅಂತ ಆಗುವುದಿಲ್ಲವೆ? ಏನೇ ಆಗಿರಲಿ-

ಸಿದ್ದರಾಮಯ್ಯ ಹೆದರಬೇಡಣ್ಣ
ಅಂಬರೀಸಣ್ಣ ಮಂತ್ರಿ ಆದರಲ್ಲಣ್ಣ!

ಇನ್ನು ಕೆಲವು ರಾಜಕೀಯ ಪಂಡಿತರ ವಿಶ್ಲೇಷಣೆಯಂತೆ ಅಪ್ಪ-ಮಕ್ಕಳ ಸಾಮ್ರಾಜ್ಯ ಮುರಿಯಲು ಅಂಬರೀಷ್‌ಗೆ ಈ ಪಟ್ಟ ಅಂತೆ.

ಹೀಗಾದರೆ ಒಕ್ಕಲಿಗರಿಗೆಲ್ಲ ನಾವೇ ದೊಣ್ಣೆ ನಾಯಕರು ಅಂತ ಮೆರೀತಿರೋ ದ್ವಿಚಕ್ರಾಧಿಪತಿಗಳು ನೆಲಕಚ್ತಾರೆ. ಮುಂದೆ ನಮ್ಮ ರಾಜು ಬರ್‍ತರೆ ಅಂತಾ ಏನೋ ಮಂಡ್ಯ ನಗರದಲ್ಲಿ ಅಂಬರೀಷ್ ಬಳಗದ ಪಡ್ಡೆ ಹೈಕಳು ಒಂದು ದಿನ ಅಲ್ಲ ಅಂತ ಎರಡು ದಿವಸ ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಆನಂತರ-

ಹಾಕಿದರು ಗುಂಡು
ಆಗಿಲ್ಲವೇ ಮಂತ್ರಿ
ಮಂಡ್ಯದ ಗಂಡು!

ಮಂತ್ರಿಯಾಗಲು ಅಂಬರೀಷ್‌ಗೆ ದಕ್ಷತೆ ಇಲ್ಲವೆ? ಚಾಕಚಕ್ಯತೆ ಇಲ್ಲವೆ? ಮೂರು ಸಲ ಸಂಸದರಾಗಿದ್ದರೂ ಯಾಕೆ ಇಷ್ಟು ತಡವಾಯಿತು? ಮೊದಲ ಸಲ ಸಂಸದರಾದವರೇ ಮಂತ್ರಿಯಾಗಿ ಮೆರೆಯುತ್ತಿದ್ದಾರಲ್ಲ?

ಉತ್ತರ ಸ್ಪಷ್ಟ. ಅಂಬರೀಷ್ ಗುಣ ಸೋನಿಯಾಗೆ ತಿಳಿದಿತ್ತು.

ಏನು ಅವರ ಗುಣ?

ಸಂಸತ್ತು ಎಂದರೆ ಅವರಿಗೆ ವಾಕರಿಕೆ. ಅದೊಂದು ಹುಚ್ಚರ ಸಂತೆ ಅಂತ ಹೀಯಾಳಿಸಿದ್ದರು. ವಿಧಾನ ಸಭೆಗೆ ಬರುತ್ತಾರೆಂಬ ಪುಕಾರು ಇತ್ತು. ಅಧಿವೇಶನ ನಡೆಯುವಾಗ ದೆಹಲಿಗೆ ಹೋಗುತ್ತಿದ್ದರು. ಸಂಸತ್ ಭವನದ ಕಡೆಗೆ ಪಾದ ಬೆಳೆಸುತ್ತಿರಲಿಲ್ಲ!

ಇಂತಹವರನ್ನು ಮಂತ್ರಿ ಮಾಡುವುದಾದರೂ ಹೇಗೆ?

ಈಗಿನ ಮಂತ್ರಿಗಿರಿ? ಆತ್ತೂ ಕರೆದೂ ಪಡೆದ ಔತಣ!

ಅಲ್ಲ ಸಂಸತ್ತು ಹುಚ್ಚರ ಸಂತೆ ಅಂದಿದ್ದರು ಅಂಬರೀಷ್. ಈಗ ಅದರ ಮೇಲ್ವಿಚಾರಣೆ ಮಾಡಬೇಕಾಗಿದೆ. ಈಗ ಅವರು ಏನು? ಹೆಡ್ ಹುಚ್ಚಾನ ಅಥವಾ ಹುಚ್ಚರ ಸೂಪರ್‌ವೈಸರಾ? ಛೇ ಛೇ ಹಾಗನ್ನಬಾರದು. ಕಿರುತೆರೆಯಲ್ಲಿ ಅವರೇ ಅಪ್ಪಣೆ ಕೊಡಿಸಿದ್ದಾರೆ. ಸಂಸತ್ತಿಗೆ ನಾನು ಯಾಕೆ ಹೋಗ್ತಿರಲಿಲ್ಲ ಅಂದರೆ ಅಲ್ಲಿ ಮೇಧಾವಿಗಳು ಇರ್‍ತಾರೆ. ನಮ್ಮ ಪಕ್ಷದಲ್ಲಿ ಇಂತಹವರು ಹಲವರು ಇದ್ದಾರೆ. ಅವರಿಗೆ ಅವಕಾಶ ಸಿಗಲಿ ಅಂತ ಹೋಗುತ್ತಿರಲಿಲ್ಲ! ಅಂದರೆ ಅವರು ಮೇಲ್ವಿಚಾರಣೆ ಮಾಡಬೇಕಾಗಿರುವುದು ಹುಚ್ಚರನ್ನಲ್ಲ! ಮೇಧಾವಿಗಳನ್ನ! ಅದೂ ನಿಜವೆ. ಹುಚ್ಚರಿಗೂ ಮೇಧಾವಿಗಳಿಗೂ ಅಷ್ಟೇನೂ ಅಂತರ ಇಲ್ಲವಂತೆ!

ಅಣಕ

ಗದ್ದರ್ ಪ್ರೇಮಿ ವಚನಭಕ್ತ ಆದ ಕಥ...

ಕಿರುತೆರೆ ನೋಡುತ್ತಿದ್ದೆ

ಕಿತ್ತೂರು ರಾಣಿ ಚೆನ್ನಮ್ಮ ಉತ್ಸವ... ನೇರಪ್ರಸಾರ ಬರುತ್ತಿತ್ತು,

ಪ್ರಸಿದ್ಧ ಜನಪದ ಗಾಯಕ ಪಿಚ್ಚಳ್ಳಿ ಶ್ರೀನಿವಾಸ್ ಅವರಿಂದ ಗಾಯನ ಆ... ಹೇಳಿದರು. ಬದುಕು ಕುರಿತ ಒಂದು ಹಾಡು ಪ್ರಸಾರ ಆಯಿತು. ನಂತರ ಪಿಚ್ಚಳ್ಳಿ 'ಈ... ಭಾಗಕ್ಕೆ ಬಂದು ವಚನ ಹಾಡದಿದ್ದ... ಅಫಚಾರ' ಅಂತ ಹೇಳಿ 'ಎತ್ತಣ ಮಾಮ... ಎತ್ತಣ ಕೋಗಿಲೆ' ಹಾಡಲು ಪ್ರಾರಂಭಿಸಿದರು

ಸಮಸ್ಯೆ ಆದದ್ದು ಅಲ್ಲಿ. ಇವರು ಹಾಡ... ಪ್ರಾರಂಭಿಸುತ್ತಿದ್ದಂತೆಯೇ ನಿರೂಪಕರು ಕಿತ್ತೂರು ರಾಣಿಯ... ವಿಷಯ ಪ್ರಸ್ತಾಪಿಸಲು ಪ್ರಾರಂಭಿಸಿದರು. ಇಡೀ ವಚನ... ಉದ್ದಕ್ಕೂ ಈ ಕಿರಿಕಿರಿ ನಡೆದೇ ಇತ್ತು, ವಚನಗಾಯ... ನಿರೂಪಕರ ಗಂಟಲಿನ ಸದ್ದಿನಲ್ಲಿ ಹುದುಗಿಹೋಯಿತು...

ಇಂತಹ ಉತ್ಸವದ ಸಂದರ್ಭದಲ್ಲಿ ಕಿತ್ತೂರಿನ ಪರಿಚಯ... ಮಾಡಿಕೊಡಬೇಕಾದ್ದು ಸಹಜ. ಆದರೆ ಗಾಯಕನ ದನಿಯನ್ನ... ನುಂಗಿಹಾಕುವ ವಿವರಣೆಯನ್ನು ಬಿಡುವಿನ ವೇಳೆಯ... ನೀಡಲಾಗುತ್ತಿರಲಿಲ್ಲವೆ? ಹಾಡು ಕೇಳಲು ಕಾತರಿಸುತ್ತಿ... ಕಿವಿಗಳಿಗೆ ಇದು ಕಾಯ್ದ ಸೀಸ ಸುರಿದಂತಾಗಲ್ಲವೆ?

ಕುವೆಂಪು ಅವರು 'ನೂರು ದೇವರನೆಲ್ಲ ನೂಕಾ... ದೂರ' ಆಕಾಶವಾಣಿಯಲ್ಲಿ ಪ್ರಸಾರ ಆಗುತ್ತಿದ್ದ ರೀತಿಯನ... ಒಮ್ಮೆ ಹೇಳಿದ್ದರು. ನೂರು ದೇವರನೆಲ್ಲ ಎಂಬುದು... ಗಾಯಕ ಅಥವಾ ಗಾಯಕಿ ಶುಶ್ರಾವ್ಯವಾಗಿ ಹಾಡುತ್ತಿದ್ದುದ... ಕೇಳಿಸುತ್ತಿತ್ತಂತೆ. ನೂಕಾಚೆ ದೂರ ಎಂಬ ಮಾತುಗಳನ... ವಾದ್ಯಪರಿಕರಗಳ ಸದ್ದು ನುಂಗಿಹಾಕುತ್ತಿತ್ತಂತೆ! ಹಾಗೇನ... ದರೂ ಇದೂ ಪಿಚ್ಚಳ್ಳಿಗೆ ಅವಕಾಶ ಕಲ್ಪಿಸಿದ್ದೂ ಆಯಿತ... ಅದರ ಪ್ರಸಾರವನ್ನು ಯಾರಿಗೂ ಕೇಳಿಸದಂಗೆ ಮಾಡಿದ... ಆಯಿತು ಅನ್ನುವ ಹುನ್ನಾರ ಅನ್ನುವ ಅನುಮಾನ ಬರೋದ... ಸಹಜ ಅಲ್ವಾ.

ಇದಕ್ಕಿಂತಲೂ ಮಜವಾಗಿದ್ದದ್ದು ನಂ ಎಂ.ಪಿ ಪ್ರಕಾ... ಆಡಿದ ಮಾತು. ಪಿಚ್ಚಳ್ಳಿಗೆ ಸನ್ಮಾನ ಮಾಡುವ ಮುಂ... ಅವರು 'ಈ ಪಿಚ್ಚಳ್ಳಿ ಗದ್ದರ್ ಹಾಡುಗಳನ್ನ ಹಾಡುತ್ತಿ... ನಮ್ಮ ಜೊತೆ ಸೇರಿ ವಚನ ಹಾಡುವ ಹಾಗಾದ' ಅಂದರು

ಅಂದರೆ ಗದ್ದರ್ ಒಬ್ಬ ಧೂರ್ತ! ಅವನ ಜೊ... ಸೇರಿ ಇವನು ಹಾಳಾಗಿದ್ದ, ನಾವು ಉದ್ಧಾರ ಮಾಡಿದೆವ...

ನಾನು ತಿಳಿದಂತೆ ಪಿಚ್ಚಳ್ಳಿ ವಚನಗಳನ್ನು ಬಹ... ಹಿಂದಿನಿಂದಲೂ ಹೃದಯತುಂಬಿ ಹಾಡುತ್ತಿದ್ದರು. ಗದ್ದ... ಅನ್ನು, ಅವರ ಸಾಹಿತ್ಯವನ್ನು ಅಷ್ಟೇ ಪ್ರೀತಿಸುತ್ತಿದ್ದರು. ಇವರು ಯಾವಾಗ ಗದ್ದರ್ ದ್ವೇಷಿಯಾದರು? ... ಮತಾಂತರ ಎಂದು ನಡೆಯಿತು? ಗದ್ದರ್ ಪ್ರೇಮಿ... ವಚನದೀಕ್ಷೆ. ನೀಡಿದ ಮಹಾಶಯರಾಗಲಿ ಅಥವಾ ದೀ... ಪಡೆದವರಾಗಲೀ ವಿವರಣೆ ನೀಡಿದರೆ ಪಾಮರರಿಗೆ ಅ... ಕೂಲ ಆದೀತು.

ಅಂದಹಾಗೆ ಎಂ.ಪಿ. ಪ್ರಕಾಶ್‌ರ ಪ್ರೀತಿಯ ಮಠದವ... ಗದ್ದರ್‌ಗೆ 'ಬಸವಶ್ರೀ' ಪ್ರಶಸ್ತಿ ನೀಡಿ ಗೌರವಿಸಿದರಲ್ಲಾ... ಅವರದ್ದೇ ತಪ್ಪು ತಿಳಿವಳಿಕೆ ಅಂತೀರಾ?

-ಎಚ್.ಎಲ್. ಕೇಶವಮೂರ್ತಿ...

ಚಿಂತನೆಗೆ ಹಚ್ಚಿದ ಬರಹಗಳು

ಜೆ. ರಾಜಶೇಖರ್, ಪಟ್ಟಾಭಿರಾಮ ಸೋಮಯಾಜಿ ಮತ್ತು ಹರ್ಷಾದ್ ವರ್ಕಾಡಿ ಇವರು ಬರೆದ 'ಪೊಲೀಸ್ ಟೆರ್‍ರರ್' ಎಂಬ ವಿಶೇಷ ವರದಿಗೆ ನನ್ನ ಪ್ರತಿಕ್ರಿಯೆ. ಈ ವರದಿಯನ್ನು ಓದಿದಾಗ, ಮಂಗಳೂರು ಕರ್ನಾಟಕ ಗುಜರಾತ್ ಆಗುವ ಸ್ಪಷ್ಟವಾದ ಲಕ್ಷಣ ಗೋಚರಿಸುತ್ತದೆ. ಇತ್ತೀಚಿನ ಕೋಮು ಹಿಂಸೆಯನ್ನು ಅಲ್ಲಿನ ಸ್ಥಳೀಯ ಪತ್ರಿಕೆಗಳು ಅತೀ ರಂಜನೀಯವಾಗಿ ಮತ್ತು ಪ್ರಚೋದನಾತ್ಮಕ ರೀತಿಯಲ್ಲಿ ಚಿತ್ರಿಸಿದ್ದವು.

ಸ್ಥಳೀಯ ಪತ್ರಿಕೆಗಳ ಕಥೆ ಇದಾದರೆ ಬೆಂಗಳೂರಿನ ಕೆಲ ವಾರ ಪತ್ರಿಕೆಗಳು ಮತ್ತು arm chair ವರದಿಗಾರರು ಹಿಂದೂ ದಲ್ಲಾಳಿ, ಮುಸ್ಲಿಂ ದಲ್ಲಾಳಿ ಮತ್ತು ಪೊಲೀಸ್ ವಾರ್ತೆಗಳನ್ನೇ authentic ಎನ್ನುವ ರೀತಿಯಲ್ಲಿ ವರದಿ ಮಾಡಿ ಎರಡು ಕೋಮಿನವರೂ ಪರಸ್ಪರ ಸಂಶಯದಿಂದ ಬದುಕು ಸಾಗಿಸುವಂತೆ ಮಾಡಿದ್ದವು.

ಆದರೆ 'ಲಂಕೇಶ್' ವಾರಪತ್ರಿಕೆ ವಿಭಿನ್ನವಾಗಿ ವರದಿ ಮಾಡಿದೆ. ಹಿಂದೂತ್ವವಾದಿಗಳೊಂದಿಗೆ ಕೈ ಜೋಡಿಸಿದ ಆಡಳಿತ, ನೊಂದವರಿಗೆ, ಅಸಹಾಯಕರಿಗೆ ನೆರವಾಗಬೇಕಿದ್ದ ಪೊಲೀಸರೇ ಮತಾಂಧರ ದಲ್ಲಾಳಿಗಳಂತೆ ವರ್ತಿಸಿದ್ದನ್ನು ನಿಮ್ಮ ವರದಿ ಸ್ಪಷ್ಟಪಡಿಸುತ್ತದೆ.

ಮಂಗಳೂರು ಕೋಮುಗಲಭೆಯ ಪ್ರಯೋಗಾಲಯವಾಗದಿರಲಿ. ಬದಲಾಗಿ ಸಹಬಾಳ್ವೆ ಸಾಮರಸ್ಯದ ಮಂಗಳೂರು ನಿತ್ಯ ಉದಯಿಸಲಿ ಎಂದು ಆಶಿಸುತ್ತೇನೆ.

-ಟಿ. ರಂಗಪ್ಪ, ಮಡಿಕೇರಿ

ಇತ್ತೀಚೆಗೆ ಕೊಡಗು ಜಿಲ್ಲೆಯ ವರಿಷ್ಠಾಧಿಕಾರಿಗಳ ಪತ್ನಿ, ತಾಯಿ ಹಾಗೂ ಡ್ರೈವರ್ ಮಂಗಳೂರಿನ ಪರಂಗಿಪೇಟೆಯ ಹತ್ತಿರ ಕ್ವಾಲೀಸ್‌ನಲ್ಲಿ ಪ್ರಯಾಣಿಸುತ್ತಿದ್ದಾಗ ಅವರನ್ನೆಲ್ಲ ಯಮರಾಯ ಎಳೆದುಕೊಂಡು ಹೋದ.

ಈ ದುರಂತ ಘಟನೆಯ ನಂತರ ಬಂದ 'ಲಂಕೇಶ್'ನಲ್ಲಿ ಗೌರಿ ಲಂಕೇಶರ ಸಂಪಾದಕೀಯ ಮತ್ತು 'ಪೊಲೀಸ್ ಟೆರ್‍ರರ್' ಲೇಖನ ಕೇಸರಿ ಬಣ್ಣದ ಕಾಮಾಲೆ ಕಣ್ಣುಗಳನ್ನು ತೆರೆಸದಿದ್ದರೂ ಚಿಂತೆಯಿಲ್ಲ, ಒಂದಷ್ಟು ಯುವ ಮನಸ್ಸುಗಳ ಬ್ರೈನ್ ಕ್ಲೀನಿಂಗ್ ಆಗಬಹುದು ಎಂಬ ದೂರದ ಆಸೆ ನನ್ನ ಮನಸ್ಸಿನಲ್ಲಿ...



ಪರಂಗಿಪೇಟೆಯ ದುರಂತದಲ್ಲಿ ಸತ್ತವರ ವಿಚಾರ ಇಲ್ಲಿ ಏತಕ್ಕೆ ಅಂದರೆ ಕೋಮುಗಲಭೆಯ ಬೆಂಕಿಯ ಕಾವು ಆರುವ ಮೊದಲೆ ಸತ್ತ ಹಿಂದೂಗಳ ದೇಹಗಳನ್ನು ಮುಟ್ಟಿದವರು, ಸಂತೈಸಿದವರು, ಆಸ್ಪತ್ರೆಗೆ ಎತ್ತಿಕೊಂಡು ಹೋದವರು ಈ ಪರಂಗಿಪೇಟೆಯ ಖಾದರ್, ಫಾರೂಕ್, ಮತ್ತಿತರರು....

ಕೆ.ಆರ್. ವಿದ್ಯಾಧರರ 'ಟಿಪ್ಪು ಅಂದರೆ ಸ್ವಾತಂತ್ರ್ಯ' 'ಪೊಲೀಸ್ ಟೆರ್‍ರರ್', 'ಜನರನ್ನು ತೃಪ್ತಿಪಡಿಸಲು ಮರಣದಂಡನೆಯೆ?' ಈ ಎಲ್ಲಾ ಬರವಣಿಗೆಗಳು ಓದುಗರನ್ನು ಚಿಂತನೆಗೆ ಹಚ್ಚಿವೆ.

-ಅಲ್ಲಾರಂಡ ವಿಠಲ್ ನಂಜಪ್ಪ,
ಮಡಿಕೇರಿ

ಹೊಸ ತೆಗ...

ಕಣ್ಣಾಮುಚ್ಚಾಲೆ (ಲಂಕೇಶ್ 25.10.06)ಯಲ್ಲಿನ ಡಿ.ಎಲ್. ನಾಗರಾಜ್ ಹರಪನಹಳ್ಳಿಯವರ ಪ್ರಶ್ನೆಗೆ ನೀಡಲಾದ ಉತ್ತರದಲ್ಲಿನ 'ವಂಚಕ ತಕ್ಕಡಿ' ಬದಲು 'ಬಿಪ್ಪುತಕ್ಕಡಿತನ' ಎಂದು ಬದಲಿಸಿ ಓದಿದರೂ ಅರ್ಥ ಬದಲಾಗದು.

ಕನ್ನಡದಲ್ಲಿ ಬಳಕೆಗೆ ಬಂದಿರುವ ಪರ್ಷಿಯನ್/ಅರಬ್ಬೀ ಮೂಲದ ಅನೇಕ ಪದಗಳಿಗೆ ಟಿಪ್ಪುವಿನ ಭಾಷಾ ಹೇರಿಕಾ ನೀತಿಯೇ ಕಾರಣ ಎಂದು ಆತನಿಗೆ ಮರಣೋತ್ತರ "ಕನ್ನಡ ದ್ರೋಹಿ" ಪ್ರಶಸ್ತಿ ನೀಡಿದವರ ಕನ್ನಡ ಪ್ರೇಮದ ಒಳಗುಟ್ಟು ಎಲ್ಲರಿಗೂ ಗೊತ್ತಿದ್ದದ್ದೆ.

ಅಂದಹಾಗೆ, ಕೃಷಿ ಹಾಗು ಜನಸಾಮಾನ್ಯರು... ಬಳಸುವಂತಹ ಈ ರೀತಿಯ ಪರದೇಶಿ ಪದಗಳೇ... ಏಕೆ ಜನಪ್ರಿಯವಾಯಿತು ಎಂಬುದು ಚಿಂತ... ನಾರ್ಹ ವಿಷಯವಾಗಿದೆ. ನಾವು ಕನ್ನಡದ್ದೇ ಎಂದು... ಭಾವಿಸುವ 'ರೈತ' ಎನ್ನುವ ಪದ... (ರೈತ ಸಂಘ, ರೈತಾಪಿ ವರ್ಗ... ಇತ್ಯಾದಿ) ಕನ್ನಡಕ್ಕೆ, ಮುಸ್ಲಿಂ... ದೊರೆಗಳ ಕೊಡುಗೆಯೇ ಹೊರತು... ಇದು ಕನ್ನಡದ್ದಲ್ಲ.ವಾಸ್ತವವಾಗಿ 'ರಅಯ್ಯತ್' ಎನ್ನುವ... ಅರಬ್ಬೀ ಪದವೇ ಇದಕ್ಕೆ ಮೂಲ. ಕುರುಬರಿಗೆ... ಹೊಂದಿದಂತೆ ರಯಾ ಎನ್ನುವ ಪದದಿಂದ... ಹುಟ್ಟಿದ ಈ 'ರಅಯ್ಯತ್' ಪದದ ಅರ್ಥ ಗೇಣಿಕೃಷಿಕ... ಎಂದು.

ಪರ್ಷಿಯನ್ ಭಾಷೆಗೆ ಮಾನ್ಯತೆ ನೀಡಿರುವ... ಕಾರಣಕ್ಕಾಗಿ ಹಾಗು ಶೃಂಗೇರಿಗೆ ಬರೆದ ಪತ್ರಗಳು... ಕನ್ನಡದಲ್ಲಿದ್ದರೂ ಸಹಿ ಪರ್ಷಿಯನ್‌ನಲ್ಲಿರುವ ಕಾರಣಕ್ಕಾ... ಕೆಲ ಸೋಕಾಲ್ಡ್ ದೇಶಭಕ್ತರುಗಳು ಅಂತಹ ಟಿಪ್ಪುವನ್ನೇ... ದ್ರೋಹಿ ಎಂದಿರಬೇಕಾದರೆ ತಮ್ಮ ಸಂಘದ ಹೆಸರಲ್ಲಿ... ಅರಬ್ಬೀ ಭಾಷೆಯ ಪದ ಬಳಸಿರುವ ರೈತ ಸಂಘವೂ... ಮುಂದೊಮ್ಮೆ ದ್ರೋಹಿ ಆರೋಪ ಹೊರಬೇಕಾಗ... ಬಹುದು, ಯಾರಿಗ್ಗೊತ್ತು?

-ರವಿ ಪುತ್ತೂರ, ದಕ್ಷಿಣ ಕನ್ನಡ

ದುಷ್ಟತನವನ್ನು ಚಿಗುರಿನಲ್ಲೇ ಚಿವುಟಿ ಹಾಕು, ಇಲ್ಲವಾದರೆ ಅದು ನಿನ್ನನ್ನೇ ನಾಶ ಮಾಡುತ್ತದೆ

ಮದುವೆಯೆಂಬ ಪರೀಕ್ಷೆಯಲ್ಲಿ ನಾನು ಪಾಸಾದೆ.

ನಿಜವಾಗಿಯೂ ಮದುವೆಯೆಂಬುದು ಪ್ರತಿಯೊಬ್ಬನಿಗೂ ಒಂದು ದೊಡ್ಡ ಪರೀಕ್ಷೆ. ಆದರೆ ಈ ಪರೀಕ್ಷೆಯಲ್ಲಿ ನಾನು ಅದೃಷ್ಟವಂತ. ನನಗೆ ತಕ್ಕುದಾದ ಹೆಂಡತಿ ಸಿಕ್ಕಿದ್ದಾಳೆ. ಆಕೆಯ ಪ್ರತಿಭೆ, ಗುಣ, ಸರಳತೆ ಇವೆಲ್ಲವೂ ನನಗೆ ನೆರವಾಗಿವೆ. ಇವತ್ತು ನಾನು ಇಷ್ಟು ಯಶಸ್ಸು ಮತ್ತು ಸಂತೋಷದಿಂದ ಜೀವನ ನಡೆಸುತ್ತಿದ್ದರೆ ಅದಕ್ಕೆ ಗೀತಾಳ ಕೊಡುಗೆ ಬಹಳಷ್ಟಿದೆ.

ಮದುವೆಯ ಮುನ್ನ, ನಾನು ನಟನಾಗುವ ಮುನ್ನ ನಾನು ಮತ್ತು ಗೀತಾ ಏನೇನು ಮಾತಾಡಿಕೊಂಡಿದ್ದೆವೋ ಅದೆಲ್ಲವನ್ನೂ ನಾವಿಬ್ಬರೂ ನಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದೇವೆ. ಪ್ರತಿಯೊಬ್ಬನೂ ತನ್ನ ಲೈಫ್ ಪಾರ್ಟನರ್ ಆಯ್ಕೆ ಮಾಡುವಲ್ಲಿ ಗೆದ್ದರೆ, ಆತ ಜೀವನವನ್ನೇ ಗೆದ್ದಂತೆ. 'ಗುಡ್ ಬಿಗಿನಿಂಗ್ ಈಸ್ ಹಾಫ್ ದಿ ಬ್ಯಾಟಲ್ ವನ್' ಅಂತ ಹೇಳುತ್ತಾರಲ್ಲಾ ಆ ಮಾತು ಮದುವೆ ವಿಷಯಕ್ಕೆ ಸರಿ ಹೊಂದುತ್ತೆ ಎಂಬುದು ನನ್ನ ಅನುಭವದ ಮಾತು.

ಮತ್ತೆ ಫ್ಲ್ಯಾಷ್‌ಬ್ಯಾಕಿಗೆ ಹೋಗೋಣ. ನಮ್ಮಿಬ್ಬರ ಮದುವೆಯ ನಂತರ ನಾವು ಆನಂದದಿಂದ ಹನಿಮೂನಿಗೆ ಹೋಗಲಾಗಲಿಲ್ಲ. ಬದಲಾಗಿ ನಾನು 'ಆನಂದ್' ಸಿನಿಮಾದ ಡಬ್ಬಿಂಗ್‌ಗೆ ಪ್ರಸಾದ್ ಸ್ಟುಡಿಯೋಗೆ ಹೋಗಬೇಕಿತ್ತು. ಏಕೆಂದರೆ, ಗೀತಾಳನ್ನು ಮದುವೆಯಾಗುವ ಮೂಲಕ ನಾನು ವೈಯಕ್ತಿಕ ಜೀವನದಲ್ಲಿ ಗೆದ್ದಿದ್ದರೂ, ವೃತ್ತಿ ಜೀವನದ ಮೊದಲನೆ ಪರೀಕ್ಷೆಯನ್ನೇ ಇನ್ನೂ ಎದುರಿಸಿರಲಿಲ್ಲ.

ಡಬ್ಬಿಂಗ್ ಮಾಡುವುದು ನನಗೆ ಹೊಸ ಅನುಭವವಾಗಿದ್ದರಿಂದ ಆರಂಭದಲ್ಲಿ ಸ್ವಲ್ಪ ಕಷ್ಟವೇ ಆಯಿತು. ಆದರೂ ಹೇಗೋ ಕಷ್ಟಪಟ್ಟು ಡಬ್ಬಿಂಗ್ ಮಾಡಿದೆ. 'ಆನಂದ್' ಚಿತ್ರದಲ್ಲಿ ನನ್ನ ಡೈಲಾಗ್ ಡೆಲಿವರಿಯಲ್ಲಿ ಕೆಲವೊಂದು ತಪ್ಪುಗಳಿದ್ದವು ಅಂತ ನನಗೆ ಗೊತ್ತು, ಅದಕ್ಕೆ ಮುಖ್ಯ ಕಾರಣ ವೇಗವಾಗಿ ಮಾತನಾಡುವ ನನ್ನ ಶೈಲಿ. ಹೀಗಾಗಿ ತೆರೆಯ ಮೇಲಿನ ತುಟಿ ಚಲನೆಗೆ ಹೊಂದುವಂತೆ ಡಬ್ ಮಾಡುವುದು ಸುಲಭದ ಕೆಲಸವಾಗಿರಲಿಲ್ಲ. ನಾನು ಡಬ್ ಮಾಡಿದ ನಂತರ ನಿರ್ದೇಶಕರು 'ಪರವಾಗಿಲ್ಲ' ಅಂದರು. ಕೆಲವರು 'ಇಟ್ ವಾಸ್ ನಾಟ್ ಸೋ ಬ್ಯಾಡ್' ಅಂದರೆ, ಇನ್ನು ಹಲವರು 'ಇಟ್ಸ್ ಓಕೆ' ಅಂದರು.

ಮೇ 19 ನಾನು ಮದುವೆಯಾದ ದಿನ. ಅದಾದ ಒಂದು ತಿಂಗಳ ನಂತರ ಜೂನ್ 19ರಂದು 'ಆನಂದ್' ಬಿಡುಗಡೆಯಾಗಬೇಕೆಂದು ಹಿರಿಯರು ಮೊದಲೇ ನಿರ್ಧರಿಸಿದ್ದರು. ಹೀಗಾಗಿ ಈ ಒಂದು ತಿಂಗಳ ಕಾಲ ನಾನು ಹೊಸದಾಗಿ ಮದುವೆ ಆಗಿರುವ ಗಂಡು ಎಂಬುದನ್ನು ಮರೆತು ಚಿತ್ರಕ್ಕೆ ಸಂಬಂಧಪಟ್ಟ ಕೆಲಸಗಳಲ್ಲಿ ಮಗ್ನನಾಗಿದ್ದೆ. "ಕಾಯಕವೇ ಕೈಲಾಸ" ಎಂದು ಬಸವಣ್ಣನವರು ಹೇಳಿದ್ದನ್ನು ನನ್ನ ಅಪ್ಪಾಜಿ ನನಗೆ ಹೇಳುತ್ತಿದ್ದುದೇ ನನಗೆ ಸ್ಫೂರ್ತಿ ನೀಡಿತ್ತು. ಅಪ್ಪಾಜಿ ಕೂಡ, ಮನೆಯಲ್ಲಿ ಯಾವುದೇ ದೊಡ್ಡ ಸಮಾರಂಭ ಇದ್ದರೂ ಯಾವತ್ತೂ ಚಿತ್ರೀಕರಣಕ್ಕೆ ಚಕ್ಕರ್ ಹೊಡೆದವರಲ್ಲ. ಯಾವುದೇ ಕಾರಣಕ್ಕೆ ನಿರ್ಮಾಪಕರಿಗೆ ತೊಂದರೆ ಕೊಟ್ಟವರಲ್ಲ. ಇದನ್ನೆಲ್ಲಾ ನೋಡುತ್ತಾ ಬೆಳೆದ ನನಗೆ ಹನಿಮೂನಿಗಿಂತ ಡಬ್ಬಿಂಗ್ ಮುಖ್ಯ ಅನ್ನಿಸಿದ್ದು ಸಹಜ.

ಡಬ್ಬಿಂಗ್ ಆದನಂತರ ಚಿತ್ರದ ರೀ ರೆಕಾರ್ಡಿಂಗ್ ಸಂದರ್ಭದಲ್ಲೂ ನಾನು ಆಗಾಗ ಸ್ಟುಡಿಯೋಗೆ ಹೋಗಿಬರುತ್ತಿದ್ದೆ. ಕೊನೆಗೂ ಜೂನ್ ತಿಂಗಳಲ್ಲಿ 'ಆನಂದ್' ಚಿತ್ರದ ಮೊದಲ ಕಾಪಿ ರೆಡಿಯಾಯಿತು. ಆಗ ಒಂದು ದಿನ ನಾವೆಲ್ಲ ಊಟ ಮಾಡುತ್ತಿದ್ದಾಗ "ಆನಂದ್ ರೆಡಿಯಾಗಿದೆ, ನಾವೆಲ್ಲಾ ಯಾವಾಗ ನೋಡೋಣ?" ಎಂದು ಅಮ್ಮ ಅಪ್ಪಾಜಿಯವರನ್ನು ಕೇಳಿದಾಗ ನನ್ನ ಎದೆಬಡಿತ ಹೆಚ್ಚಾಯಿತು. ಅವತ್ತು ರಾತ್ರಿ ನನಗೆ ನಿದ್ದೆಯೇ ಬರಲಿಲ್ಲ.

ಒಂದು ವೇಳೆ ನನ್ನನ್ನು ನಾಯಕ ನಟನಾಗಿ ಜನ ಸ್ವೀಕರಿಸದಿದ್ದರೆ ನಾನೇನು ಮಾಡಬೇಕು? ಎಂಬ ಪ್ರಶ್ನೆ ನನ್ನನ್ನು ಕಾಡುತ್ತಿತ್ತು. ಈ ಅಂಕಣದಲ್ಲಿ ಮೊದಲೇ ಹೇಳಿದಂತೆ, ಮತ್ತೆ ಕಾಲೇಜಿಗೆ ಹಿಂದಿರುಗಿ ಬಿ-ಫಾರ್ಮ್ ಮಾಡಿದರಾಯಿತು ಎಂದುಕೊಂಡೆ. ಆದರೆ ಇದನ್ನು ನಾನು ಅಪ್ಪಾಜಿಗಾಗಲೀ, ಅಮ್ಮನಿಗಾಗಲೀ, ಗೀತಾಳಿಗಾಗಲೀ ಹೇಳಲಿಲ್ಲ.

ಇವರರ್ಥ 'ಆನಂದ್' ಚಿತ್ರದ ಬಗ್ಗೆ ನನಗೆ ವಿಶ್ವಾಸ ಇರಲಿಲ್ಲ ಅಂತಲ್ಲ, ಆದರೂ ಯಾವುದೇ ವಿಷಯದ ಬಗ್ಗೆ ಓವರ್ ಕಾನ್ಫಿಡೆಂಟ್ ಆಗಿರಬಾರದೆಂಬ ಮುನ್ನೆಚ್ಚರಿಕೆ ಅಷ್ಟೆ. ಚಿತ್ರ ಬಿಡುಗಡೆಯಾಗುವ ಮೊದಲು ನಮ್ಮ ಕುಟುಂಬದ ಸದಸ್ಯರೆಲ್ಲಾ 'ಆನಂದ್' ಚಿತ್ರ ನೋಡುವುದೆಂದು ನಿರ್ಧರಿಸಿದರು.



ಅಜ್ಜಿಯ 'ಆನಂದ' ಮುತ್ತುರಾಜನನ್ನು ಮೀರಿಸಿದ್ದೀಯಾ!


ನನ್ನ ಮೊದಲ ಸಿನಿಮಾ ನೋಡಿದಾಗ ಅಜ್ಜಿಗೆ ಆ ದಿನಗಳಲ್ಲಿ ನಾನು ಹೇಳುತ್ತಿದ್ದ ಮಾತುಗಳು ನೆನಪಾದವೋ ಏನೋ? ''ನಿಜಕ್ಕೂ ನೀನು ಮುತ್ತುರಾಜನನ್ನು ಮೀರಿಸಿ ನಟಿಸಿದ್ದೀಯಾ'' ಎಂದು ಅಜ್ಜಿ ಹೇಳಿದಾಗ ಆಕೆಯ ಕಣ್ಣಲ್ಲಿ ಮಾತ್ರವಲ್ಲ, ನನ್ನ ಕಣ್ಣಲ್ಲೂ ನೀರಹನಿ ಇಳಿಯಿತು.

ನಾನು ಚಿಕ್ಕವನಾಗಿದ್ದಾಗ ಹಲವಾರು ಬಾರಿ ಲಕ್ಷ್ಮಮ್ಮ ಅಜ್ಜಿಗೆ "ನೋಡು.... ನಾನ್ ಬರ್ತೀನಿ ನೋಡ್ತಿರು.... ಮುತ್ತುರಾಜ್, ಮುತ್ತುರಾಜ್ ಅಂತ ಯಾವಾಗ್ಲೂ ಬಡ್ಕೋತೀಯಲ್ಲಾ...? ಆ ಮುತ್ತುರಾಜನನ್ನೇ ಹಾರಿಸಿಬಿಡ್ತೀನಿ ನೋಡು" ಎಂದು ಹೇಳಿ ತಮಾಷೆಯಿಂದ ಚುಡಾಯಿಸುತ್ತಿದ್ದೆ. ಆಕೆಗೆ ನನ್ನ ಅಪ್ಪಾಜಿಯ ನಟನೆ ಅಂದರೆ ತುಂಬಾ ಅಭಿಮಾನ. ಆದ್ದರಿಂದ ನಾನು ಹೀಗೆ ಚುಡಾಯಿಸಿದಾಗಲೆಲ್ಲ ನನ್ನನ್ನು ಅಟ್ಟಿಸಿಕೊಂಡು ಬಂದು ಬೆನ್ನ ಮೇಲೆ ಗುದ್ದುತ್ತಿದ್ದಳು.

ಆದರೆ ನಾನೇ ಆಕೆಯನ್ನು ಹಾಗೆ ಚುಡಾಯಿಸುತ್ತಿದ್ದದ್ದನ್ನು ಮರೆತಿದ್ದೆ. ಆದರೆ ನನ್ನ ಮೊದಲ ಸಿನಿಮಾ ನೋಡಿದಾಗ ಅಜ್ಜಿಗೆ ಆ ದಿನಗಳಲ್ಲಿ ನಾನು ಹೇಳುತ್ತಿದ್ದ ಮಾತುಗಳು ನೆನಪಾದವೋ ಏನೋ? ಆ ಚಿತ್ರ ಮುಗಿದ ಕೂಡಲೇ

26

ನಿರೂಪಣೆ: ಸದಾಶಿವ ಶೆಣೈ



ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!

ಅಜ್ಜಿ ಲಕ್ಷ್ಮಮ್ಮ ನನ್ನನ್ನು ಅಪ್ಪಿಕೊಂಡು ಮುದ್ದಾಡಿದಳು, ನನ್ನ ಕೆನ್ನೆಗೆ ಲೊಚಲೊಚನೆ ಮುತ್ತುಕೊಟ್ಟಳು! "ನೀನು ತಮಾಷೆಗೆ ಹೇಳುತ್ತೀಯಾ ಅಂತ ಅಂದುಕೊಂಡಿದ್ದೇ ಕಣೋ... ನಿಜಕ್ಕೂ ನೀನು ಮುತ್ತುರಾಜನನ್ನು ಮೀರಿಸಿ ನಟಿಸಿದ್ದೀಯಾ" ಎಂದು ಅಜ್ಜಿ ಹೇಳಿದಾಗ ಆಕೆಯ ಕಣ್ಣಲ್ಲಿ ಮಾತ್ರವಲ್ಲ, ನನ್ನ ಕಣ್ಣಲ್ಲೂ ನೀರ ಹನಿ ಇಳಿಯಿತು.

ಸಿನಿಮಾ ನೋಡಿದ ಮನೆಯವರೆಲ್ಲಾ ಥ್ರಿಲ್ಲಾಗಿದ್ದರು, ಎಕ್ಸೈಟಾಗಿದ್ದರು. ನನ್ನ ಅಪ್ಪಾಜಿ-ಅಮ್ಮ ಕೂಡ ಬೆನ್ನು ತಟ್ಟಿ, ಸಿಹಿಯನ್ನು ಬಾಯಲ್ಲಿಟ್ಟು ಅಭಿನಂದಿಸಿದರು. ಅವರೆಲ್ಲರ ಮಾತುಗಳು ನನಗೆ ಆನಂದ ನೀಡಿದರೂ, ನನ್ನೊಳಗಿನ ಅಳುಕು ಕಡಿಮೆ ಆಗಲಿಲ್ಲ, ಯಾಕೆಂದರೆ "ಮನೆಯವರು ಯಾವತ್ತೂ ಹೊಗಳುವುದು ಇದ್ದೇ ಇದೆ. ಜನ, ಅಭಿಮಾನಿ ದೇವರುಗಳು ಹೊಗಳಬೇಕು" ಎಂದು ಅಪ್ಪಾಜಿ ಹೇಳುತ್ತಿದ್ದ ಮಾತುಗಳು ನನ್ನ ಕಿವಿಯಲ್ಲಿ ಗುನುಗುನಿಸುತ್ತಿದ್ದವು.

ಹೀಗಾಗಿ 'ಆನಂದ್' ಚಿತ್ರಕ್ಕೆ ಪ್ರೇಕ್ಷಕರ ಪ್ರತಿಕ್ರಿಯೆಗಾಗಿ ಕಾಯುತ್ತಿದ್ದೆ. ಕೊನೆಗೂ ಆ ದಿನ ಬಂದೇಬಿಟ್ಟಿತು. ಜೂನ್ 19ರಂದು ಚಿತ್ರ ಬಿಡುಗಡೆಯಾದಾಗ ತುಂಬಾ ಟೆನ್ಸ್ ಆಗಿದ್ದೆ. ಆದರೆ ಚಿತ್ರ ಗೆದ್ದೇ ಗೆಲ್ಲುತ್ತೆ ಎಂಬ ವಿಶ್ವಾಸ ನಮ್ಮ ಮನೆಯವರೆಲ್ಲರ ಅಭಿಪ್ರಾಯವಾಗಿತ್ತು. ಏಕೆಂದರೆ ಇಂತಹ ಅದೆಷ್ಟೋ ಚಿತ್ರಗಳನ್ನು ನಿರ್ಮಿಸಿ ರಿಲೀಸ್ ಮಾಡಿದ ಅನುಭವ ಅವರಿಗಿತ್ತು. ಆದರೆ ನನ್ನ ಆತಂಕವನ್ನು ನಾನು ಯಾರ ಬಳಿ ಹೇಳಲಿ?

ಚಿತ್ರ ಬಿಡುಗಡೆಯಾದಾಗ ಯಾವುದೇ ಥಿಯೇಟರ್ ಬಳಿ ಪ್ರೇಕ್ಷಕರ ಪ್ರತಿಕ್ರಿಯೆ ನೋಡುವ ಗೋಜಿಗೆ ಹೋಗದೆ ಮನೆಯಲ್ಲೇ ಕುಳಿತುಕೊಂಡೆ. ಆದರೆ ಇಂಟರ್‌ವಲ್ ಆದ ತಕ್ಷಣ ಥಿಯೇಟರ್ ಮ್ಯಾನೇಜರ್ ಫೋನ್ ಮಾಡಿ "ಚಿತ್ರಕ್ಕೆ ಒಳ್ಳೆ ರೆಸ್ಪಾನ್ಸ್ ಸಿಕ್ಕಿದೆ, ನೀವು ಥಿಯೇಟರ್‌ಗೆ ಬರಬೇಕು" ಎಂದು ಹೇಳಿದಾಗ ನನಗೆ ಸಂತೋಷವಾಯಿತು.

ನಾನು ಸಂಭ್ರಮದಿಂದ ಥಿಯೇಟರ್ ಕಡೆ ಹೊರಟೆ. ಆಗಷ್ಟೇ ಮೊದಲ ಶೋ ಮುಗಿದಿತ್ತು, ಒಂದೆಡೆ ಜನ ಹೊರಗೆ ಬರುತ್ತಿದ್ದರೆ, ಇನ್ನೊಂದೆಡೆ ಮುಂದಿನ ಶೋಗಾಗಿ ಜನ ಒಳಗೆ ಹೋಗುವ ತರಾತುರಿಯಲ್ಲಿದ್ದರು. ಆಗ ಯಾರೋ ನನ್ನನ್ನು ಗುರುತಿಸಿ "ಏಯ್ ಗುರೂ, ಶಿವಣ್ಣ ಬಂದಿದ್ದಾನೆ ನೋಡೋ..." ಎಂದು ದೊಡ್ಡದಾಗಿ ಹೇಳಿದ. ಜನರೆಲ್ಲಾ ಬಂದು ನನಗೆ ಮುತ್ತಿಗೆ ಹಾಕಿದರು. ಆ ಗೊಂದಲದಲ್ಲಿ ಅದೇನಾಯಿತೋ ಗೊತ್ತಿಲ್ಲ! ಆ ಜನರಿಂದ ಕಷ್ಟಪಟ್ಟು ಬಿಡಿಸಿಕೊಂಡು ಬಂದು ನೋಡುತ್ತೇನೆ, ನನ್ನ ಷರ್ಟು-ಪ್ಯಾಂಟು ಎಲ್ಲವನ್ನೂ ಹರಿದುಹಾಕಿದ್ದರು! ನನಗೆ ಗಾಬರಿ, ಕನ್‌ಫ್ಯೂಶನ್, ಎಲ್ಲ ಒಮ್ಮೆಲೇ ಆಯಿತು. ಚಿತ್ರ ಚೆನ್ನಾಗಿಲ್ಲ ಎಂಬ ಕಾರಣಕ್ಕೆ ಹೀಗೆ ನನ್ನ ಬಟ್ಟೆಯನ್ನು ಹರಿದು ಹಾಕಿದರೋ, ಅಥವಾ ಚೆನ್ನಾಗಿದೆ ಎಂದು ತಮ್ಮ ಅಭಿಮಾನವನ್ನು ಹೀಗೆ ವ್ಯಕ್ತಪಡಿಸಿದರೋ ಅಂತ ಗೊತ್ತಾಗಲಿಲ್ಲ.

ಅಷ್ಟೊತ್ತಿಗೆ ಅಲ್ಲಿದ್ದ ಒಂದು ಗುಂಪು "ಶಿವರಾಜ್ ಕುಮಾರ್‌ಕೀ ಜೈ" ಎಂದು ಜೈಕಾರ ಹಾಕುತ್ತಾ ಥಿಯೇಟರ್ ಒಳಗಡೆ ನುಗ್ಗಿತು. ಹೊರಗೆ ನಾಲ್ಕೈದು ಗುಂಪಿನವರು ನನ್ನ ಸ್ಟಾರ್‌ಗಳನ್ನು ಹೊತ್ತುಕೊಂಡು ಹೋಗುತ್ತಿದ್ದರು. ಇದೆಲ್ಲ ಕನಸೋ... ನನಸೋ.... ಎಂದು ನಾನು ರೋಮಾಂಚನಗೊಂಡು ನೋಡುತ್ತಿದ್ದೆ. ಆ ಕ್ಷಣದ ರೋಮಾಂಚನ... ನನ್ನ ಜೀವನದಲ್ಲಿ ಮತ್ತೊಮ್ಮೆ ಸಿಗಲೇ ಇಲ್ಲ.

ಮನೆಯಲ್ಲಿ ಎಲ್ಲರ ಬಾಯಲ್ಲೂ 'ಆನಂದ್' ಚಿತ್ರದ ಯಶಸ್ಸಿನ ಬಗ್ಗೆ ಮಾತುಗಳು. ಮೈಸೂರಿನಲ್ಲಿ ಎಲ್ಲ ಶೋಗಳು ಫುಲ್ಲಂತೆ, ಮಂಡ್ಯದಲ್ಲಿ ಟಿಕೆಟ್ ಸಿಕ್ಕಿಲ್ಲ ಎಂದು ಗಲಾಟೆ ಆಗುತ್ತಿದೆಯಂತೆ, ಹುಬ್ಬಳ್ಳಿಯಲ್ಲಿ ಒಂದು ವಾರದ ಟಿಕೆಟ್‌ಗಳನ್ನು ಅಡ್ವಾನ್ಸಾಗಿ ಕೊಟ್ಟು ಬಿಟ್ಟಿದ್ದಾರಂತೆ, ಬೆಳಗಾವಿಯಂತಹ ಪ್ರದೇಶದಲ್ಲೂ ಚಿತ್ರ ಸೂಪರ್‌ಹಿಟ್ ಅಂತೆ... ಇಂತಹ ಸಂದೇಶದ ಕರೆಗಳು ಅವತ್ತು ನಮ್ಮ ಮನೆಗೆ ಬರುತ್ತಲೇ ಇದ್ದವು.

ಇದನ್ನೆಲ್ಲ ಕೇಳಿ ನನಗೆ ಸಂತೋಷವಾಗಿತ್ತು ನಿಜ. ಆದರೆ ನನ್ನನ್ನು ಇನ್ನೊಂದು ಭಯ ಕಾಡುತ್ತಿತ್ತು. ಜನರೇನೋ ನನ್ನ ಚಿತ್ರವನ್ನು ಮೆಚ್ಚಿದ್ದರು, ಆದರೆ ವಿಮರ್ಶಕರು ಇಷ್ಟ ಪಡಬೇಕಲ್ಲ?! ಪತ್ರಿಕೆಯವರು ನನ್ನ ಬಗ್ಗೆ ಏನು ಬರೆಯುತ್ತಾರೋ? ಎಂಬ ಆತಂಕ ನನಗಿತ್ತು.

ಹೀಗಾಗಿ ರಾಜ್ಯದ ಎಲ್ಲೆಡೆ ಜನ ಚಿತ್ರವನ್ನು ಇಷ್ಟಪಟ್ಟ ಸುದ್ದಿ ಬರುತ್ತಿದ್ದರೂ ನಾನು ಭಾನುವಾರ ಪ್ರಕಟವಾಗುವ ಚಿತ್ರ ವಿಮರ್ಶೆಗಳಿಗೆ ಕಾದು ಕುಳಿತೆ. ಜೂನ್ 22ರಂದು ನನ್ನ ಪತ್ನಿಯ ಹುಟ್ಟಿದ ಹಬ್ಬ. ಅದರ ಮುನ್ನಾದಿನ, ಅಂದರೆ 21ರಂದು, ಎಲ್ಲಾ ಪತ್ರಿಕೆಗಳಲ್ಲೂ ವಿಮರ್ಶೆಗಳು ಬಂದವು. ಬೇಗ್ಗೆ ಕರ್ನಾಟಕದ ಎಲ್ಲ ಪತ್ರಿಕೆಗಳನ್ನು ತರಿಸಿದೆ. ಅವರೆಲ್ಲಾ ಏನು ಬರೆದಿದ್ದರು ಗೊತ್ತಾ?

(ಮುಂದುವರೆಯುವುದು)

ಶೆಣೈ

ಬೆಳದಿಂಗಳು ಚೆಲ್ಲಿದಳು ಚಂದ್ರಿಕೆ

"ನಿಮಗೂ ಮಂಜುಳಾ ಗುರುರಾಜ್ ಅವರಿಗೂ ಸಂಬಂಧವಿದೆಯಾ?" ಅಮೆರಿಕದ 'ಅಕ್ಕ' ಸಮ್ಮೇಳನದಲ್ಲಿ ಈ ಪ್ರಶ್ನೆಯನ್ನು ಹಿನ್ನೆಲೆ ಗಾಯಕಿ ಚಂದ್ರಿಕಾ ಗುರುರಾಜ್ ಹಲವಾರು ಬಾರಿ ಎದುರಿಸಬೇಕಾಯಿತು. ಮಂಜುಳಾಗೂ, ಚಂದ್ರಿಕಾಗೂ ಯಾವುದೇ ಸಂಬಂಧ ಇರದಿದ್ದರೂ ಈ ಪ್ರಶ್ನೆಯನ್ನು ಅಮೆರಿಕದಲ್ಲಿನ ಕನ್ನಡಿಗರು ಕೇಳಿದ್ದಕ್ಕೆ ಕಾರಣ ಅವರ ಹಾಸ್ಯ ಪ್ರಜ್ಞೆಯೋ, ಅಜ್ಞಾನವೋ ಅಥವಾ ಮಂಜುಳಾ ಗುರುರಾಜ್ ಅವರ ಜನಪ್ರಿಯತೆಯೋ ಗೊತ್ತಿಲ್ಲ.

ಆದರೆ ಚಂದ್ರಿಕಾ ಇಂತಹ ಪ್ರಶ್ನೆಗಳಿಂದ ಮುಜುಗರ ಪಡಲಿಲ್ಲ. ಬದಲಾಗಿ ತಮ್ಮ ಹಾಡುಗಳಿಂದ ಉತ್ತರಿಸಿದರು. ಕನ್ನಡ ಚಲನಚಿತ್ರಗಳಲ್ಲಿರುವ ಕವಿ ಹಾಡುಗಳು ಚಂದ್ರಿಕಾಳ ಟ್ರಂಪ್‌ಕಾರ್ಡ್ ಆಯಿತು. ದೋಣಿ ಸಾಗಲಿ.., ಮೂಡಲ ಮನೆಯಾ...., ಒಡನಾಡಿ ಬೇಕೆಂದು..., ಇಂದೂ ಎನಗೆ ಗೋವಿಂದಾ...., ಬೇರಿದ ಹೂವ ಮಾಲೆಗಳಾ.... ಮೊದಲಾದ ಹಾಡುಗಳು ಚಂದ್ರಿಕಾಳನ್ನು ರಾತ್ರೋರಾತ್ರಿ ಅಮೆರಿಕದಲ್ಲಿ ಸ್ಟಾರ್ ಸಿಂಗರ್ ಮಾಡಿದವು. ಈ ಕವಿಗಳ ಹಾಡುಗಳನ್ನು ಕೇಳಲು ಅಮೆರಿಕನ್ನಡಿಗರು ಹಾತೊರೆಯುತ್ತಿದ್ದರು ಎಂದೇ ಅರ್ಥವಲ್ಲವೇ?

ಆರಂಭದಲ್ಲಿ "ನೀವ್ಯಾರು?" ಎಂದು ಕೇಳಿದವರೆಲ್ಲ ಚಂದ್ರಿಕಾ ಹಾಡಿದ ನಂತರ "ದೀಪಾವಳಿಗೂ ನಮ್ಮೂರಿಗೆ ನೀವೇ ಬಂದು ಹಾಡಿ" ಎಂದು ಆಹ್ವಾನ ನೀಡಲು ಶುರು ಮಾಡಿದರು.

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಳುಹಿಸಿದ್ದ ಮೂವತ್ತೆರಡು ಜನರ ತಂಡದಲ್ಲಿ ಚಂದ್ರಿಕಾ ಗುರುರಾಜ್ ಸುಗಮ ಸಂಗೀತ ಗಾಯಕಿಯಾಗಿ ಆಯ್ಕೆಯಾದವರು. ಇವರ ಖರ್ಚು-ವೆಚ್ಚವನ್ನೆಲ್ಲಾ ಸರ್ಕಾರ ಭರಿಸಿತು. ಆದರೆ ಇವರಂತಹ ಗಾಯಕರಿಗೆ ಪಕ್ಕವಾದ್ಯ ನುಡಿಸಲು ಕಲಾವಿದರನ್ನು ಕಳುಹಿಸಲಿಲ್ಲ. ಹೀಗಾಗಿ ಚಂದ್ರಿಕಾ ಗುರುರಾಜ್ ಕೂಡಾ ಇಲ್ಲಿಂದ ಅಮೆರಿಕಕ್ಕೆ ಹೋದ ನಂತರ ತಬಲಾ ನುಡಿಸಲು ಶಂಭೂ ಹೆಗ್ಡೆಯವರ ಜೊತೆಯಿದ್ದ ಕೃಷ್ಣಮೂರ್ತಿ, ಕೀಬೋರ್ಡ್ ಬಾರಿಸಲು ಶಬೀರ್ ಮತ್ತು ಗಿಟಾರ್ ಬಾರಿಸಲು ಗೊತ್ತಿದ್ದ ಅಮೆರಿಕನ್ನಡಿಗನೊಬ್ಬ, ಹೀಗೆ ಹಲವರನ್ನು ಕೇಳಿ ಒಂದು ತಂಡವನ್ನು ರೂಪಿಸಿಕೊಂಡರು.

ಹಾಡುಗಾರರ ಇಂತಹ ಪ್ರಾಕ್ಟಿಕಲ್ ಕಷ್ಟಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳಿಗೆ ಗೊತ್ತಾಗದಿರುವುದು ವಿಚಿತ್ರ. ಒಬ್ಬ ಗಾಯಕ ಅಥವಾ ಗಾಯಕಿ ಒಬ್ಬರೇ ಹೋಗಿ ಕನ್ನಡದ ಕಂಪನ್ನು ಹೇಗೆ ತಾನೆ ಪಸರಿಸಲು ಸಾಧ್ಯ?

"'ಅಕ್ಕ' ಸಮ್ಮೇಳನದಲ್ಲಿ ಎಲ್ಲ ಕನ್ನಡಿಗರು ಪ್ರೀತಿಯಿಂದಲೇ ಮಾತನಾಡಿಸಿದರು. ಅಷ್ಟೇ ಅಲ್ಲ ಮುಂದಿನ ವರ್ಷ ಹಲವಾರು ಕಾರ್ಯಕ್ರಮಗಳಿಗೆ ಹಾಡಲು ನನ್ನನ್ನು ಈಗಾಗಲೇ ಬುಕ್ ಮಾಡಿಕೊಂಡಿದ್ದಾರೆ. ವಿದೇಶದಲ್ಲಿ ಇದು ನನ್ನ ಮೊದಲ ಕಾರ್ಯಕ್ರಮ. ಇದು ಯಶಸ್ವಿಯಾಗಿತ್ತು ಎಂಬ ನಂಬಿಕೆ ನನ್ನದು" ಎಂದರು ಚಂದ್ರಿಕಾ.

"ನಾನು ಸಿನಿಮಾಕ್ಕೆ ಹಾಡಿದ ಅನೇಕ ಹಾಡುಗಳನ್ನು ಅಮೆರಿಕನ್ನಡಿಗರು ಇಂಟರ್‌ನೆಟ್‌ನಿಂದ ಡೌನ್‌ಲೋಡ್ ಮಾಡಿಕೊಂಡಿದ್ದಾರೆ. ಅದನ್ನೆಲ್ಲ ಅವರು ಹೇಳಿದಾಗ ನಾನು ಸಂತೋಷಪಟ್ಟೆ. ಇಲ್ಲಿಯ ಗಾಂಧಿನಗರದ ಜನ ನನ್ನನ್ನು ಗುರುತಿಸದಿದ್ದರೂ ಅಮೆರಿಕದಲ್ಲಿನ ಕನ್ನಡಿಗರು ನನಗೆ ತೋರಿಸಿದ 'ಅಕ್ಕ'ರೆಯನ್ನು ಹೇಗೆ ತಾನೆ ಮರೆಯಲು ಸಾಧ್ಯ?" ಎಂಬ ಸಂತೋಷ ಚಂದ್ರಿಕಾ ಗುರುರಾಜ್ ರವರದ್ದು.

ದುಬಾರಿ ನಾಯಕಿ ಜಯಂತಿ!



ಅಭಿನಯ ಶಾರದೆ ಜಯಂತಿಯವರು ಕನ್ನಡ ಚಿತ್ರರಂಗದಲ್ಲಿ ಅತ್ಯಂತ ದುಬಾರಿ ನಟಿಯಾಗಿದ್ದರು ಎಂದರೆ ಯಾರೂ ನಂಬುವುದಿಲ್ಲ, ಆದರೆ ಈ ಮಾತು ನಿಜ.

ರಾಜ್‌ಕುಮಾರ್‌ಗಿಂತ ಕಲ್ಯಾಣ್ ಕುಮಾರ್ ಹೆಚ್ಚು ಸಂಭಾವನೆ ಪಡೆಯುತ್ತಿದ್ದ ಕಾಲವೊಂದಿತ್ತು, ಆ ಸಂದರ್ಭದಲ್ಲೇ ಜಯಂತಿ ಕಲ್ಯಾಣ್ ಕುಮಾರ್‌ಗಿಂತಲೂ ಹೆಚ್ಚು ಸಂಭಾವನೆ ಪಡೆದದ್ದೂ ಉಂಟು. ಅಂದರೆ ಅಂದಿನ ಕಾಲದಲ್ಲಿ ನಾಯಕರಿಗಿಂತ ನಾಯಕಿಯರಿಗೇ ಹೆಚ್ಚು ಸಂಭಾವನೆ ನೀಡುತ್ತಿದ್ದರು.

ಇದೆಲ್ಲಾ ಇಲ್ಲಿ ಈಗ ಹೇಳಲು ಕಾರಣವಾದದ್ದು ಈಗ ಬಿಡುಗಡೆಯಾಗಿರುವ 'ಸಾವಿರ ಮೆಟ್ಟಿಲು' ಚಿತ್ರ. ಈ ಚಿತ್ರದ ನಾಯಕ ಕಲ್ಯಾಣ್ ಕುಮಾರ್‌ಗೆ ನಿರ್ಮಾಪಕರಾದ ಬಸವೇಗೌಡರು ನೀಡಿದ್ದು ಐದು ಸಾವಿರ ರೂಪಾಯಿಗಳು. ಇದರ ನಾಯಕಿ ಜಯಂತಿ ಪಡೆದ ಸಂಭಾವನೆ ಎಷ್ಟು ಗೊತ್ತಾ? ಆರು ಸಾವಿರ ರುಪಾಯಿಗಳು. ಇದು ಮೂವತ್ತೆಂಟು ವರ್ಷಗಳ ಹಳೆಯ ಕತೆ!

ಪುಟ್ಟಣ್ಣ ಬದುಕಿದ್ದಾರ?




ಮೂವತ್ತೆಂಟು ವರ್ಷಗಳ ಹಿಂದೆ ಪುಟ್ಟಣ್ಣ ಕಣಗಾಲ್ ಅವರು ಆರಂಭಿಸಿದ್ದ 'ಸಾವಿರ ಮೆಟ್ಟಿಲು' ಎಂಬ ಚಿತ್ರ ಈಗ ಬಿಡುಗಡೆಯಾಗಿದೆ. ಪುಟ್ಟಣ್ಣ ಮುಗಿಸದೇ ಇದ್ದ ಭಾಗವನ್ನು ಅವರ ಶಿಷ್ಯ ಕೆ.ಎಸ್.ಎಲ್. ಸ್ವಾಮಿ (ರವಿ) ಸಂಪೂರ್ಣಗೊಳಿಸಿದ್ದಾರೆ.

ಈ ಚಿತ್ರ ನೋಡಿದಾಗ ಒಂದು ವಿಚಿತ್ರ ಅನುಭವವಾಗುತ್ತದೆ. ಇಪ್ಪತ್ತರ ಹರೆಯದ ಯೌವ್ವನದ ಜಯಂತಿ ಮತ್ತು ಅರವತ್ತರ ಇಳಿವಯಸ್ಸಿನ ಜಯಂತಿಯನ್ನು ಒಂದೇ ಚಿತ್ರದಲ್ಲಿ ನೋಡಬಹುದು. ಇದಕ್ಕಿಂತಲೂ ಮುಖ್ಯವಾಗಿ ನಲವತ್ತು ವರ್ಷ ಹಿಂದೆ ಕಪ್ಪು ಬಿಳುಪಿನಲ್ಲಿ ಚಿತ್ರೀಕರಿಸಿದ ಕೆಲವು ದೃಶ್ಯಗಳು ಕುತೂಹಲಕಾರಿಯಾಗಿವೆ. ಇನ್ನೂ ಕೆಲವು ತಮಾಷೆಯಾಗಿವೆ. ಡೈಲಾಗ್‌ಗಳು ಬುಕಿಷ್ ಆಗಿವೆ. ಹಾಗೆಯೇ ನಾಯಕ ನಾಯಕಿಯರ ಉಡುಪುಗಳು ಸಖತ್ ಮಜಾ ನೀಡುತ್ತವೆ. ಇಷ್ಟಾಗಿಯೂ ಈ ಸಿನಿಮಾವನ್ನು ನಿರ್ಲಕ್ಷಿಸುವಂತಿಲ್ಲ, ಈಗ ಬರುವ ಹೊಡಿ, ಬಡಿ, ಕಡಿ ಸಿನಿಮಾಗಳಿಗಿಂತ ಇದು ಎಷ್ಟೋ ಹೆಚ್ಚು ಸಂತೋಷವನ್ನು ನೀಡುತ್ತದೆ.

"ಪುಟ್ಟಣ್ಣ ಮತ್ತೊಮ್ಮೆ ಹುಟ್ಟಿ ಬಾ" ಎಂದು ನಮ್ಮ ಸಿನಿಮಾದವರು ಎಷ್ಟೋ ಬಾರಿ ಆರ್ಭಟಿಸಿದ್ದು ಉಂಟು. ಆದರೆ ಈ ಸಿನಿಮಾ ಬಿಡುಗಡೆಯಾದ ಮೊದಲ ಪ್ರದರ್ಶನಕ್ಕೆ ಬಂದಿದ್ದು ಕೇವಲ ಇಪ್ಪತ್ತೆರಡು ಜನ ಮಾತ್ರ. ಈಗ ನೀವೇ ಹೇಳಿ ಪುಟ್ಟಣ್ಣ ಇನ್ನೂ ನಮ್ಮ ನಡುವೆ ಬದುಕಿದ್ದಾರಾ? ಅದೇನೇ ಇರಲಿ ಇಂತಹ ಅಪರೂಪದ ಸಾಧನೆಗೆ ಕಾರಣಕರ್ತರಾಗಿರುವ ನಿರ್ಮಾಪಕ ಬಸವೇಗೌಡರಿಗೊಂದು ನಮಸ್ಕಾರ ಹೇಳಲೇಬೇಕು.

ಕೋರ್ಟಿಗೆ ಹೋದ ಫುಟ್‌ಪಾತ್ ಮಂದಿ!



ಕೇರಾಫ್ ಫುಟ್‌ಪಾತ್ ಚಿತ್ರ ಈಗಾಗಲೇ ಹಲವು ದಾಖಲೆಗಳನ್ನು ಸೃಷ್ಟಿಸಿರಬಹುದು. ಆದರೆ ಯಾರೂ ಮಾಡದಿದ್ದ ಒಂದು ವಿಶೇಷವಾದ ದಾಖಲೆಯನ್ನು ಇದರ ನಿರ್ಮಾಪಕರು ಮಾಡಲು ಹೊರಟಿದ್ದಾರೆ.

ಈ ಚಿತ್ರದ ಸಬ್ಸಿಡಿಗೆ ಸಂಬಂಧಪಟ್ಟಂತೆ ಇದರ ನಿರ್ಮಾಪಕರು ಈಗ ಸರ್ಕಾರದ ವಾರ್ತಾ ಇಲಾಖೆಯ ವಿರುದ್ಧ ಕೋರ್ಟಿಗೆ ಹೋಗಿದ್ದಾರೆ. ಸಬ್ಸಿಡಿಗೆ ಅರ್ಜಿ ಸಲ್ಲಿಸಲು ಮಾರ್ಚ್ 31 ಕೊನೆಯ ದಿನಾಂಕ ಎಂದು ಬಾದಾಮಿ ಹೌಸಿನ ಅಧಿಕಾರಿಗಳು ಹೇಳಿ ಇವರ ಅರ್ಜಿಯನ್ನು ತಿರಸ್ಕರಿಸಿದ್ದರಂತೆ. ಆದರೆ ಹಾಗಂತ ನೀವು ಎಲ್ಲೂ ಪ್ರಕಟಣೆ, ಜಾಹಿರಾತು ನೀಡಿಲ್ಲ ಎಂಬುದು ನಿರ್ಮಾಪಕರ ವಾದ. ಅಧಿಕಾರಿಗಳು ಇವರ ವಾದವನ್ನು ಒಪ್ಪದಿದ್ದಾಗ ಫುಟ್‌ಪಾತ್‌ನವರು ನೇರವಾಗಿ ಕೋರ್ಟಿಗೆ ಹೋಗಿದ್ದಾರೆ. ಮುಂದಿನ ವಿಷಯ ಕೋರ್ಟು-ಕಛೇರಿಯಿಂದಲೇ ಬರಬೇಕಾಗಿದೆ.

ತಲ್ಲಂ-ಕುಲ್ಲಂ!



ಇನ್ನೆರಡು ವರ್ಷಗಳಲ್ಲಿ ಎಂಬತ್ತು ವರ್ಷ ಪೂರೈಸಲಿರುವ ತಲ್ಲಂ ನಂಜುಂಡಶೆಟ್ಟಿ ಎಂಬ ಉತ್ಸಾಹಿ ವಯೋವೃದ್ಧ ಈಗ ಚಲನಚಿತ್ರ ವಾಣಿಜ್ಯಮಂಡಳಿಯ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಪ್ರತೀ ವರ್ಷ ನಡೆಯುವ ಹಣಾಹಣಿ ... ಸೋಲುವವರಾಗಿದ್ದ ತಲ್ಲಂ ಚಮತ್ಕಾರದ ರೀತಿಯಲ್ಲಿ ಗೆದ್ದಿದ್ದಾರೆ. ವಾಸ್ತ... ವೀರೇಶ್ ಚಿತ್ರಮಂದಿರದ ಚಂದ್ರಶೇಖರ್ ಅಧ್ಯಕ್ಷ ಸ್ಥಾನಕ್ಕೇರುವುದು ಬಹು... ಖಚಿತವಾಗಿತ್ತು, ಆದರೆ ಕೊನೆ ಗಳಿಗೆಯಲ್ಲಿ ತಲ್ಲಂ ಅವರ ಜಾಣ್ಮೆ ... ಅನುಭವದ ಎದುರು ಚಂದ್ರಶೇಖರ್ ಸೋಲಬೇಕಾಯಿತು.

ತಲ್ಲಂ ಮಾಡಿದ್ದಿಷ್ಟೇ: 'ನಾನು ಅಂದು ರಾಜ್‌ಕುಮಾರ್ ಅವರ ವಿರು... ಹೋರಾಟದಲ್ಲಿ ನಿಮ್ಮನ್ನು ಬೆಂಬಲಿಸಿದ್ದೆ. ಆದ್ದರಿಂದ ದಯವಿಟ್ಟು ನ... ಈ ಬಾರಿ ಛೇಂಬರ್ ಅಧ್ಯಕ್ಷನನ್ನಾಗಿ ಮಾಡಿ' ಎಂದು ತಲ್ಲಂ ಮುಖ್ಯಮ... ಕುಮಾರಸ್ವಾಮಿ ಎದುರು ಅಂಗಲಾಚಿದ್ದರು. ಆಗ ಬೇರೆ ಉಪಾ... ಕಾಣದೆ ಸಿಎಂ ಸೀದಾ ಚಂದ್ರಶೇಖರ್‌ಗೆ ಫೋನಾಯಿಸಿ ನಾಮ... ಹಿಂತೆಗೆದುಕೊಳ್ಳುವಂತೆ ವಿನಂತಿಸಿದರು. ಸಿಎಮ್ಮೇ ರಿಕ್ವೆಸ್ಟ್ ಮಾಡಿದ ನ... ಚಂದ್ರಶೇಖರ್ ಹಿಂದೆ ಸರಿಯಬೇಕಾಯಿತು. ಅಲ್ಲಿಗೆ ತಲ್ಲಂ ಮೂ... ಬಾರಿಗೆ ಛೇಂಬರ್ ಅಧ್ಯಕ್ಷರಾದರು.



ರಕ್ಷಿತಾ 'ತನನಂ ತನನಂ'

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4. Ph...
Fax : 26604536, E-mail :lankesh70@rediffmail.com, Printed at ...